ಕರ್ಮವೀರ

ಸಂಪುಟ ೨೦] [ಸಂಚಿಕೆ ೬

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ
ಎಂ. ಎ.

ಸಂಸ್ಥಾಪಕ—ನಿರ್ದೇಶಕರು:
ರಂ. ರಾ. ದಿವಾಕರ
ಘಟನಾ ಸಮಿತಿ ಸದಸ್ಯರು

"ಕಿಚವ ಕಂಡವರಿಲ್ಲ
ಚ ಕಾಣು ವಂತಿಲ್ಲ
[illegible] ಮುಳಲ ಹುಡಿಗಿಂತ ಕೀಳೇ !
ಕಂಡಿಹೆನೆಂಬ
ಕಣ್ಣು ಜಂಭದ ಹುಂಬ!
ಮುಳಲ ಹುಡಿ ಗುಟ್ಟೇನು ಕಣ್ಣು ಕೂಳೇ !

ಕಣ್ಣು ಕದಿರಿನ ಕೈಯು
ಹಿಲುಕದಾಚೆಯು ಮೈಯು
ನಿಜಕೆ ತೆಕ್ಕೆಯು ಬಿದ್ದ ವಸ್ತುವಲ್ಲ !
ಜದ ನೆಲೆ ನಿಜಕಿಲ್ಲ-
ದನು ಬಲ್ಲವ ಬಲ್ಲ,
ಅವರ ತಿರುಳನೆ ತಿಂದೆಯೆಂಬೆಯಲ್ಲ !

ಮುಳಲಹುಡಿಯೊಂದು ಹಿಡಿ,
ನ್ನ ಹಿಡಿಯಲ್ಲಿ ಹಿಡಿ
ವರ ಕತೆಯೇನು? ಗತಿಯೇನು ?

ಬಾಳು

ರೂಪ ತ್ರೇತಾಯುಗದ
ಾಳಾದ ಹಳೆ ಜಗದ
ಳಕು ಬೆಳಕಿಲ್ಲಿ ಮುದ್ರಿಸುವುದು ಹೇಳು !

ರಿ ಮೇಲು ಹರ ಮೇಲು,
ರಿಯು ಬರಿಸದ ಸಾಲು,
ಗುಣಿತ ತಿದ್ದಿದಲು-ಬಳ್ಳಿ ಬದುಕೇ !
[illegible]ದು-ಅದು ಒಂದು,
ರಡೊಂದು ಎಂದೆಂದು,
ಂತೆ ಮುಗ್ಗಿಯು ಕುಣಿತ ಬೇಕೆ ಇದಕೆ ?"

—ಅಂಬಿಕಾತನಯದತ್ತ

ಹುಬ್ಬಳ್ಳಿ
೨೪—೫—೪೮

ರಾಯಭಾರಿ ಆಸಫ ಅಲ್ಲಿ

ಚತುರ ವಾಗ್ಮಿ, ನಿಷ್ಠಾವಂತ ರಾಷ್ಟ್ರೀಯ ಆಸಫಅಲ್ಲಿಯವರನ್ನು ನೆಹರೂ ಸರಕಾರ ಕಳೆದ ವರುಷ ಅಮೇರಿಕೆಯಲ್ಲಿ ಹಿಂದೀ ರಾಯಭಾರಿಯಾಗಿ ಕಳಿಸಿತು. ೧೪ ತಿಂಗಳ ನಂತರ್ಯ ಅವರು ಅಂಥ ಮಹತ್ವದ್ದೇನನ್ನೂ ಸಾಧಿಸದೆ ಸ್ವದೇಶಕ್ಕೆ ಹಿಂದಿರುಗಿದರು. ಆದರೆ ಅವರ ರಾಯಭಾರ ನಿಜವಾಗಿ ವ್ಯರ್ಥವಾಯಿತೆ ? ಪುಟ ೫ ರಲ್ಲಿ ನಾಡಿಗ ಕೃಷ್ಣಮೂರ್ತಿಯವರ ಲೇಖನವನ್ನೋದಿರಿ.

ಉಪಾಯ ವೇದಾಂತ

—ನಾ. ಕಸ್ತೂರಿ

—ಪುಟ ೨

KARMAVEER - Kannada Illustrated Weekly - HUBLI

INDIA 2 ANNAS 194

ಉಪಾಯ ವೇದಾಂತ

ಬರೆದವರು: ಪ್ರೊ. ನಾ. ಕಸ್ತೂರಿ, ಎಂ. ಎ., ಬಿ. ಎಲ್.

ಮನುಷ್ಯನಿಗೆ ಬುದ್ಧಿ ಇದೆ. ನಾವೆಲ್ಲರೂ ನೋಡುತ್ತಿದ್ದೇವೆಯೆ? ಹಾಗೆ ಹಿಡಿದ ಕೆಲಸದಲ್ಲಿ ಶಕ್ತಿ ಸಾಲದು — ಎಂಬುದೇ ಅವನ ಹಾಡು. ಅವನ ಹಾಗೇ ಅವನ ಕಷ್ಟಗಳು. [illegible] ಅವನನ್ನು ಪ್ರತ್ಯಕ್ಷ ಮಾಡುತ್ತಿದೆ. ನಾವೆಲ್ಲ [illegible] ನಮ್ಮ ಪ್ರತಿನಿಧಿಗಳ [illegible] ನಾವು ಪ್ರಯತ್ನಿಸಿ, ಅವರನ್ನು [illegible] ಅವರ ಎದೆಯ ಮೇಲೆ ನಿಂತು, ನಮ್ಮ [illegible] ಸಾಧಿಸಿಕೊಳ್ಳುತ್ತೇವೆ. ಇದರಿಂದ [illegible] ನಾವು ಕೃತಾರ್ಥರಾಗುತ್ತೇವೆ. [illegible]

[illegible]

ಬಾಯಲ್ಲಿ ಒಂದು ಬಾರಿ ಉಚ್ಚರಿಸಿದವರಿಗೆ ಪುನರ್ಜನ್ಮವೇ ಇಲ್ಲ; ಅದರ ಮೇಲೆ ಅಷ್ಟು ಸಲ ಒಂದು ಕೋಟಿ ಸಲ [illegible] ಓದಿ ತಿಳಿದು ಅಧ್ಯಯನ ಮಾಡಿದ ಫಲ ದೊರೆಯುತ್ತದೆ... ಇತ್ಯಾದಿ ಹೊಗಳಿ, ಆ ಗ್ರಂಥವನ್ನು ಅಟ್ಟಕ್ಕೇರಿಸಿ ಬಿಟ್ಟು, ಅಂತೆಯೇ, ಹೆಣ್ಣುಮಕ್ಕಳು ದೇವೀಕಮೂರ್ತಿಗಳು, ಅವರನ್ನು ಪೂಜೆ ಮಾಡಬೇಕು, ಅವರನ್ನು ಆರಾಧಿಸಬೇಕು ಎಂದು ಹೊಗಳುತ್ತ ಹೊಗಳುತ್ತ, "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಸ್ಥಿತಿಗೆ ತಂದಿಟ್ಟುಬಿಟ್ಟ.

ದೇವರು ಕರುಣಾಮೂರ್ತಿ ಎಂದಿತು ಮತ. ಬುದ್ಧಿವಂತನಾದ ಮನುಷ್ಯ ಅದಕ್ಕೆ ಅರ್ಥ ಹೇಳುತ್ತ, ಅವರ, ದೇವರ ಕರುಣೆಗೆ ನಾವು ಪಾತ್ರರಾಗಬೇಕು ಎಂದ. ಅದು ಹೇಗೆ? ನಾವು [illegible] ದೇವರ [illegible] ನಾವು ಅವರಿಗೆ [illegible] ದೇವರು, 'ವಾ! ನನ್ನ ಕರುಣು ಕಂದಾ' ಎಂದು ಕರೆದು [illegible] ಈ ವಾದ ಸರಣಿಯ ನ್ಯಾಯ [illegible] ರಾಸ್‌ಪುಟಿನ್ ಎಂಬ ರಾಷ್ಯಸಂನ್ಯಾಸಿ ರಷ್ಯಾದಲ್ಲಿ ತೋರಿಕೊಂಡ. "ಪಾಪ ಕೊಡದಲ್ಲಿ ಬೀಳಿರಿ! ಬನ್ನಿ, ಪಾಪ ಬೀಳಿಸುತ್ತೇನೆ! ನಿಮಗೆ ದೇವರ ದರ್ಶನವಾಗುವುದು" ಎಂದು ಸಾರಿದ. ಸಾವಿರಾರು ಮೆಚ್ಚಿದವರು ಅವನ ಬಲೆಗೆ ಬಿದ್ದರು. "ಶಿಸ್ತು ಒಂದು ಕೆನ್ನೆಗೆ ಯಾರಾದರೂ ಹೊಡೆದರೆ, ಅವರಿಗೆ ಕೂಡಲೇ ನಿಮ್ಮ ಮತ್ತೊಂದು ಕೆನ್ನೆಯನ್ನೂ ತೋರಿಸಿ" ಎಂದು ಏಸು ಹೇಳಿದಹಾಗೆ ಮಾಡಿದರೆ, ಆತನ ಹೃದಯ ಪರಿವರ್ತನೆಯಾಗಿ ಅಹಿಂಸಾ ಮನೋಭಾವವನ್ನೇ ಸ್ವೀಕರಿಸುತ್ತಾನೆ, ಎಂಬುದು ಧರ್ಮೋಪದೇಶ. ಈ ಉಪದೇಶವನ್ನು ಅನುಸರಿಸುವುದು ಬಹು ಕಷ್ಟದ ಕೆಲಸ; ಸಾಮಾನ್ಯರಿಗೆ ಅಸಾಧ್ಯ. ಅದ್ದರಿಂದ, ಉಪಾಯದಿಂದ ಅದನ್ನು ತಗ್ಗಿಸಿಕೊಳ್ಳಬೇಕು. ಅದಕ್ಕಾಗಿ, ಹಲವರು ಕ್ರೈಸ್ತರು ಈ ರೀತಿ ವಿವರಣೆ ಕೊಟ್ಟರು: "ಯಾರಾದರೂ ಬಂದು ನಮ್ಮ ಒಂದು ಕೆನ್ನೆಗೆ ಹೊಡೆದಾಗ ನಾವು ಅವರಿಗೂ ಮತ್ತೊಂದು ಕೆನ್ನೆಯನ್ನೂ ತೋರಿಸುವುದು ನ್ಯಾಯ! ಹಾಗೆ ಮಾಡಿದರೆ, ನಮ್ಮದು ಅಹಿಂಸೆ; ಆತನದು ಹಿಂಸೆ; ನಮಗೆ ಸ್ವರ್ಗ; ಆತನಿಗೆ ನರಕ. ಅದರೆ, ಅತನನ್ನು ಹಿಂಸಾ ಮಾರ್ಗದಿಂದ ಉಳಿಸಲು ಅತನ ಕೈಗಳ ರಕ್ತವನ್ನು ಅಟ್ಟಿ ಹಾಕುವುದೇ ಮೇಲು. ಅದೇ ನಮ್ಮ ಕರ್ತವ್ಯ" ಎಂದರು.

ಸತ್ಯಂ ಬ್ರೂಯಾತ್, ಎಂಬುದು ಧರ್ಮೋಕ್ತಿ. ಅದರೆ ಅನೇಕ ವೇಳೆ ನಾವು ಹೇಳುವ ಸತ್ಯ ಇತರರಿಗೆ ಅಪ್ರಿಯವಾಗಿರುತ್ತದೆ; ಅದಂತೆ ಅದಕ್ಕಾಗಿ ನಮ್ಮ ಮೇಲೆ ರೇಗಿ ಬೀಳುತ್ತಾರೆ [illegible] ನಾನು ಸತ್ಯವನ್ನೆ ಹೇಳುತ್ತೇನೆ ಎಂದು ಹಟ ಹಿಡಿದರೆ, ಪ್ರಾಣಕ್ಕೇನೆ ಅಪಾಯ ಒದಗಬಹುದು. ಅದ್ದರಿಂದ ಉಪಾಯ ವೇದಾಂತಿಗಳು, ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ಎಂಬುದನ್ನು ಶರಣು ಹೋಗುತ್ತಾರೆ. [illegible] ಪ್ರಿಯವಾಗಿರುವುದಕ್ಕಾಗಿ ಸತ್ಯಕ್ಕೆ ಕೊಂಚ ಪರಿಗಂ ಕೊಡಬಹುದೆನ್ನುತ್ತಾರೆ [illegible] ಹೊಸ ಪದಾರ್ಥ ಉತ್ಪನ್ನವಾಗುತ್ತದೆ. ಅನಂತರ [illegible] ಸಾಕು. ಉಪಾಯ ಕೊಂಚ ಕೆಟ್ಟದಾಗಿದ್ದರೂ ಚಿಂತೆ ಇಲ್ಲ, ಒಂದು ಮದುವೆ ಮಾಡುವುದಕ್ಕಾಗಿ ಸಾವಿರ ಸುಳ್ಳನ್ನು ಹೇಳಬಹುದು, ಎಂಬ ಹಳ್ಳಿಗಾದೆ [illegible] ಸುಳ್ಳು ಹೇಳುವುದರಲ್ಲಿ ತಪ್ಪಿಲ್ಲ ಯಾತಕ್ಕಾಗಿ ಸುಳ್ಳು ಹೇಳಿದೆ ಎಂಬುದೇ ಮುಖ್ಯ—ಇದು ಉಪಾಯ ವೇದಾಂತದ ಸೂತ್ರ.

ಪರೋಪಕಾರ ಮಾಡುವುದಕ್ಕಾಗಿಯೇ ನಾವು ಈ ಶರೀರವನ್ನು ಹೊತ್ತು ಬಂದಿ [illegible] ಎಂಬ ಎಲ್ಲ ಧರ್ಮಗಳೂ ಸಾರುತ್ತಿವೆ. ಅದರೆ, ಈ ಪರೋಪಕಾರದ ಹೆಸರಿನಲ್ಲಿ ಮಾನವನು ಕ್ರೌರ್ಯ [illegible] ಹಿಂಸಾಛಲ [illegible] ಪರೋಪಕಾರ [illegible] ಎಂದು ತೋರಿದ್ದನ್ನು ಅದನು ಇತರರಿಗೆಲ್ಲ ಬೋಧಿಸಲು ಹೊರಡುತ್ತಾರೆ [illegible] ಪರೋಪಕಾರ [illegible] "ಪ್ರಾಣ [illegible]" ಎಂಬ ಅಸಹ್ಯ ಪ್ರಚಾರ [illegible] ಪ್ರಾರಂಭ

[illegible] ಜಾತಿಗಳು ಅನೇಕ ಪ್ರತಿಬಂಧಕಗಳನ್ನು [illegible] ನಾವು [illegible]

ಅಲ್ಲದೆ, ಏಷಿಯಾದ ಸುಖಕ್ಕೋಸ್ಕರ ಪರೋಪಕಾರಕ್ಕೆ ಕೈಹಾಕಿದವರು ಬರೀ ಅಲ್ಲಿಗೇ ನಿಲ್ಲಿಸುವದಿಲ್ಲ. ಪೋರ್ಚುಗೀಸ್ ದೇಶದವರು [illegible] ದೇಶಗಳಿಗೆ [illegible] ಇಸ್ಲಾಂ [illegible] ಭಾರತದಿಂದ ಅರೇಬಿಯಾಕ್ಕೆ ತೀರ್ಥಯಾತ್ರೆ ಹೋಗುತ್ತಿದ್ದ [illegible] ಹಡಗುಗಳನ್ನು ಮುಳುಗಿಸುವುದೆಂದರೆ, ಅವರಿಗೆ ಅಗಬಹುಮುಖ್ಯ ಕೆಲಸವೆನಿಸಿತು. ಅದು ಒಂದು ರೀತಿಯ ಮಹೋಪಕಾರವೆಂದು ಅವರು ಭಾವಿಸಿದ್ದರು. ಅಷ್ಟು ಜನ ಮೂರ್ಖರನ್ನು [illegible] ತಪ್ಪಿಸಿದೆವಲ್ಲಾ, ಎಂದು ಅವರು ಹಿಗ್ಗುತ್ತಿದ್ದರು. ನಮ್ಮ ಮತವೇ ಅತ್ಯುತ್ತಮ; ಆದೊಂದೇ ಶಾಶ್ವತ ಸುಖದಾಯಕ; ಅದನ್ನು ನಾವು ಎಲ್ಲರಿಗೂ ಬೋಧಿಸಬೇಕು. ಅದನ್ನು [illegible] ಪ್ರಾಣಿಗಳನ್ನು, ರೋಗಿಯನ್ನು ಹಿಡಿದದುದು ಕೂಡ [illegible] ಔಷಧಿ ಕೊಡುವಂತೆ, ಹಿಂಸೆ ಕೊಟ್ಟಾದರೂ ನರಕದಿಂದ ಉಳಿಸುವುದೇ ಅವರಿಗೆ ನಾವು ಮಾಡಬೇಕಾದ ಉಪಕಾರ— ಎಂದು ವಾದಿಸುತ್ತ, ಮಾನವನ್ನು ದೇವರ ಹೆಸರಿನಲ್ಲಿ ತನಗೆ ಪ್ರಿಯವಾದ ಜಾತಿ ಮತದ್ವೇಷದ ಬೆಂಕಿಗೆ ಪಟ್ಟೋಲಿ ಹುಯ್ಯುತ್ತಾನೆ.

ಅಹಿಂಸೆಯನ್ನು ಉಪದೇಶಿಸಿದ ಬುದ್ಧದೇವನ ಅನುಯಾಯಿಗಳು, ನಿಜ ಭಿಕ್ಷುಗಳೂ ಕೂಡ, ಆ ಆದರ್ಶವನ್ನು ತಮ್ಮ ಮಟ್ಟಕ್ಕೆ ಇಳಿಸಿ ಕೃತಾರ್ಥರಾಗಿದಾರೆ. ಪ್ರಾಣವಧೆ ಮಾಂಸಾಹಾರ ಇವು ಕೂಡದು, ನಿಜ. ಅದರೆ, ನಮ್ಮ ಅಹಾರಕ್ಕಾಗಿ ನಾವು ಕೊಲ್ಲಬಾರದು, ಅಷ್ಟೆ. ಯಾರೋ ಅಬೌದ್ಧ ಜನರಿಗಾಗಿ ಕಟುಕರು ಕೊಂದು ಅಂಗಡಿಯಲ್ಲಿ ಮಾರುವ ಮಾಂಸವನ್ನು ತಿಂದರೆ ತಪ್ಪಿಲ್ಲ, ಎಂಬ ಸಿದ್ಧಾಂತಕ್ಕೆ ಅವರು ಬಂದಿದಾರೆ.

ಹೀಗೆಯೇ, ಲೋಕದಲ್ಲಿ ಶಾಂತಿಯನ್ನು ನೆಲೆಗೊಳಿಸುವುದೇ ನನ್ನಾಸ್ಯರ ಉದ್ದೇಶವಾಗಿರಬೇಕು ಅದ್ದರಿಂದ, ದ್ವಿಜಮುಖ್ಯಗಿಯೂ ಸೋದರ ಜನಾಂಗದ ಕೊಲೆಗಾಗಿಯೂ ಶಕ್ತಿ ಮಸೆಯುವ ಪ್ರತಿಯೊಬ್ಬನೂ ಶಾಂತಿ ಮಂತ್ರವನ್ನು ಜಪಿಸುತ್ತಲೇ ಇರುವನು. ಯೂರೋಪಿನಲ್ಲೂ ಜಗತ್ತಿನಲ್ಲೂ ಶಾಂತಿ ನೆಲೆಸುವುದಕ್ಕಾಗಿಯೇ ನೆಪೋಲಿಯನ್, ಕೈಸರ್, ಹಿಟ್ಲರ್, ಚರ್ಚಿಲ್ ಮುಂತಾದವರು ಜನನನ್ನು ಯದ್ಧಕ್ಕೆ ದುಡಿದುಂಬಿಸಿದ್ದು. ಸ್ಟಾಲಿನ್, ಸಾಮ್ಯ, ಶಾಂತಿ ಸ್ವಾತಂತ್ರ್ಯ ಸಂಪದ ಅಭಿವೃದ್ಧಿಗಾಗಿಯೇ [illegible] ಜಗತ್ತಿಗೆ ಶಾಂತಿ, ಎಂಬುದೇ ಅನೇಕರ [illegible]

ಚಂದ್ರನನ್ನು ಹಿಡಿಯಲಾರದ ಮಗು ಕನ್ನಡಿಯಲ್ಲಿ ಅದರ ಪ್ರತಿಬಿಂಬವನ್ನು ಕಂಡು ಅದನ್ನೇ ಚಂದ್ರನೆಂದು ನಂಬಿ ಅನಂದಪಡುತ್ತದೆ. ಹಾಗೆಯೇ ನಾವು ಉತ್ತಮವಾದ ಆದರ್ಶವನ್ನು ಕೆಳರಲ್ಲಿ ಪ್ರತಿಬಿಂಬಿಸಿ, ಮನಸ್ಸಿಗೆ ಮೋಸಮಾಡುತಿದೇವೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ಸಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮೂಲಕ ವಾಗುವವನು ವ್ಹಿ. ಪಿ. ಬೇಡವಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು ವ್ಹಿ. ಪಿ. ಹಿಂತಿರುಗಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ (ಚಂದಾ ಹಣ ಮುಂಗಡ)

೧ ವರ್ಷ	೬-೯-೦
೬ ತಿಂಗಳಿಗೆ	೩-೯-೦
೩ ,,	೧-೧೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು

ರಾಷ್ಟ್ರೀಯ ಸಪ್ತಾಹ

ಏಪ್ರಿಲ ತಿಂಗಳ ೬ ನೇ ತಾರೀಖಿನಿಂದ ೧೩ ರ ವರೆಗಿನ ದಿನಗಳು ನಮ್ಮ ರಾಷ್ಟ್ರೀಯ ಜೀವನದಲ್ಲಿ ಮರೆಯಲಾರದಂಥವು. ೬ ನೇ ಏಪ್ರಿಲ ೧೯೧೯ ರಲ್ಲಿ ಹಿಂದುಗಳು ಮುಸಲ್ಮಾನರು ಹಾಗೂ ಇತರರು ಕೂಡಿ ಸೇರಿ ಒಂದು ಅಪೂರ್ವ ಪ್ರಸಂಗವನ್ನು ಏರ್ಪಡಿಸಿದರು. ಅದು ಐತಿಹಾಸಿಕ ಸ್ವಾತಂತ್ರ್ಯ ದಿನವೂ ಆಗಿತ್ತೆನ್ನಬಹುದು. ಆ ದಿನ ಹಿಂದಿನ ಸತ್ಯಾಗ್ರಹದ ಪ್ರದೇಶಿಗಳು [illegible] ಆ ದಿನ ಸಮಗ್ರ ರಾಷ್ಟ್ರವೇ ಸರಕಾರದ ಕಾಯದೆಯ ಭಂಗವನ್ನು ಆಚರಿಸಿತು; ಸಾರ್ವಜನಿಕ ಮತ್ತು ಸಾರ್ವತ್ರಿಕ ಸ್ವಾತಂತ್ರ್ಯದ [illegible] ಪ್ರತಿಷ್ಠಾಪನೆಯ ಚೈತನ್ಯವು ಸರ್ವವ್ಯಾಪಿಯಾಗಿತ್ತು.

೧೩ ನೇ ಏಪ್ರಿಲ ದಿನ ಜಾಲಿಯನವಾಲಾ ಹತ್ಯಾಕಾಂಡವು ನಡೆದಿತು. ಅಲ್ಲಿ ಹಿಂದು, ಮುಸ್ಲಿಂ, ಸಿಖ, ಎಲ್ಲರ ರಕ್ತವೂ ಬೆರೆತು ಒಂದಾಗಿ ಹರಿದ ದಿನವದು. ಆ ಪವಿತ್ರ ಸ್ಮರಣೆಯು ಒಂದು ದಿನದಲ್ಲಿ ರಾಷ್ಟ್ರೀಯ [illegible] ಯಾತ್ರಾಸ್ಥಾನವು [illegible] ಇದುವರೆಗೂ ಅದು ಯಾತ್ರಾಸ್ಥಾನವಾಗಿಯೇ ಉಳಿಯುವದು.........

ಈ ಸಪ್ತಾಹವು ಪ್ರಾಯಃ ಮುಖ್ಯವಾಗಿ ಆತ್ಮಶುದ್ಧಿಯ ಮತ್ತು ಆತ್ಮಬಲಿದಾನದ ಸಪ್ತಾಹವಾಗಿದೆ. ಆದ್ದರಿಂದ ಈ ನಾಡನ್ನು ಆಚಾರಶುದ್ಧಿ, ಸತ್ಯ, ಅಹಿಂಸೆಗಳಿಂದಲ್ಲದೆ ಬೇರೆ [illegible] ಸಾಧನಗಳಿಂದ [illegible] ಈ ಬಗೆಯ ಪರಿಶುದ್ಧತೆಯು ಪ್ರಾರ್ಥನೆ ಮತ್ತು ಉಪವಾಸಗಳಿಂದ ಸಾಧ್ಯ. ಅದರಿಂದ ಉಪವಾಸದಲ್ಲಿಯೂ ಪ್ರಾರ್ಥನೆಯಲ್ಲಿಯೂ ಶ್ರದ್ಧೆಯುಳ್ಳವರು ಎಲ್ಲರು ೬ ನೇ ಮತ್ತು ೧೩ ನೇ ದಿನಗಳನ್ನು ಈ ರೀತಿ ಪ್ರಾಯಶ್ಚಿತ್ತದ ಹಾಗೆ ವಿನಿಯೋಗಿಸಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ.


.... ಹಿಂದು ಮತ್ತು ಅಹಿಂದುಗಳ ಐಕ್ಯವನ್ನು ನಾವು [illegible] ಸಮಸ್ಯೆಯನ್ನು ಅದರ ಪಾಡಿಗೆ ಬಿಟ್ಟುಕೊಟ್ಟು ತನಗೆ ತೋರಿದಂತೆ ತನ್ನ ಪಕ್ಷಕ್ಕೆ [illegible] ಸಾಗಲಿ ಎಂದು [illegible]

ಹಿಂದುಗಳಲ್ಲಿ ಅಸ್ಪೃಶ್ಯತೆಯೆಂಬ ಕಳಂಕವಿದೆ. ಅದನ್ನು ಅವರು ತೊಳೆದುಕೊಳ್ಳಬೇಕು. ಅವರು ಹರಿಜನರ ಋಣ [illegible] ದಿಂದಿರಬೇಕು. [illegible] ಈ ರೀತಿ [illegible] ಹಿಂದುಗಳು [illegible] ನಾವು ಇನ್ನು ಮೇಲೆ [illegible] ಎಂಬ ಭಾವವು [illegible]

ಹಿಂದು ಮುಸಲ್ಮಾನ ಐಕ್ಯ [illegible] ಅಸ್ಪೃಶ್ಯತಾ ನಿವಾರಣೆ [illegible] ದೃಷ್ಟಿಯಿಂದ ಸ್ವರಾಜ್ಯದ [illegible] ಅಸ್ತಿವಾದ ವೇಳೆ [illegible] ವರೆಗೆ ಕಂಡರಿದ ಧನ್ಯ ಸ್ವರಾಜ್ಯ [illegible] ಸಾಧ್ಯ [illegible] ಮರಳಿನ ಮೇಲೆ [illegible] ಯೆಂದರೆ ಸಾಮೂಹಿಕ [illegible] ಪ್ರದರ್ಶನದ ಪ್ರತೀಕವಾಗಿದೆ [illegible] ಎಲ್ಲರೂ [illegible] ಕೆಲಸ ಮಾಡಬಹುದು. [illegible] ಮಾರಾಟವನ್ನು ಸುವ್ಯವಸ್ಥಿತವಾಗಿ ಸಂಘಟಿಸಬಹುದು. ಖಚಿತವಾಗಿ ಸ್ವದೇಶೀ ವಸ್ತ್ರ [illegible] ಪ್ರೋತ್ಸಾಹಿಸುವ [illegible] ಹೇಗೆ [illegible] ರಾಷ್ಟ್ರೀಯ ಕಾರ್ಯಕರ್ತರು [illegible] ಸ್ವತಃ [illegible] ಕಾರ್ಯಕರ್ತರಾದ [illegible] ನೋಡಬಯಸುತ್ತೇನೆ [illegible] ರಾಟಿಯನ್ನು ಬಿಟ್ಟರೆ [illegible] ಇದೆಯೆಂದು ನನಗೆ ತಿಳಿದಿಲ್ಲ

ಸರ್ವರೂ ಸರಿಯಾಗಿ ಹಾಗೂ [illegible] ಮಾಡಬಹುದಾದ ಕಾರ್ಯವೆಂದರೆ [illegible] ಎಲ್ಲ [illegible] ಹಗುರಿಯನ್ನು [illegible] ರಾಟಿ [illegible] ಬರೆದ [illegible] ಮೂಲ್ಯ ದೀರಬಹುದಾದ

(ಈ ಬರೆಹವು ಗಾಂಧೀಜಿಯವರ [illegible] ಬರೆದ [illegible])



ದೇಶಾಂತರಗಳಿಂದ

ಪಾಲಿಸ್ತಾನದ ಯಜ್ಞಕುಂಡ

ಬ್ರಿಟಿಶರ ಆಳಿಕೆ ಕೊನೆಗೊಳ್ಳುವ ೩೦ ೧೪ರ ದಿನ ಇಡಿ ಜಗತ್ತಿನಲ್ಲಿಯ ಯೆಹೂದಿ ಚಳವಳಿಯ ಪ್ರತಿನಿಧಿಗಳೆಂದುಕೊಂಡು ಪಾಲಿಸ್ತಾನದ ಯೆಹೂದಿಗಳ ಧುರೀಣರಾದ ಡೇವಿಡ್ ಬೆನ್ ಗುರಿಯನ್ನರು ಇಸ್ರಾಯಿಲ್ ಎಂಬ ತಮ್ಮ ಹೊಸ ರಾಜ್ಯ ಸ್ಥಾಪನೆಯ ಘೋಷಣೆಯನ್ನು ಮಾಡಿದರು. ಆ ರಾಷ್ಟ್ರದ ಮಂತ್ರಿಮಂಡಲದಲ್ಲಿ ಅವರು ಮುಖ್ಯ ಮಂತ್ರಿಗಳಾಗಿದ್ದು ಸಂರಕ್ಷಣ ಖಾತೆಯನ್ನು ವಹಿಸಿಕೊಂಡಿದ್ದಾರೆ. ರಶಿಯನ್ ನೆಯ ಪ್ರಕಾರ ಈ ವಿಮಾನಗಳನ್ನು ಕಳುಹ ಲಾಗಿದ್ದು ಇವುಗಳಲ್ಲಿ ಆಧುನಿಕ ಯುದ್ಧ ವಿಮಾನಗಳೂ ಇವೆ.

ಇನ್ನೊಂದು ಇಂಥದೇ ಹಡಗು ಜೂನ್ ೪ಕ್ಕೆ ಬರಲಿದೆ. ಈಗಾಗಲೆ ತುರ್ಕಸ್ತಾನಕ್ಕೆ ಸಬ್ ಮರೀನುಗಳು ಬಂದು ತಲುಪಿವೆ.

ಇರಾಕ್ ದೇಶವೂ ಇಸ್ರಾಯಿಲ್ಲಿನ ಮೇಲೆ ತನ್ನ ದಾಳಿಯನ್ನು ಪ್ರಾರಂಭಿಸಿದ್ದು ಜಾರ್ಡನ್ ನದಿಯನ್ನು ದಾಟಿ ರುದರ್‌ಬರ್ಗಿನಲ್ಲಿಯ ವಿದ್ಯುದಾಗರಗಳನ್ನು ವಶಪಡಿಸಿಕೊಂಡಿತು.

ನಾಜಿಗಳಿಂದ ೬೦ ಲಕ್ಷದ ವರೆಗೆ ಕೊಲೆ ಮಾಡಲ್ಪಟ್ಟು ಉಳಿದ ೧೦ ಲಕ್ಷ ಯಹೂದಿಗಳಲ್ಲಿ ಅನೇಕರು ತಂಡತಂಡವಾಗಿ ಪಾಲಿಸ್ತಾನಕ್ಕೆ ಬಂದು ಸೇರುತ್ತಿರುವದು.

ಕುಲದ ೫೪ ವರ್ಷ ವಯಸ್ಸಿನ ಮೋಶೆ ಶೆಂಟಾಕ್ ಎಂಬವರು ವಿದೇಶ ಮಂತ್ರಿಗಳಾದರು.

ಇಸ್ರಾಯಿಲ್ಲ ರಾಷ್ಟ್ರಕ್ಕೆ ಅಮೇರಿಕ, ಗ್ವಾಟೆಮಾಲಾ, ರಶಿಯ ಮತ್ತು ನ್ಯೂಜಿಲೆಂಡ್ ಮುಂತಾದ ದೇಶಗಳ ಮನ್ನಣೆ ಕೊಟ್ಟವೆ. ಬ್ರಿಟನ್ನು ಮಾತ್ರ ಈಗಲೆ ಮನ್ನಣೆ ಕೊಡುವುದು ಸಾಧ್ಯವಿಲ್ಲವೆಂದು ಸಾರಿದೆ. ಡಾ. ಚಿಯಾಮ ವೀಜಮನ್ನರು ಇಸ್ರಾಯಿಲ್ ರಾಷ್ಟ್ರದ ತಾತ್ಪೂರ್ತಿಕ ಮಂಡಲದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ೩೭ ಸದಸ್ಯರಿಂದ ಕೂಡಿದ ಇಸ್ರಾಯಿಲ್ ಶಾಸನಸಭೆಯಲ್ಲಿ ನ್ಯಾಯ ಮಂತ್ರಿ ಡಾ. ಫೆಲಿಕ್ಸ್ ರೋಜೆನ್‌ಬ್ಲಥರು ಡಾ. ವೀಜಮನ್ನರ ಹೆಸರನ್ನು ಅಧ್ಯಕ್ಷ ಪದಕ್ಕೆ ಸೂಚಿಸಿದರು; ಬೆನ್ ಗುರಿಯನ್ನರು ಅನುಮೋದಿಸಿದರು.

ಈಗ ೭೩ ವರ್ಷದವರಾದ ಡಾ. ವೀಜಮನ್ನರು ಯೆಹೂದಿಗಳ ಬಗ್ಗೆ ಜಗತ್ತಿನ ಸಹಾನುಭೂತಿಯನ್ನು ಸಂಪಾದಿಸುವುದರಲ್ಲಿ ಯಶಸ್ವಿಗಳಾದವರು. ೧೯೧೭ ರಲ್ಲಿ ಅವರಿಂದ ಬಾಲ್ಫರ್ ಒಡಂಬಡಿಕೆ ಸಾಧಿಸಿತು. ಈ ಒಡಂಬಡಿಕೆಯ ಆಧಾರದಿಂದಲೇ ಪಾಲಿಸ್ತಾನದಲ್ಲಿ ಯೆಹೂದಿಗಳಿಗೆ ಕಾಲೂರಿ ನಿಲ್ಲಲು ಅವಕಾಶ ಸಿಕ್ಕಿತು.

ಯೆಹೂದಿ ರಾಜ್ಯ ತಲೆಯೆತ್ತಿದ ಮರುಗಳಿಗೆಯಲ್ಲಿ ಉತ್ತರ, ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಅರಬ ದಾಳಿಗಳನ್ನೆದುರಿಸಬೇಕಾಯಿತು. ಅರಬರು ಪಾಲಿಸ್ತಾನದ ಯುದ್ಧವನ್ನು ಧರ್ಮಯುದ್ಧವೆಂದು ಸಾರಿ ನೂರಾರು ಮೈಲುಗಳಿಂದ ಸ್ವಯಂಸೇವಕರಾಗಿ ಬಂದು ಸೇರುತ್ತಿದ್ದಾರೆ.

ಪಾಲಿಸ್ತಾನದ ಮೇಲೆ ಹಾಯ್ದ ಅರಬ ಸೇನೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಇಜಿಪ್ತದವರೆಂದೂ ಅವರು ಟ್ಯಾಂಕುಗಳನ್ನೂ ವಿಮಾನಗಳನ್ನೂ ಬಳಸುತ್ತಿರುವರೆಂದೂ ತಿಳಿದು ಬಂದಿದೆ.

ಇಜಿಪ್ತದ ಸೇನೆಗಳು ಪಾಲಿಸ್ತಾನದಲ್ಲಿ ಕಾಲಿಟ್ಟವೆಂದು ಇಜಿಪ್ತ ಸರಕಾರವು ಭದ್ರತಾಮಂಡಲಕ್ಕೆ ತಂತಿಯ ಮೂಲಕ ತಿಳಿಸಿದ್ದರಿಂದ ಅದು ಅವಸರದ ಸಭೆ ಕರೆಯಿತು.

ಟ್ರಾನ್ಸ್‌ಜೋರ್ಡನ್ನಿನ ಸೇನೆಯು ಯಾರ ವಿರೋಧವೂ ಇಲ್ಲದೆ ಪಾಲಿಸ್ತಾನದಲ್ಲಿ ಮುನ್ನುಗ್ಗಿದೆ.

ಅಮೇರಿಕದ ಒಂದು ಹಡಗು ತುರ್ಕಿಯ ವಿಮಾನದಲಕ್ಕಾಗಿ ೧೪ ವಿಮಾನಗಳನ್ನು ಹೊತ್ತುಕೊಂಡು ಇಸ್ತಾಂಬೂಲಿಗೆ ಹೋಯಿತು. ತುರ್ಕಸ್ತಾನಕ್ಕೆ ಸಹಾಯ ಸಲ್ಲಿಸುವ ಯೋಜ

ಇಸ್ರಾಯಿಲಿನ ಸೈನ್ಯವು ಉತ್ತರದಲ್ಲಿ ಮುನ್ನುಗ್ಗುತ್ತಿದ್ದು ಗಡಿಯಲ್ಲಿರುವ ಗ್ರಾಮವೊಂದನ್ನು ವಶಪಡಿಸಿಕೊಂಡು ಲೆಬನಾನಿನ ಸೈನ್ಯವನ್ನು ಎಡುಸಿದೆ ಯೆಹೂದಿಗಳು ಈ ವರೆಗೆ ಬ್ರಿಟಿಶರ ವಶದಲ್ಲಿದ್ದ ಪ್ರದೇಶಗಳನ್ನು ಆಕ್ರಮಿಸಿದ್ದಾರೆ.

ಭದ್ರತಾಮಂಡಲದ ವಿಭಜನಾ ನಿರ್ಣಯದಂತೆ ತಾವು ರಾಜ್ಯವನ್ನು ಸ್ಥಾಪಿಸಿದ್ದೇವೆಂದೂ ಪಾಲಿಸ್ತಾನದ ಶಾಂತಿಗೆ ಗಂಡಾಂತರ ತಂದಿರುವ ಅರಬ ರಾಷ್ಟ್ರಗಳು ಅಲ್ಲಿಂದ ಕಾಲ್ತೆಗೆವಂತೆ ಭದ್ರತಾಮಂಡಲವು ಅಜ್ಞಾಪಿಸಬೇಕೆಂದೂ ಯೆಹೂದಿ ಸಂಸ್ಥೆಯ ಪ್ರತಿನಿಧಿ ಡಾ. ಎಲಿಶರು ಕೇಳಿಕೊಂಡರು.

ಅರಬ ನಗರಗಳ ಮೇಲೆ ವಿಮಾನಗಳಿಂದ ದಾಳಿ ಮಾಡಲಾಗುವುದೆಂದು 'ಇಸ್ರಾಯಿಲ್ ವಾಣಿ'ಯು ಪಾಲಿಸ್ತಾನದ ಮೇಲೆ ಏರಿಬರುತ್ತಿರುವ ಇಜಿಪ್ತ ಮುಂತಾದ ರಾಷ್ಟ್ರಗಳಿಗೆ ಎಚ್ಚರಿಕೆ ಕೊಟ್ಟಿದೆ.

ಶಸ್ತ್ರಾಸ್ತ್ರಗಳನ್ನು ಹೇರಿಕೊಂಡು ಪಾಲಿಸ್ತಾನದತ್ತ ಹೊರಟಿದ್ದ ಬೆಲ್ಜಿಯಮ್ಮಿನ ಹಡಗೊಂದನ್ನು ಇಜಿಪ್ತಿನವರು ಅಲೆಕ್ಸಾಂಡ್ರಿಯದಲ್ಲಿ ತಡೆದರು.

ಯಹೂದಿಗಳ ರಾಜಧಾನಿಯಾದ ಟೇಲ್ ಅವೀವ ಮೂರು ದಿನಗಳ ವರೆಗೆ ಅರಬರ ಬಾಂಬಿಗೆ ಗುರಿಯಾಯಿತು.

ಸಂಪೂರ್ಣ ಅರಬ ನಗರವಾದ ಜಾಫಾವನ್ನು ಯೆಹೂದಿಗಳು ಈಗ ತಾನೆ ಆಕ್ರಮಿಸಿದ್ದಾರೆ.

ಉರಿಯುತ್ತಿರುವ ಜೇರುಸಲೇಮ ನಗರ

ಪಾಲಿಸ್ತಾನದ ಹಿರಿಯ ಮುಫ್ತಿ ಲೀಗ ಪತ್ರಪಕರು ತಮ್ಮ ಧುರೀಣರಾದ ರಿಯಾಜ್ ಅಲ್ಸುಲ್ತಾನರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ಸೇರಿ ಪಾಲಿಸ್ತಾನದಲ್ಲಿಯ ಯೆಹೂದಿ ಆಕ್ರಮಣದ ವಿರುದ್ಧ ಪಾಲಿಸ್ತಾನದ ಅರಬರು ಹೋರಾಡುವುದಕ್ಕೆ ಪಾಕಿಸ್ತಾನಿಗಳು ಪ್ರತಿಯೊಂದು ವಿಧದಿಂದ ಸಹಾಯ ಮಾಡಬೇಕೆಂದು ಒಂದು ಸೂಚನೆಯನ್ನು ಸ್ವೀಕರಿಸಿದರು. ಗೊತ್ತುವಳಿಯಲ್ಲಿ ಪಾಲಿಸ್ತಾನದಲ್ಲಿ ರಚಿತವಾದ ಇಸ್ರಾಯಿಲ್ ಸರಕಾರವನ್ನು ಅಮೇರಿಕ, ನ್ಯೂಜಿಲೆಂಡು ಮೊದಲಾದ ರಾಷ್ಟ್ರಗಳು ಮಾನ್ಯಮಾಡಿದ್ದನ್ನು ಖಂಡಿಸಿ ಅವರ ಈ ಕೃತ್ಯ ಅನ್ಯಾಯವಾದದ್ದು ಜಗತ್ತಿನ ಮುಸಲ್ಮಾನ ಮತ್ತು ಅರಬರ ಹಿತಸಂಬಂಧಗಳಿಗೆ ವಿರುದ್ಧವಾದದ್ದು ಆಗಿದೆಯೆಂದು ಎಚ್ಚರಿಕೆ ಕೊಡಲಾಯಿತು.

ಅಂತಾರಾಷ್ಟ್ರೀಯ ಶಾಂತಿಯನ್ನು ಕಾಯಲು ಸಂಯುಕ್ತ ಉಪಾಯಗಳನ್ನು ಕೈಕೊಳ್ಳುವದನ್ನು ಚರ್ಚಿಸಲು ಪಂಚ ಮಹಾರಾಷ್ಟ್ರಗಳ ಸಭೆಯನ್ನು ಕರೆಯಬಹುದೆಂದು ತರ್ಕಿಸಲಾಗಿದೆ.

ಬ್ರಿಟನ್ನು ಈಗ ಅರಬ-ಯಹೂದಿಗಳಲ್ಲಿ ಒಡಂಬಡಿಕೆ ಮಾಡಿಸಲು ಪ್ರಯತ್ನಿಸುತ್ತಿದ್ದು ಈ ಬಗ್ಗೆ ಭದ್ರತಾ ಮಂಡಲಕ್ಕೆ ಸೂಚನೆಗಳನ್ನು ಮಾಡಬಹುದೆಂದು ತಿಳಿಯುತ್ತದೆ.

ಇದು ವರೆಗೆ ಹೇಳಿಕೊಳ್ಳುವಂಥ ಕಾಳಗ ಸಂಭವಿಸಿಲ್ಲ ಆದರೆ ಮಾಜಸಲದ ಆಜೆಗಿರುವ ಭದ್ರವಾದ ಯೆಹೂದಿ ಠಾಣ್ಯಗಳ ಮೇಲೆ ಏರಿ ಹೋದ ಕೂಡಲೆ ಘೋರ ಕದನ ಆರಂಭಿಸಬಹುದು. ಜಾಫಾವನ್ನು ಆಕ್ರಮಿಸುವುದು ಇಜಿಪ್ತದ ಗುರಿ.

ಉತ್ತರ ಪ್ರದೇಶದಲ್ಲಿ ಈಶಾನ್ಯದಿಂದ ಸಾಗಿ ಬರುವ ಸಿರಿಯದ ಸೈನ್ಯವು ಪೂರ್ವದಿಂದ ಬರುತ್ತಿರುವ ಇರಾಕೀ ಸೈನ್ಯವನ್ನು ಕೂಡಿಕೊಂಡಿತು.

ಉತ್ತರದಲ್ಲಿ ಲೆಬನಾನ ರಂಗದಲ್ಲಿ ಯೆಹೂದಿಗಳ ಕೈ ಮೇಲಾಗಿದ್ದು ಅವರು ಲೆಬನಾನಿನ ಗಡಿಯಲ್ಲಿ ೧೦ ಮೈಲು ನುಗ್ಗಿ ಅಟಾನಿ ನದಿಯ ಮೇಲಿನ ಸಂಕವನ್ನು ಹಾರಿಸಿಬಿಟ್ಟರು.

ಟೆಲ್‌ಅವೀವ್ ನಗರದ ಮೇಲೆ ಇಜಿಪ್ತ ವಿಮಾನಗಳು ದಾಳಿ ಮಾಡುತ್ತಲೇ ಇವೆ.

ಮಧ್ಯಪೂರ್ವದಲ್ಲಿಯ ಎಲ್ಲಾ ಪ್ರದೇಶಗಳನ್ನು ಅಂತರಾಷ್ಟ್ರೀಯ ನಿಯಂತ್ರಣಕ್ಕೊಪ್ಪಿಸಿಬಿಡಬೇಕು. ಈ ಜಗಳಕ್ಕೆ ಇದೇ ಕಾರಣ. ಇಸ್ರಾಯಿಲ್ ರಾಜ್ಯವನ್ನು ಮನ್ನಿಸಿದ ಅಮೇರಿಕವು ಅರಬರಿಗೆ ಶಸ್ತ್ರಾಸ್ತ್ರಗಳನ್ನು ಕಳಿಗಿಡಲು ಅಜ್ಞಾಪಿಸಬೇಕು ಎಂದು ಹೆನ್ರಿ ವ್ಯಾಲೇಸರು ಹೇಳಿದರು.

ಪಾಲಿಸ್ತಾನದ ಯಜ್ಞಕುಂಡದಲ್ಲಿ ಜೆರೂಸಲೇಮು ಆಹುತಿಯಾಯಿತು. ನಿರಾಶ್ರಿತರಿಗಂತೂ ಲೆಕ್ಕ ಸಂಖ್ಯೆ ಇಲ್ಲ.

ರಶಿಯ--ಅಮೇರಿಕ ದ್ವಂದ್ವ

ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ದೂರ ಮಾಡಿ ಸೌಹಾರ್ದ ಸಾಧಿಸುವುದಕ್ಕಾಗಿ ಅಮೇರಿಕದ ಗುಪ್ತ ವಿನಂತಿ ಪತ್ರದ ಮೇರೆಗೆ ಎರಡೂ ರಾಷ್ಟ್ರಗಳು ಸಂಧಾನಕ್ಕೆ ಒಪ್ಪಿದ್ದನ್ನು ಅನೇಕ ರಾಷ್ಟ್ರಗಳು ಮೆಚ್ಚಿದವು.

ಆದರೆ ಅಮೇರಿಕ ಮತ್ತು ರಶಿಯಗಳೊಡನೆ ನಡೆದ ಪತ್ರವ್ಯವಹಾರವನ್ನು ಪ್ರಸಿದ್ಧಿಸುವದಿಲ್ಲೆಂದು ವಚನಕೊಟ್ಟು ಮೊಲಟೋವರು ಈಗ ಅದನ್ನು ಪ್ರಸಿದ್ಧಿಸಿ ವಿಶ್ವಾಸದ್ರೋಹ ಮಾಡಿರುವರೆಂದು ಮಾಸ್ಕೋದಲ್ಲಿರುವ ಅಮೇರಿಕದ ರಾಯಭಾರಿ ಬಿಡೆಲ್‌ಸ್ಮಿತ್ರರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಇದರಿಂದ ಮೊದಲಿನ ಶುತ್ತಿಗೇ ಸೊಣಬಿದ್ದಂತಾಯಿತು.

ಪತ್ರಗಳಲ್ಲಿ ಆದರದ ಒಂದೆರಡು ಮಾತುಗಳನ್ನು ಬಿಟ್ಟರೆ ಉಳಿದೆಲ್ಲವೂ ಪರಸ್ಪರ ಆರೋಪ ಪ್ರತ್ಯಾರೋಪಗಳಿದ್ದು, ಅವುಗಳ ಬಗ್ಗೆ ಅದೊಂದು ಅಮೇರಿಕದ ರಾಜಕೀಯ ವಿಜಯವೆಂದು ಕೊಂಡ ಲಂಡನ ಮುಖಸ್ಸದ್ದಿಗಳು ಮರುದಿನವೇ ಅಲ್ಲಿ ಮೊಲಟೋವರುಷ್ವಂತಪ್ರಚಾರಕ್ಕಾಗಿ ಅಮೇರಿಕದ ಪತ್ರವನ್ನು ಮುಖಸ್ಸದ್ದಿಸದಿಂದ ಬಳಸಿಕೊಂಡಿದ್ದಾರೆಂದು ಅಭಿಪ್ರಾಯಪಟ್ಟರು.

—೧೪ನೇ ಪುಟಕ್ಕೆ

ಸಂ. ರಾ. ಸಂಘದ ವಿಭಜನಾ ಯೋಜನೆಯನ್ನು ಇಲ್ಲಿ ನೋಡಬಹುದು. ಬಾಣ ಚಿಹ್ನಗಳು ಇಜಿಪ್ತ ಮುಂತಾದ ಅರಬ ರಾಷ್ಟ್ರಗಳ ದಾಳಿಯ ಸ್ಥಳಗಳನ್ನು ಸೂಚಿಸುತ್ತವೆ. + ವಿಮಾನ ಮತ್ತು ಬಾಣ ಚಿಹ್ನಗಳಿದ್ದಲ್ಲಿ ವಿಮಾನ ದಾಳಿಯಾಗಿದೆ.

ವಿಚಿತ್ರ ವಿಶ್ವ

ವಿನೆಗರ್ ನದಿಯದೊಂದು ವಿಲಕ್ಷಣಸ್ವಭಾವ. ಅದು ಕೊಲಂಬಿಯದಲ್ಲಿದೆ.

ಅದರ ನೀರು ಹುಳಿ ಹುಳಿ. ಇದೇಕೆಂದು ಸಂಶೋಧಿಸಲಾಗಿ ಜ್ವಾಲಾಮುಖಿಗಳ ದೆಸೆಯಿಂದ ಅದರಲ್ಲಿ ಸಾವಿರದಲ್ಲಿ ೧೧ ಅಂಶ ಗಂಧಕ ದ್ರಾವಕ (Sulphuric Acid) ಮತ್ತು ೯ ಅಂಶ ಹೈಡ್ರೋಕ್ಲೋರಿಕ್ ದ್ರಾವಕ ಕೂಡಿದೆ ಎಂದು ತಿಳಿಯಬಂದಿತು ಆ ಕಾರಣದಿಂದ ಅದರಲ್ಲಿ ಮೀನುಗಳೇ ಇಲ್ಲ, ಅವು ಅಲ್ಲಿ ಬದುಕಲಾರವು.

× × ×

ಇಟಲಿಯ 'ಹೊರಗೆ ಗಿನ್ನೋನ್ನಿಗಲಂತಿ ಎಂಬೊಬ್ಬ ಹುಡುಗನಿದ್ದನು ಅವನಿಗೆ ೧೩ ವರ್ಷ ವಯಸ್ಸಾಗಿತ್ತು. ಅವನಿಗೊಂದು ವಿಲಕ್ಷಣವಾದ ಕಣ್ಣುಬೇನೆಯಿತ್ತು. ಅದರ ದೆಸೆಯಿಂದ ಅವನು ರಾತ್ರಿ ಕಾಣಬಲ್ಲನಲ್ಲದೆ ಹಗಲು ಏನನ್ನೂ ಕಾಣಲಾರ. ಈ ಗೂಬೆಮರಿಯು ೧೯೩೫ರಲ್ಲಿ ಸ್ವದೇಶಕ್ಕೆ ಪ್ರವೇಶಿಸಲು ಪ್ರಯತ್ನಿಸಿದನು. ಆದರೆ ಹಗಲು ಗುರುಡನನ್ನು (ಇರುಳು ಗಣ್ಣನನ್ನು) ಒಳಬಿಡುವುದಿಲ್ಲವೆಂದು ಸಾರ್ವಜನಿಕ ಆರೋಗ್ಯ ಖಾತೆಯ ಇನ್ಸ್‌ಪೆಕ್ಟರ ಅವನಿಗೆ ಅಪ್ಪಣೆ ಕೊಡಲಿಲ್ಲ. ಹುಡುಗನ ತಾಯ್ತಂದೆಯರು ಹಲ್ಲೈನ್ ದ್ವೀಪದಲ್ಲಿದ್ದರು

+ + ×

೧೮೬೩ರಲ್ಲಿ ಟೋರೆಂಟೋದಲ್ಲಿ ಪಾಲ್ ಹ್ಯೂಬರ್ಟ್ ಎಂಬೊಬ್ಬ ಸಿದ್ದನು. ಅವನಿಗೆ ಏನು ಗೊತ್ತು ? ತನ್ನನ್ನು ತಾನೇ ಕೊಂದನೆಂದು ಕಠಿನ ಶಿಕ್ಷೆಗೆ ಅವನನ್ನು ಗುರಿಮಾಡಲಾಗಿತ್ತು !

ಒಬ್ಬನನ್ನು ಕೊಂದನೆಂಬ ಅಪಾದನೆಯ ಮೇಲೆ ಅವನನ್ನು ೨೧ ವರ್ಷಗಳ ಅವಧಿಯ ವರೆಗೆ ಕಾರಾಗೃಹದಲ್ಲಿಟ್ಟಿದ್ದರು. ಕೊನೆಗೆ ಕೊಲ್ಲಲ್ಪಟ್ಟ ವ್ಯಕ್ತಿಯೆಂದು ಹೇಳಲಾದವನು ಪಾಲ್ ಹ್ಯೂಬರ್ಟನೇ ಎಂಬುದು ತಿಳಿದು ಅವನನ್ನು ಮುಕ್ತನನ್ನಾಗಿ ಮಾಡಿದರು. ಇಂಥ ನಿದರ್ಶನ ಜಗತ್ತಿನಲ್ಲಿಯೇ 'ಕಾಣದ ಹೊಂದರೊಂದು ಕತೆ' ಎಂದು ಬಲ್ಲವರ ಅಂಬೋಣ !

ಮಹಿಳಾ ಲೋಕ

ಸಂಗ್ರಹಕಾರ್ತಿ
"ಹಿರಿಯಕ್ಕ"

ಇಂದಿನ ಭಾರತೀಯ ಮಹಿಳೆಯ ಆದರ್ಶ

ಅವಳು ಚೈತನ್ಯರೂಪಿ ದೇವತೆಯಾಗಬೇಕು

[ಶ್ರೀಮತಿ ಬಿಗಾಡೆಯವರ ಹೆಸರು ಕರ್ನಾಟಕ ಮಹಿಳಾ ಜಗತ್ತಿನಲ್ಲಿ ಪ್ರಖ್ಯಾತವಿದೆ. ಸೊಲ್ಲಾಪುರದ ಮಹಿಳಾ ಸಮಾಜದ ಪ್ರಮುಖ ಕಾರ್ಯಕರ್ತ್ರಿಯೆಂದು ಇವರು ಎಲ್ಲರಿಗೂ ಪರಿಚಿತರಿದ್ದಾರೆ. ಅ. ಭಾ. ಮಹಿಳಾ ಮಂಡಳದ ಚಟುವಟಿಕೆಗಳಲ್ಲಿಯೂ ಇವರು ಭಾಗವಹಿಸುತ್ತಿದ್ದು ವೀರಶೈವ ಮಹಿಳಾ ಪರಿಷತ್ತಿಗೆ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಭಾರತೀಯ ಇತಿಹಾಸ, ಭಾರತೀಯ ಮಹಿಳೆಯರ ವೃತ್ತಾಂತ ಮೊದಲಾದವುಗಳನ್ನು ಆಳವಾಗಿ ಅಭ್ಯಸಿಸಿದ್ದಾರಷ್ಟೆ ಅಲ್ಲದೆ ಭಾರತೀಯ ಮಹಿಳೆಯರ ಅನೇಕ ಸಾಮಾಜಿಕ, ರಾಜಕೀಯ, ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿರುತ್ತಾರೆ. ಇವರು ಮುಂಬಯಿಯ ಸಂಯುಕ್ತ ಕರ್ನಾಟಕ ಸಂಘದ ಪರವಾಗಿ ಸ್ತ್ರೀಯರಿಗಾಗಿ ಏರ್ಪಡಿಸಿದ ಸಭೆಯಲ್ಲಿ ಕೆಲ ದಿನ ಹಿಂದೆ ಮಾಡಿದ ಭಾಷಣದ ಸಾರವಿದು.
— ಹಿರಿಯಕ್ಕ]

ಪರಮಾತ್ಮನು ಸೃಷ್ಟಿಸಿದ ಈ ವಿಶ್ವದಲ್ಲಿ ಮಾನವ ಜೀವನದ ರಹಸ್ಯವು ವಿಶಾಲವೂ ಅಗಾಧವೂ ಆಗಿದೆ. ಆದರೆ ಮಾನವ ಜೀವನದ ಅಂತಃಪಟದ ಮೇಲೆ ಸುಖ, ದುಃಖ, ಜ್ಞಾನ, ಅಜ್ಞಾನ, ಧರ್ಮ, ಅಧರ್ಮ, ಶಾಂತಿ, ಕ್ರೋಧ, ನೀತಿ ಅನೀತಿ ಇವೇ ಮೊದಲಾದ ದ್ವಂದ್ವಗಳು ಸ್ತ್ರೀ ಪುರುಷರಲ್ಲಿ ಪ್ರತಿಬಿಂಬಿಸುವವು. ಆದ್ದರಿಂದ ಮಾನವರು ಸುಖವನ್ನಾಗಲಿ, ದುಃಖವನ್ನಾಗಲಿ ಅನುಭವಿಸಬೇಕಾಗುತ್ತದೆ. ಆದರೆ ಮಾನವನು ಯುಕ್ತಿಯಿಂದ ಸಾಧಿಸುವುದು ಅಖಂಡ ಸುಖಕ್ಕಾಗಿ, ಮೋಕ್ಷಕ್ಕಾಗಿ. ಈ ವಿಶ್ವದಲ್ಲೆಲ್ಲ ಶಾಂತಿ ಸ್ಥಾಪಿಸಬೇಕಾದರೆ ಸುವಿಚಾರಿ ದಂಪತಿಗಳೇ ಅವಶ್ಯ. ಪ್ರತಿಯೊಬ್ಬನು ಸುಶಿಕ್ಷಿತನಿದ್ದರೆ ಅಶಿಕ್ಷಿತ ಸತಿಯು ಅವನ ವಿಚಾರಗಳಿಗೆ ಆತಂಕವಾಗಬಹುದಾದ್ದರಿಂದ ಸ್ತ್ರೀಶಿಕ್ಷಣದ ಅವಶ್ಯಕತೆ ಇರುತ್ತದೆ. ಕಣ್ಣುಗಳು ಎರಡಿದ್ದರೂ ದೃಷ್ಟಿಯು ಹೇಗೆ ಏಕಮುಖವಾಗಿ ಇರುವದೋ ಅದರಂತೆಯೇ ದಂಪತಿಗಳ ಭಾವವು ಇರಬೇಕು. ಹಿಂದಿನ ಋಷಿಗಳು ಹೆಸರಾಗಿ ಹೋದುದು ಕೂಡ ಅವರ ಸಹಭಾಗಿಗಳಾದ ಸತಿಯರಿಂದಲೇ ಎಂದು ಹೇಳಬಹುದು.

ಮೂರು ಕಾಲಗಳು

ಇಲ್ಲಿಯ ವರೆಗಿನ ಭಾರತೀಯ ಮಹಿಳೆಯರಲ್ಲಿ ಮೂರು ಭಾಗಗಳನ್ನು ಮಾಡಬಹುದು:

೧) ಪೌರಾಣಿಕ ೨) ಐತಿಹಾಸಿಕ ೩) ಆಧುನಿಕ.

ಪೌರಾಣಿಕ ಕಾಲದ ಸ್ತ್ರೀಯರು ಪತಿಸೇವೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು. ಐತಿಹಾಸಿಕ ಕಾಲದಲ್ಲಿ ಬುದ್ಧ ಬಸವಣ್ಣ ಮೊದಲಾದವರು ಸ್ತ್ರೀಯರಿಗೆ ಪುರುಷರಂತೆ ಸಮಾನ ಅಧಿಕಾರವನ್ನು ಒದಗಿಸಿ ಕೊಟ್ಟರು. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ಶ್ಲೋಕಾರ್ಥವನ್ನು ಮರೆಯಿಸಿಬಿಟ್ಟರು. ಆದರೆ ಈಗಿನ ಆಧುನಿಕ ಕಾಲದ ಭಾರತೀಯ ಮಹಿಳೆಯರ ಮೇಲೆ ದೊಡ್ಡ ಹೊಣೆ ಬಂದುಬಿದ್ದಿದೆ. ಕೌಟುಂಬಿಕ ಜೀವನವು ಸುಖಸಾಧನವಾಗಿದೆ. ಇದು ಮಾನವ ಜೀವನದ ಧ್ಯೇಯವಾಗಲಾರದು. ಈ ಕಲ್ಪನೆಯು ಪ್ರತಿಯೊಬ್ಬ ಮಹಿಳೆಗೆ ಇರಬೇಕಾಗಿದೆ. ಈ ವರೆಗೆ ಸ್ತ್ರೀಯು ತನ್ನ ಪತಿ ಪುತ್ರರಿಗಾಗಿ ಹೇಗೆ ತ್ಯಾಗಮಾಡಿದಳೋ ಹಾಗೆಯೇ ಇನ್ನು ಮುಂದೆ ಸಮಾಜಕ್ಕಾಗಿ ದೇಶಕ್ಕಾಗಿ ಮಾಡುವದು ಅವಶ್ಯವಾಗಿದೆ. ಈ ಕರ್ತವ್ಯ ಮಾಡುತ್ತಿರುವಾಗ ಆತ್ಮವಿಶ್ವಾಸದಷ್ಟೆ ಆತ್ಮಪರೀಕ್ಷೆಯು ಅವಶ್ಯಕತೆಯಿದೆ. ಈ ಹೊತ್ತಿನ ಸ್ತ್ರೀಯು ಕೇವಲ ಸಾಮಾಜಿಕ ಆಯುಷ್ಯದ ದೃಷ್ಟಿಯಿಂದಲೇ ಅಲ್ಲ ಆದರೆ ಅಂತರಿಕ ಜೀವನದ ದೃಷ್ಟಿಯಿಂದಲೂ ಕ್ರಾಂತಿ ಕಾಲದಲ್ಲಿ ಪ್ರವೇಶಿಸುತ್ತಿರುವಳು. ಕ್ರಾಂತಿಯ ಕಾವ್ಯಾತ್ಮಕ ದರ್ಶನವು ಮಹಾಲಕ್ಷ್ಮಿಯಂತೆ ಮನೋಹರವಾಗಿ ತೋರುತ್ತಿದ್ದರೂ ಅದರ ನಿಜಸ್ವರೂಪ ಮಹಾಕಾಳಿಯಂತಿದೆ. ಅವಳ ಪೂಜೆಗೆ ಸ್ತ್ರೀಯು ಉಗ್ರವಾದ ಧೂಪದೀಪಗಳಿಂದ ಸಿದ್ಧವಾಗಿರಬೇಕು. ಕ್ರಾಂತಿಯೆಂದರೆ ಹಿರಿಯರನ್ನು ಮೀರುವದಲ್ಲ; ನೈತಿಕ ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಶ್ನೆಗೆ ಕಂಡ ಕಾಡಿಕೊಂಡಿರುವ ಮಲ್ಯದ ದಾರಿಯನ್ನು ದಾಟಿ ಸುರಕ್ಷಿತವಾದ ಹಾದಿಯನ್ನು ಕಂಡುಕೊಳ್ಳುವದೇ ಕ್ರಾಂತಿ. ಅವಳು ಸಮಾಜದಲ್ಲಿ ಪುರುಷನ ಸರಿಸಮಾನವಾದ ಜೀವಭಾವದ ಸ್ನೇಹಿತಳು. ಅವಳ ಕಾರ್ಯದಲ್ಲಿ ಈಗಿನ ತರುಣರು ವಿರೋಧ ಮಾಡಲಾರರೆಂದು ನಂಬಿಗೆ.

ಯುದ್ಧ ಇಲ್ಲದಂತಾಗಬೇಕು

ಆದರೆ ವ್ಯಕ್ತಿಸ್ವಾತಂತ್ರ್ಯ, ಕೌಟುಂಬಿಕ ಸೌಖ್ಯ ಮತ್ತು ಸಾಮಾಜಿಕ ಜೀವನ ಈ ಮೂರು ಪ್ರಕಾರಗಳು ಸ್ತ್ರೀಯ ಆಯುಷ್ಯದಲ್ಲಿ ಏಕರೂಪವಾಗಿ ಹರಿದರೂ ಯಾವದೇ ರಾಷ್ಟ್ರದ ಮುಂದಿನ ಸ್ತ್ರೀಯು ತನ್ನ ಜೀವನವನ್ನು ಯುದ್ಧವು ನಾಶವಾಗುವ ವರೆಗೆ, ಮೇಲು ಕೀಳು, ಸುಶಿಕ್ಷಿತ ಅಶಿಕ್ಷಿತ, ಎಂಬ ಭೇದಭಾವಗಳು ಜಗತ್ತಿನಲ್ಲಿ ಉಳಿವವರೆಗೆ ಸುಖದಿಂದ ಬಾಳಲಾರಳು. ಎಷ್ಟೋ ದುಃಖಗಳಿಂದ ಬೆಳೆಸಿದ ತನ್ನ ಪುತ್ರರನ್ನೂ, ಪ್ರೀತಿಯ ಪತಿಯನ್ನೂ ಬಲಿಕೊಡಬೇಕಾದ ಪ್ರಸಂಗ ಬಂದಲ್ಲಿ ಯಾವ ಸ್ತ್ರೀಯು ಸುಖವನ್ನು ಹೊಂದಬಹುದು?

ಭಕ್ತಿ, ತ್ಯಾಗ ವಾತ್ಸಲ್ಯ ಈ ಗುಣಗಳನ್ನು ಸ್ತ್ರೀಗೆ ಯಾರೂ ಕಲಿಸಬೇಕಾಗಿಲ್ಲ. ಅವು ಅವಳ ರಕ್ತದಲ್ಲಿಯೇ ಸಹಜ ಹರಿಯುತ್ತಿರುವವು. ಮಾನವ ಜಾತಿಯ ಅಜ್ಞಾನದಿಂದ ಅಥವಾ ಪುರುಷ ಜಾತಿಯ ಲಂಪಟತನದಿಂದ ಈ ವರೆಗೆ ಅವಳ ಸದ್ಗುಣಗಳ ದುರುಪಯೋಗ ಮಾಡಿಕೊಂಡಿರಬಹುದು. ಭಾರತೀಯ ಮಹಿಳೆಯರಲ್ಲಿ ಅಜ್ಞಾನವೊಂದನ್ನು ಬಿಟ್ಟರೆ, ಉಳಿದ ಯಾವ ಕುಂದು ಕೊರತೆಗಳೂ ಇಲ್ಲ.

ಪತಿಭಕ್ತಿಯಿಂದ ಪ್ರೇರಿತಳಾಗಿ ೧೪ ವರ್ಷದ ವರೆಗೂ ಘೋರತಮವಾದ ವನವಾಸವನ್ನು ಸ್ವೀಕರಿಸಿದ ಸೀತೆಯನ್ನು ಯಾವ ಆದರದಿಂದ ಕಾಣುತ್ತಾರೋ! ಅದರಲ್ಲಿ ಕಾವ್ಯಾತ್ಮಕ ಕಲ್ಪನೆಯೇ ಹೆಚ್ಚಾಗಿದೆ. ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಬಲಿದಾನವನ್ನೇ ಕೊಡುವ ಇಂದಿನ ಚೀನೀ ಸ್ತ್ರೀಯು ಭಾರತೀಯ ಸ್ತ್ರೀಯರಿಗೆ ಪುರಾಣದಲ್ಲಿಯ ಸೀತೆಗಿಂತಲೂ ಸಮೀಪಳಾಗಿರುವಳು.

ಇದೀಗ ನಮ್ಮ ಭಾರತವು ಸ್ವತಂತ್ರವಾಗಿದೆ. ಸ್ವಾತಂತ್ರ್ಯವನ್ನು ದೊರಕಿಸುವದಕ್ಕಿಂತಲೂ ಕಾಯ್ದುಕೊಳ್ಳುವದು ಕಠಿಣವಾಗಿರುವ ಕಾಲದಲ್ಲಿ, ಹದ್ದುಗಳಂತೆ ಉಳಿದ ರಾಷ್ಟ್ರಗಳು ನಮ್ಮನ್ನು ಕುಕ್ಕಲು ಕಾಯುತ್ತಿರುವ ಕಾಲದಲ್ಲಿ ಭಾರತ ಮಹಿಳೆಯರು ಪರಿಸ್ಥಿತಿಯನ್ನು ಅರಿತು ತಮ್ಮ ಕೆಲಸವನ್ನು ಮಾಡಬೇಕಾಗಿದೆ.

ಮಾತೃಧರ್ಮಕ್ಕಿಂತ ಧರ್ಮವಿಲ್ಲ

ಎಲ್ಲ ಸ್ತ್ರೀ ಧರ್ಮಗಳಲ್ಲಿ ಮಾತೃಧರ್ಮವೇ ಶ್ರೇಷ್ಠ. ಅವಳು ತನ್ನಿಂದ ಜನಿಸಿದ ಮಕ್ಕಳಷ್ಟೆ ತನ್ನವೆಂದು ತಿಳಿದುಕೊಳ್ಳದೆ ರಾಷ್ಟ್ರದ ಮಕ್ಕಳೆಲ್ಲವೂ ತನ್ನವೆಂಬ ವಿಶಾಲವಾದ ದೃಷ್ಟಿಯನ್ನು ಇಟ್ಟುಕೊಳ್ಳಬೇಕು ಮಾತೃಧರ್ಮದ ಸಂಗಡ ಅವಳಿಗೆ ಮಾನವ ಧರ್ಮದ ಪರಿಪಾಲನೆಯನ್ನು ಮಾಡಬೇಕಾಗಿದೆ. ಸ್ತ್ರೀಯು ಪುರುಷನ ಕೂಡ ಸ್ಪರ್ಧೆ ಮಾಡಬೇಕಾಗಿಲ್ಲ. ತನ್ನ ಪತಿಯ ಕಾರ್ಯಗಳಲ್ಲಿ ಸಹಭಾಗಿಯಾಗಿರುವದೇ ಅವಳ ಆನಂದ.

ಕೆಲವರು ಸ್ತ್ರೀಯು ಕೈಗೊಂಬೆಯೆಂದು ತಿಳಿದಿದ್ದಾರೆ. ಆದರೆ ಈ ಮಾತು ಅಸತ್ಯವೆಂಬುದನ್ನು ಎಷ್ಟೋ ದೈನಂದಿನ ಕಾರ್ಯಕ್ರಮಗಳಿಂದಲೂ ಕಸ್ತೂರಬಾ, ಲಾಯಭಾರಿ ವಿಜಯಲಕ್ಷ್ಮೀ ಪಂಡಿತ, ಸರೋಜಿನಿ ನಾಯುಡು ಇವರಂಥವರಿಂದಲೂ ತಿಳಿದುಕೊಳ್ಳಬಹುದು. ಇನ್ನೂ ಕೆಲವರು ಸ್ತ್ರೀಯು ದೇವತಾ ಸಮಾನರೆಂದು ಹೇಳುತ್ತಾರೆ ಆದರೆ ಅವರು ದೇವತೆಯ ಕಲ್ಲಿನ ಮೂರ್ತಿಯೆಂದು ತಿಳಿದುಕೊಂಡೇ ಮೇಲಿನ ತತ್ವವನ್ನು ಒಪ್ಪಿಕೊಂಡಿರುತ್ತಾರೆ. ಭಾರತ ಮಹಿಳೆಯು ಕಲ್ಲು ಮೂರ್ತಿಯಾಗದೇ ಚೇತನಾರೂಪಿಯಾಗಬೇಕು. ಪುರುಷರಿಗಿಂತಲೂ ಸ್ತ್ರೀಯರು ಹೆಚ್ಚು ಕಷ್ಟದಲ್ಲಿ ತಮ್ಮ ಕೆಲಸವನ್ನು ಸಾಗಿಸುತ್ತಿರುವದರಿಂದ ಸ್ತ್ರೀಯರು ಹೆಚ್ಚಿನ ಪ್ರಭಾವಶಾಲಿಯಾಗುವ ಶಕ್ಯತೆ ಇದೆ. ಶೂರತನ ಪಾಂಡಿತ್ಯಗಳು, ತ್ಯಾಗ ಬುದ್ಧಿ ಮತ್ತು ನಿಷ್ಕಾಮ ಭಾವನೆಯಿಂದ ಜನ್ಯವಾಗುವವು. ಆದ್ದರಿಂದ ಸ್ತ್ರೀಯು ತ್ಯಾಗಭಾವದಿಂದ ಪುರುಷರು ಪಡೆದುಕೊಂಡಷ್ಟೇ ಪಾಂಡಿತ್ಯವನ್ನು ಪಡೆಯಬಹುದು.

ಕಾಶ್ಮೀರ ವಿಭಜನೆಯೆ?

ವಿಶ್ರಾಂತಿಗಾಗಿ ಲಾರ್ಡ ಮೌಂಟ ಬ್ಯಾಟನ್ನರು ಸಿಮ್ಲಾಕ್ಕೆ ಹೋಗಿದ್ದು ಪಂಡಿತ ನೆಹರು ಅವರಿಗೂ ವಿಶ್ರಾಂತಿಗಾಗಿ ಅಲ್ಲಿಗೆ ಬರಲು ಆಮಂತ್ರಿಸಿದ್ದಾರೆ. ಕಾಶ್ಮೀರದ ವಿಭಜನೆಯ ಯೋಜನೆಯನ್ನು ಚರ್ಚಿಸಲೆಂದೇ ಲಾರ್ಡ ಮೌಂಟಬ್ಯಾಟನ್ನರು ಪಂಡಿತ ನೆಹರು ಅವರನ್ನು ಕರೆಯಿಸಿಕೊಂಡಿದ್ದಾರೆಂದು ದಿಲ್ಲಿಯ ರಾಜಕೀಯ ವರ್ಗದಲ್ಲಿ ಈ ಬಗ್ಗೆ ಊಹಾಪೋಹ ನಡೆದಿರುವದಾಗಿ ತಿಳಿಯುತ್ತದೆ. ಹೋದ ವರ್ಷ ಲಾರ್ಡ ಮೌಂಟಬ್ಯಾಟನ್ನರು ಬೇಸಿಗೆಯಲ್ಲಿ ಪಂಡಿತ ನೆಹರೂರನ್ನು ಸಿಮ್ಲಾಕ್ಕೆ ಕರೆಸಿಕೊಂಡು ಅಲ್ಲಿಯೇ ಭಾರತ ವಿಭಜನೆಯ ಯೋಜನೆಗೆ ಪಂಡಿತ ನೆಹರೂರ ಒಪ್ಪಿಗೆ ಪಡೆಯಲಾಯ್ತೆಂಬ ಅಂಶವು ಗಮನಾರ್ಹವೆಂದು ಎತ್ತಿತೋರಿಸಲಾಗುತ್ತಿದೆ.

ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನ ಹಿಂದುಸ್ತಾನಗಳಲ್ಲಿ ಉಂಟಾದ ವೈಮನಸ್ಸನ್ನು ಕೊನೆಗಾಣಿಸಲು ಬ್ರಿಟಿಶ ಸರಕಾರದವರು ಲಾರ್ಡ ಮೌಂಟಬ್ಯಾಟನ್ನರ ಮೂಲಕ ಪ್ರಯತ್ನ ನಡೆಸಿರುವರೆಂದೂ ಈ ಬಗ್ಗೆ ಕಾಶ್ಮೀರ ಸಂಸ್ಥಾನದಲ್ಲಿ ಪೂಂಛ, ಮೀರಪೂರ, ಗಿಲಜಿತ್ ಮತ್ತು ಕಾಶ್ಮೀರ ಕಂದರದ ಸ್ವಲ್ಪಭಾಗ ಇಷ್ಟು ಪ್ರದೇಶವನ್ನು ಪಾಕಿಸ್ತಾನಕ್ಕೂ, ಪೂರ್ವ ಜಮ್ಮು ಪ್ರಾಂತ ಲಾಡಕ ಮತ್ತು ಕಾಶ್ಮೀರ ಕಂದರದ ವಿಭಾಗ ಇಷ್ಟು ಪ್ರದೇಶವನ್ನು ಹಿಂದುಸ್ತಾನಕ್ಕೂ ಕೊಡಬೇಕೆಂದೂ ಯೋಜನೆ ಮುಂದೊಡ್ಡಿರುವದಾಗಿ ತಿಳಿಯುತ್ತದೆ. ಮೌಂಟ ಬ್ಯಾಟನ್ನರು ಗವ್ಹರ್ನರ ಜನರಲ್ ಪದದಿಂದ ನಿವೃತ್ತರಾಗುವ ಮೊದಲೇ ಕಾಶ್ಮೀರ ಪ್ರಶ್ನೆಯನ್ನು ಎರಡೂ ಪಕ್ಷಗಳಿಗೆ ಸಮಾಧಾನಕಾರಕವಾಗುವಂತೆ ಬಿಡಿಸುವ ವಿಚಾರ ಇಟ್ಟುಕೊಳ್ಳಲಾಗಿದೆಯಂತೆ.

ನೆಹರು ಮೌಂಟಬ್ಯಾಟನ್ನರಲ್ಲಿ ಪರಸ್ಪರ ಆದರವಿದ್ದು ಪಂಡಿತ ನೆಹರು ಅವರ ಮನಒಲಿಸಬಹುದೆಂದು ಮೌಂಟಬ್ಯಾಟನ್ನರು ಆಸೆ ಇಟ್ಟುಕೊಂಡಿರುವರಾಗಿಯೂ ತಿಳಿಯುತ್ತದೆ.

ಒಟ್ಟಿನ ಮೇಲೆ ಹೈದರಾಬಾದದ ಬಗ್ಗೆ ಕೊನೆಯ ನಿರ್ಣಯವು ಸರದಾರ ವಲ್ಲಭಭಾಯಿಯವರ ಸನ್ನಿಧಾನದಲ್ಲಿ ಮಸೂರಿಯಲ್ಲಾಗಬಹುದೆಂದೂ ಕಾಶ್ಮೀರದ ಬಗ್ಗೆ ಕೊನೆಯ ನಿರ್ಣಯವು ಸಿಮ್ಲಾದಲ್ಲಿ ಆಗಬಹುದೆಂದೂ ತರ್ಕಗಳು ನಡೆದಿರುವವು.

ಕಾಶ್ಮೀರದ ದಾಳಿಗಾರರು

ಒಡಕು ಮತ್ತು ಬಂಡಾಯ

ಲಾಹೋರದ ಒಂದು ದೈನಿಕ ಪತ್ರಿಕೆಯು ಶ್ರೀನಗರದ ಸುದ್ದಿಗಾರನು ತಾ. ೧೫ ರಂದು ತನ್ನ ವರದಿಯಲ್ಲಿ ಕಾಶ್ಮೀರದ ದಾಳಿಗಾರರಲ್ಲಿ ಒಡಕು ಉಂಟಾಗಿ ಬಂಡಾಯ ವೆದ್ದ ಸಮಾಚಾರ ತಿಳಿಸಿದ್ದಾನೆ. ಅದರ ಸಾರ ಹೀಗಿದೆ:—

"ಕಾಶ್ಮೀರ ದಾಳಿಗಾರರಲ್ಲಿ ದೊಡ್ಡ ಪ್ರಮಾಣದಲ್ಲಿ ಒಡಕುಂಟಾಗಿ ಬಂಡಾಯವೆದ್ದಿದೆ. ದಾಳಿಗಾರರು ತಮ್ಮ ಅಧಿಕಾರಿಗಳನ್ನೇ ಕೊಲೆಮಾಡುತ್ತಿರುವರು; ಊರಿ ವಿಭಾಗದಲ್ಲಿ ಅನೇಕ ದಾಳಿಗಾರರ ಅಧಿಕಾರಿಗಳು ಮರಣಹೊಂದಿದ್ದಾರೆ."

ಕಾಶ್ಮೀರದಲ್ಲಿ ಪ್ರವೇಶಿಸಿದ ಇನ್ನೂರು ದಾಳಿಗಾರರು ಹಿಂದುಸ್ತಾನ ಸೈನ್ಯಕ್ಕೆ ತಾವಾಗಿಯೇ ಶರಣು ಹೋಗಿದ್ದಾರೆಂದು ಆಝಾದ ಕಾಶ್ಮೀರ ಮುಖಂಡರಾದ ಗುಲಾಮ ಅಬ್ಬಾಸರು ಪಾಕಿಸ್ತಾನ ಸರಕಾರಕ್ಕೆ ತಿಳಿಸಿ ತಮ್ಮ ನೆರವಿಗೆ ಪಾಕಿಸ್ತಾನ ಸರಕಾರವು ಬರದಿದ್ದರೆ ತಾವು ಬದುಕುವದೇ ಕಠಿಣವೆಂದು ಬಿನ್ನವಿಸಿಕೊಂಡ ಸುದ್ದಿಯು ಮೇಲ್ಕಾಣಿಸಿದ ಸಮಾಚಾರಕ್ಕೆ ಪುಷ್ಟಿ ಕೊಡುತ್ತದೆ.

ಬಾಡಿಗೆದಾರರ ತಂಟೆಗಳು

ಮುಂಬಯಿ ಸರಕಾರವು ಒಂದು ಪ್ರಕಟನೆ ಹೊರಡಿಸಿದ್ದು ಬಾಡಿಗೆದಾರರ ತಂಟೆಗಳ ಬಗ್ಗೆ ಹೀಗೆ ಉಲ್ಲೇಖಿಸಲಾಗಿದೆ.

ಮನೆ ಮಾಲಕರು, ಬಾಡಿಗೆದಾರರಿಗೆ ಇಲ್ಲದ ಕಿರುಕುಳ ಕೊಡುವದು, ಇಲ್ಲದ ಕಾರಣ ಹೇಳಿ ಮನೆ ಬಿಡಲು ಅನ್ಯಾಯವಾಗಿ ಒತ್ತಾಯ ಮಾಡುವದು, ಮನೆಗಳ ರಿಪೇರಿ, ನೀರು, ವಿದ್ಯುತ್ತಿನ ಪೂರೈಕೆ ನಿಲ್ಲಿಸುವದು ಅವಾಸ್ತವವಾಗಿ ಬಾಡಿಗೆ ಹೆಚ್ಚಿಸುವದು, ಪಗಡಿ ತೆಗೆದುಕೊಳ್ಳುವದು ಮುಂತಾದವುಗಳ ವಿಚಾರಣೆಗಾಗಿ ರೆಂಟ ಕೋರ್ಟಗಳನ್ನು ಸ್ಥಾಪಿಸಿದ್ದು ಈ ವಿಷಯದಲ್ಲಿ ಸರಕಾರವು ಕೈಹಾಕದಿಲ್ಲವೆಂದೂ ಎಲ್ಲ ತಂಟೆಗಳನ್ನು ರೆಂಟ ಕೋರ್ಟ ಮುಖಾಂತರ ಬಗೆಹರಿಸಿಕೊಳ್ಳತಕ್ಕದ್ದೆಂದೂ ಯಾರಾದರೂ ಪಗಡಿ ತೆಗೆದುಕೊಂಡದ್ದು ಕಂಡುಬಂದಲ್ಲಿ ಅಥವಾ ಅವಶ್ಯಕ ಸೌಕರ್ಯಗಳನ್ನು ಪೂರೈಸದಿದ್ದಲ್ಲಿ ಆ ಬಗ್ಗೆ ಪೋಲೀಸರಿಗೆ ತಿಳಿಸಿದಲ್ಲಿ ಅವರೇ ತಕ್ಕ ಕ್ರಮ ಕೈಕೊಳ್ಳುವರು ಎಂದೂ ಸ್ಪಷ್ಟಪಡಿಸಿದೆ.

ಗಿರಣಿಯೊಡೆಯರೇ ತುಟ್ಟಿ ಒಟ್ಟಿಗೆ ಕಾರಣರು

ಒಡೆಯರೊಬ್ಬರಿಂದ ರಹಸ್ಯಸ್ಫೋಟ

ಕಾರ್ಮಿಕ ಪದವೀಧರರ ಸಭೆಯಲ್ಲಿ ಅಹಮ್ಮದಾಬಾದ ಗಿರಣಿಯ ಒಡೆಯರಾದ ಶ್ರೀ. ಮ. ಹೇಂದ್ರ ಶಾಂತಿಲಾಲ ಶಹಾರವರು ತಾ. ೧೪ ರಂದು ಭಾಷಣ ಮಾಡುತ್ತ, ಬಟ್ಟೆಯ ಬೆಲೆ ಮಿತಿಮೀರಿ ಏರಿದ ಕ್ಕೆ ಗಿರಣಿಯೊಡೆಯರು ನೋಗಗಾರಿಕೆಯಿಂದ ಕಳ್ಳಪೇಟೆಯಲ್ಲಿ ಸರಕು ಮಾರಿ ಅಪಾರ ಧನ ಸಂಪಾದನೆಯ ಬೆನ್ನು ಹತ್ತಿದುದೇ ಕಾರಣವೆಂದು ಒಂದು ದೊಡ್ಡ ರಹಸ್ಯವನ್ನು ಮುಕ್ತಕಂಠದಿಂದ ಸಾರಿ ಹೇಳಿದರು. ಜವಳಿ ಗಿರಣಿ ಒಡೆಯರು ಸಮಾಜ ಸೇವೆಯ ತಮ್ಮ ಹೊಣೆಯನ್ನು ಮರೆತು ಕರ್ತವ್ಯಚ್ಯುತರಾಗಿದ್ದಾರೆಂದೂ ಸ್ವಾರ್ಥಪರತೆಯಿಂದ ಜವಳಿಯ ಉದ್ಯೋಗಕ್ಕೇ ಗಂಡಾಂತರ ತಂದೊಡ್ಡಿದ್ದಾರೆಂದೂ ನಿವೇದಿಸಿದರು. ಇದೇ ಬಗೆಯ ಧನಲಾಲಸೆಯು ಗಿರಣಿಯೊಡೆಯರಲ್ಲಿ ಕೆಲ ಕಾಲ ನೆಲೆಯೂರಿದ್ದಾದರೆ ಎಲ್ಲ ಗಿರಣಿಗಳನ್ನೂ ಮುಚ್ಚುವ ಪ್ರಸಂಗ ಬರಬಹುದೆಂದೂ ಇದರಿಂದ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಉಂಟಾಗಿ ಅನೇಕರಿಗೆ ಅನ್ನ ಸಿಗದಾಗಬಹುದೆಂದೂ ಎಚ್ಚರಿಸಿದರು.

ಈ ಸಂಸ್ಥೆಗೆ ಶ್ರೀ. ಜೆ. ಸಿ. ಸೆಟಲವಾಡರು ಅಧ್ಯಕ್ಷರಾಗಿದ್ದರು. ಅವರು ಮಾತನಾಡುತ್ತ, ಇಂದಿನ ಸರಕಾರದಲ್ಲಿ ಬಂಡವಲಗಾರರ ಏಜಂಟರಿರುವರು. ಆದ್ದರಿಂದ ಗಿರಣಿಯೊಡೆಯರ ಕುಟಿಲ ಕಾರಸ್ಥಾನವನ್ನು ನಿಲ್ಲಿಸಲು ಈ ಸರಕಾರವು ಅಸಮರ್ಥವಾಗಿದೆ. ಮುಂದಿನ ಚುನಾವಣೆಯಲ್ಲಿ ಸಮತಾವಾದಿಗಳನ್ನು ಎದುರಿಸಲು ಬಂಡವಲ್ಗಾರರ ಬೆಂಬಲ ದೊರಕಿಸಲು ಸರಕಾರವು ಇವರ ಬಗ್ಗೆ ಸೌಮ್ಯ ಧೋರಣ ಅನುಸರಿಸಿದ್ದೇ ಈ ಅನಾಹುತಕ್ಕೆ ಕಾರಣ ಎಂದು ಖಂಡಿತವಾಗಿ ಪ್ರತಿಪಾದಿಸಿದರು.

ಭಾಷಾವಾರ ಪ್ರಾಂತ ರಚನೆ

ರಾಜೇಂದ್ರ ಪ್ರಸಾದರ ಆಸ್ಥೆ

ಕರ್ನಾಟಕ, ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರಗಳ ಪ್ರಾಂತ ನಿರ್ಮಾಣದ ಬಗ್ಗೆ ಮುಂದಿನ ಉಪಕ್ರಮವೇನೆಂಬುದನ್ನು ನಿರ್ಧರಿಸುವಲ್ಲಿ ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರ ಲಕ್ಷ್ಯವು ವೇಧಿಸಿರುವದಾಗಿ ತಿಳಿಯುತ್ತದೆ. ಈ ಪ್ರಾಂತ ನಿರ್ಮಾಣದ ವಿಷಯವನ್ನು ಪರಿಶೀಲಿಸಲು ನೇಮಿಸಲ್ಪಟ್ಟ ಸಮಿತಿಯವರೊಡನೆ ಡಾ. ರಾಜೇಂದ್ರ ಪ್ರಸಾದರು ತಂತೀ ಮೂಲಕ ಪತ್ರವ್ಯವಹಾರ ನಡೆಸಿರುವರೆಂದೂ ತಿಳಿದಿದೆ.

ಈ ಸಮಿತಿಯಲ್ಲಿ ಶ್ರೇಷ್ಠ ನ್ಯಾಯಾಧೀಶರೊಬ್ಬರು, ಉತ್ತಮ ತರಗತಿಯ ವಕೀಲರೊಬ್ಬರು ಮತ್ತು ಲೋಕಪ್ರಿಯ ಮುಖಂಡರೊಬ್ಬರು ಹೀಗೆ ಮೂವರು ಇರುವರೆಂದು ತಿಳಿಯುತ್ತದೆ. ಈ ಸಮಿತಿ ಸದ್ಯಕ್ಕೆ ಕೆಲ ಸತ್ಯ ಸಂಗತಿಗಳನ್ನು ಅರಿತುಕೊಳ್ಳುವದರಲ್ಲಿ ತೊಡಗಿದೆ. ಅವಶ್ಯವಾದ ಅಂಕಿ ಸಂಖ್ಯೆಗಳನ್ನು ಶೇಖರಿಸಿದ ನಂತರ ಈ ಸಮಿತಿಯು ಸದ್ಯದ ಮದ್ರಾಸ, ಮುಂಬಯಿ, ಮಧ್ಯಪ್ರಾಂತ ಮೊದಲಾದವುಗಳಿಂದ ಹೊಸ ಪ್ರಾಂತಗಳನ್ನು ನಿರ್ಮಿಸುವ ಕೆಲಸಕ್ಕೆ ಕೈಯಿಕ್ಕಲಿದೆ.

ಈ ಹೊಸ ಪ್ರಾಂತ ನಿರ್ಮಾಣದ ಕಾರ್ಯದಲ್ಲಿ ಈ ಸಮಿತಿಯು ಆಯಾ ಪ್ರಾಂತದ ಏಕೀಕರಣ ಚಳವಳಿಯ ಮುಖಂಡರ ಸಹಕಾರವನ್ನೂ ಪಡೆದುಕೊಳ್ಳುವದು. ಡಾ. ರಾಜೇಂದ್ರ ಪ್ರಸಾದರು ಈ ಸಮಿತಿಯೊಡನೆ ಪತ್ರವ್ಯವಹಾರವನ್ನಿಟ್ಟುಕೊಂಡಿದ್ದಾರೆ. ಈ ಸಮಿತಿಯು ಓರಿಸಾ ಬಂಗಾಲಗಳಲ್ಲಿ ಹೊಸ ಪ್ರಾಂತ ನಿರ್ಮಾಣದ ವಿಷಯವನ್ನೂ ಚರ್ಚಿಸಬಹುದೆಂದು ನಿರೀಕ್ಷಿಸಿದೆ.

ಮದ್ರಾಸ ಪ್ರಾಂತಿಕ ಮ್ಯುನಿಸಿಪಲ್ ಭಂಗಿಗಳ ಸಂಘದ ಕಾರ್ಯದರ್ಶಿಗಳಾದ ಎಲ್. ವಿ. ರತ್ನಂ ಅವರ ಬಂಧನದ ನಿಷೇಧಾರ್ಥವಾಗಿ ಬಿಜವಾಡ ಮುನಿಸಿಪಾಲಟಿಯ ೬೦೦ ಭಂಗಿ ಜನರು ತಾ ೧೭ ರಂದು ಸಂಪು ಹೂಡಿದ್ದಾರೆ ಅವರು ಮೆರವಣಿಗೆಯನ್ನೂ ತೆಗೆದಿದ್ದರು. ಆದರೆ ಪೋಲೀಸ ಇನ್ಸ್ಪೆಕ್ಟರರು ಬಂದಕೂಡಲೆ ಚದುರಿದರು. ಪೋಲೀಸರಿಗೆ ರತ್ನಂರ ಬಗ್ಗೆ ಮಾಹಿತಿ ಕೊಟ್ಟು ತಮ್ಮ ಪಕ್ಷದ ಒಬ್ಬನನ್ನು ಕಮ್ಯುನಿಸ್ಟರು ಹೊಡೆದಿದ್ದುದು ತಿಳಿದದ್ದರಿಂದ ಪೋಲೀಸರು ೭ ಕಮ್ಯುನಿಸ್ಟರನ್ನು ಬಂಧಿಸಿರುವರು.

ರಾಯಭಾರಿ ಆಸಫ ಅಲ್ಲಿ

ನಾಡಿಗ ಕೃಷ್ಣಮೂರ್ತಿಯವರಿಂದ

೧೪ ತಿಂಗಳು ಕಾಲ ಅಮೇರಿಕದಲ್ಲಿ ಭಾರತದ ಅಧಿಕೃತ ರಾಯಭಾರಿಗಳಾಗಿದ್ದ ಶ್ರೀ ಅಸಫ ಅಲ್ಲಿಯವರು ಸದ್ದಿಲ್ಲದೆ, ಭಾರತೀಯರಾದ ಸಾಮಾನ್ಯ ವೃಂದಕ್ಕೆ (ನಮಗೆ-ವಿದ್ಯಾರ್ಥಿಗಳಿಗೆ-ವಸಾಹತು ಭಾರತೀಯರಿಗೆ) ತಿಳಿಸದೆ ಹತ್ತು ದಿನಗಳ ಕೆಳಗೆ 'ಕ್ವೀನ್ ಮೇರಿ'ಯನ್ನು ಹತ್ತಿ ಭಾರತಾಭಿಮುಖವಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು. ಈ ಸುದ್ದಿ ಕೂಡ "ನ್ಯೂಯಾರ್ಕ ಟೈಂಸ್" ಪತ್ರಿಕೆಯಲ್ಲಿ ಬಹು ಚತುರತೆಯಿಂದ ಬರೆಯಲ್ಪಟ್ಟಿತು. ಕೆಲವು ಭಾರತೀಯರು ಶ್ರೀ ಅಸಫ ಅಲ್ಲಿಯವರನ್ನು ಬೀಳ್ಕೊಡಲು ಹಡಗು ಕಿಲ್ಲಾ ಬಳಿಗೆ ಹೋಗಿದ್ದರೆಂದೂ ಕೆಲ ಸಂಭಾಷಣೆಗಳಾದ ನಂತರ ಅಸಫ ಅಲ್ಲಿಯವರಿಗೆ ಸುಖ ಪ್ರಯಾಣ ಕೋರಿದರೆಂದೂ ಬರೆದು ಕೊನೆಯ ವಾಕ್ಯದಲ್ಲಿ ಶ್ರೀ ಅಸಫ ಅಲ್ಲಿಯವರ ಬದಲು ಸದ್ಯಕ್ಕೆ ಯಾರು ನೇಮಕವಾಗುವರೆಂಬುದು ಗೊತ್ತಿಲ್ಲವೆಂದೂ ಮಂತ್ರಿಗಳಿಂದ (ಪಂಡಿತ ನೆಹರುರ ಸಂಬಂಧಿ) ಶ್ರೀ ಅರ್. ಕೆ. ನೆಹರುರವರೇ ರಾಯಭಾರಿ ಕೆಲಸ ಸದ್ಯಕ್ಕೆ ನೋಡಿಕೊಳ್ಳುವರೆಂದೂ ಪ್ರಕಟವಾಗಿತ್ತು. ಯಾವ ನಿಗೂಢ ವಿದ್ಯಮಾನಗಳಲ್ಲಿ ಅಸಫ ಅಲ್ಲಿಯವರು ಭಾರತಕ್ಕೆ ಮರಳಿದರೋ ನಮಗೆ ಗೊತ್ತಿಲ್ಲ. ನೆಹರೂ ಸರಕಾರ ಅವರನ್ನು ಹಿಂದೆ ಕರೆಸಿತೊ? ಅಥವಾ ಅಸಫ ಅಲ್ಲಿಯವರೇ ಬೇಡವೆಂದು ಬಿಟ್ಟು ಹೋದರೇ? ಮಧ್ಯ ಇನ್ನೇನಾದರೂ ರಹಸ್ಯ ನಡೆಯಿತೇ? ಈ ಪ್ರಶ್ನೆಗಳಿಗೆ ೧೨೦೦೦ ಮೈಲು ದೂರದಿಂದ ನಾ ಉತ್ತರ ಕೊಡಲಾರೆ. ವಾಚಕರೇ ನನಗೆ ಬರೆದು ತಿಳಿಸಬೇಕು.

ಈ ಲೇಖನದಲ್ಲಿ ಶ್ರೀ ಅಸಫ ಅಲ್ಲಿಯವರ ೧೪ ತಿಂಗಳ ಕಾರ್ಯಭಾರ, ಭಾರತದ ವಾಷಿಂಗಟನ್ ಕಚೇರಿ ಮುಂತಾದವುಗಳ ಬಗ್ಗೆ ನನಗೆ ತಿಳಿದ ಮಟ್ಟಿಗೆ ಕೆಲವಂಶಗಳನ್ನು ತಿಳಿಸುತ್ತೇನೆ.

ಶ್ರೀ ಅಸಫ ಅಲ್ಲಿಯವರು ಭಾರತದ ರಾಯಭಾರಿಗಳೆಂದು ನೇಮಕವಾದಾಗ ಇಲ್ಲಿನ ಭಾರತೀಯರೆಲ್ಲರೂ ಸಂತೋಷ, ಆನಂದ ಉತ್ಸಾಹ ವ್ಯಕ್ತಪಡಿಸಿದರು. ಅದೇ ಉತ್ಸಾಹ ಅವರು ಹೋಗುವ ವೇಳೆಗೆ ಅಷ್ಟಿರಲಿಲ್ಲ. ಇಲ್ಲಿನ ಪತ್ರಿಕೆಗಳೆಲ್ಲವೂ ಅವರ ಭಾವಚಿತ್ರಗಳನ್ನು ಮುದ್ರಿಸಿ "ಭಾರತದ ಮೊದಲನೆಯ ರಾಯಭಾರಿ", "ಸ್ವತಂತ್ರ ರಾಷ್ಟ್ರದ ಹೊಸ ಪ್ರತಿನಿಧಿ", "ಭಾರತದ ಆಶಾಕಿರಣ" ಎಂದು ಬರೆದಿದ್ದವು. ಅವರು ಹೋಗುವಾಗ ನ್ಯೂಯಾರ್ಕ ಟೈಮ್ಸ್ ಒಂದಲ್ಲದೆ ಬೇರಾವ ಪತ್ರಿಕೆಗಳು ಸುದ್ದಿ ಪ್ರಕಟಿಸಿದ್ದು ಕಂಡುಬರಲಿಲ್ಲ.

"ದುಷ್ಯಂತನಿಲ್ಲದ ಶಾಕುಂತಲ"

ರಾಯಭಾರಿಯಾಗಿ ಶ್ರೀ ಅಸಫ ಅಲ್ಲಿಯವರು ಅಷ್ಟಾಗಿ ತಮ್ಮ ಪ್ರಭಾವವನ್ನು ಅಮೇರಿಕದ ಮೇಲೆ ಬೀರಲಿಲ್ಲವೆಂದರೆ ಅದು ಅಷ್ಟೇನೂ ಅಸತ್ಯವಾಗಲಾರದು. ಹಾಗೆಂದು ಅವರೇನೂ ಮಾಡಲಿಲ್ಲವೆಂದರೆ ಸತ್ಯಕ್ಕೆ ದೂರವಾದೀತು. ೪೭ ನೇ ಫೆಬ್ರುವರಿಗೆ ಬಂದವರು ಒಂದು ತಿಂಗಳು ವಿಶ್ರಾಂತಿ ತೆಗೆದುಕೊಂಡು ಎಪ್ರಿಲ್‌ನಲ್ಲಿ ನ್ಯೂಯಾರ್ಕಿಗೆ ಭೇಟಿಯಿತ್ತು ನಗರದ ಮೇಯರರನ್ನು ಕಂಡರು. ಭಾರತ ಲೀಗಿನ ಔತಣ ಸ್ವೀಕರಿಸಿದರು. ಕಾಮೋಡರ್ ಹೋಟೆಲಿನಲ್ಲಿ ಆದ ಆ ಸಭೆ ಇನ್ನೂ ಜ್ಞಾಪಕದಲ್ಲಿದೆ. ಭಾರತೀಯ ಧ್ವಜದ ಕೆಳಗಡೆ ಕುಳಿತಿದ್ದ ಅಸಫ ಅಲ್ಲಿ, ಪಕ್ಕದಲ್ಲಿ ಶ್ರೀ ಪರ್ಲಬಕ್, ಆಕಡೆ ಭಾರತದಲ್ಲಿ ರೊಸವೆಲ್ಟ ರಾಯಭಾರಿಯಾಗಿದ್ದ ಶ್ರೀ ಫಿಲಿಪ್ಸ್, ಶ್ರೀಮತಿ ಹಕೀಸಿಂಗ ಮುಂತಾದ ಗಣ್ಯರು—ಜೊತೆಗೆ ೮೦೦ ಭಾರತೀಯ ಮತ್ತು ಅಮೇರಿಕದ ವಿಶೇಷ ಆಹೂತರು—ಅದೊಂದು ವಿಶೇಷ ಹಬ್ಬವೇ ಆಗಿತ್ತೆನ್ನಬೇಕು. ನಂತರ ಮೇ ತಿಂಗಳಲ್ಲಿ ಶ್ರೀ ಅಸಫ ಅಲ್ಲಿ ವಾಷಿಂಗಟನ್‌ದಲ್ಲಿರುವ ಸಂಧಿವಿಗ್ರಹಿಕರು (ರಾಜದೂತರು) ಗಳಿಗೆ ಮತ್ತು ಭಾರತೀಯರಿಗೆ ಒಂದು ಭಾರೀ ಔತಣ ಕೊಟ್ಟರು. ಈ ಔತಣಕ್ಕೆ ೮೨೦೦ ಡಾಲರು ಖರ್ಚಾಯಿತೆಂದು ವದಂತಿ. ಇಂತಹ ಔತಣಗಳು ದೇಶಗಳ ಸೌಹಾರ್ದಕ್ಕೆ ಆಗಬೇಕೆಂದು ರಾಜಕಾರಣಿಗಳ ಅಭಿಪ್ರಾಯ. ಭಾರತವೇನು ದರಿದ್ರ ದೇಶವಲ್ಲವೆಂಬುದನ್ನು ತೋರಿಸಿಕೊಟ್ಟರು ಅಸಫ ಅಲ್ಲಿ.

ಅಸಫ ಅಲ್ಲಿಯವರ ಪ್ರತಿಭೆ ಕಂಡದ್ದು ಹೋದ ವರ್ಷ ಪ್ಯಾಲಿಸ್ತೈನದ ಬಗ್ಗೆ ಯುಕ್ತರಾಷ್ಟ್ರ ಸಂಘದ ವಿಶೇಷ ಸಭೆ ನಡೆದಾಗ. ಅವರ ಭಾಷಣದ ವೈಖರಿ, ವಾದದ ತಿರುಳು, ಮಾತಿನ ಬಿಗುಪು ಎಲ್ಲರನ್ನೇ ಆಶ್ಚರ್ಯಗೊಳಿಸಿಬಿಟ್ಟಿತು. ಮರುದಿನ ಆ ಸಭೆಯ ಅಧ್ಯಕ್ಷರಾದ ಶ್ರೀ ಅಸವಾಲ್ಡೊ ಅರ್ಹನ್ನರವರು ಗೈರುಹಾಜರಾದಾಗ, ಶ್ರೀ ಅಸಫ್ ಅಲ್ಲಿಯವರೇ ಅಧ್ಯಕ್ಷಗದ್ದುಗೆಯನ್ನೇರಿ ಕಾರ್ಯ ನಡೆಸಿದ್ದು ನನಗಿನ್ನೂ ಜ್ಞಾಪಕವಿದೆ. ಆ ದಿನ ನಾನೂ ಸಭೆಗೆ ಹೋಗಿದ್ದೆ. ಅರಬ ಪ್ರತಿನಿಧಿಗಳು ಸಭೆಯನ್ನು ಬಹಿಷ್ಕರಿಸಿದ್ದರು ಮಾಡಿದ್ದರು. ಆ ಬಗ್ಗೆ ಮಾತನಾಡುತ್ತಾ ಅಸಫ ಅಲ್ಲಿ "We are playing the drama of Hamlet, without the prince of Denmark" (ದುಷ್ಯಂತವಿಲ್ಲದ ಶಾಕುಂತಲ ಆಡುತ್ತಿದ್ದೇವೆ) ಎಂದಿದ್ದರು. ಅಂದಿನ ನ್ಯೂಯಾರ್ಕ ಪತ್ರಿಕೆಗಳು, ಕಾಲಮಿಸ್ಟರು ಅಸಫ ಅಲ್ಲಿಯವರನ್ನು ಹೊಗಳಿದ್ದೇ ಹೊಗಳಿದ್ದು.

ಅಸಫ ಅಲ್ಲಿಯವರ ಎರಡನೆಯ ಸ್ತುತ್ಯಕಾರ್ಯ ಅವರ ಒಳನಾಡಿನ ಸಂಚಾರ. ಭಾರತೀಯ ವಿದ್ಯಾರ್ಥಿಗಳಿರುವ ಮುಖ್ಯವಾದ ವಿಶ್ವವಿದ್ಯಾನಿಲಯಗಳನ್ನು, ವಸಾಹತುಗಳನ್ನು ಭೇಟಿ ಮಾಡಿ ಭಾರತದ ಬಗ್ಗೆ ಹೆಮ್ಮೆಯಿಂದ ನಡೆದುಕೊಳ್ಳಬೇಕೆಂದು ಉಪದೇಶಿಸುತ್ತಾ, ಅಮೇರಿಕನ್ ಜನ ಬಂದ ಸಭೆಗಳಲ್ಲಿ, ಯಾವಾಗಲೂ ಭಾರತದ ಅರ್ಥಿಕ ಸಂಪತ್ತು, ಕೈಗಾರಿಕೆ, ಖನಿಜಗಳ ಬಗ್ಗೆ ಪ್ರಭಾವಯುತ ಭಾಷಣಗಳನ್ನು ಮಾಡಿ ಭಾರತದ ಕೀರ್ತಿಯನ್ನು ಎತ್ತಿ ಹಿಡಿದರು.

ಗಾಂಧೀಜಿಯ ಮರಣದ ನಂತರ ನಡೆಯಿಸಿದ ಸಂತಾಪ ಸೂಚಕ ಸಭೆ— ಆ ಸಭೆಗೆ ಅಧ್ಯಕ್ಷ ಟ್ರೂಮನ್ನರೊಡಗೂಡಿ ಎಲ್ಲಾ ಸಂಧಿವಿಗ್ರಹಿಗಳು ಬರುವಂತೆ ಮಾಡಿದ್ದು— ಅಸಫ ಅಲ್ಲಿಯವರ ಕೊನೆಯ ಕಾರ್ಯ. ಇಂತಹ ಸಭೆ ಅಮೇರಿಕದ ಇತಿಹಾಸದಲ್ಲೇ ನಡೆದಿರಲಿಲ್ಲವೆಂದು ಅಲ್ಲಿನ ಜನರ ಅಭಿಪ್ರಾಯ. ಗಾಂಧೀಜಿಯ ಸಂದೇಶವನ್ನು ತುಂಬಾ ಪ್ರತಿಭೆಯಿಂದ ಅಸಫ ಅಲ್ಲಿ, ಅಲ್ಲಿ ಸಾರಿದರು.

ಕಾಶ್ಮೀರದ ಬಗ್ಗೆ ಮೌನ

ಇಲ್ಲಿನ ಭಾರತೀಯರಿಗೆ ಅಸಮಾಧಾನವಾದದ್ದು, ಕಾಶ್ಮೀರದ ಸಮಸ್ಯೆಯು. ರಾ. ಸಂಘದ ಮುಂದೆ ಬಂದಾಗ ಶ್ರೀ ಅಸಫ ಅಲ್ಲಿ ರಾಯಭಾರಿಯಾಗಿ ಎಷ್ಟು ಪ್ರಚಾರ ಮಾಡಬೇಕಿತ್ತೋ ಅಷ್ಟು ಮಾಡಲಿಲ್ಲವೆಂದು ಅವರ ಮೇಲೆ ಅಪಾದನೆ ಇದೆ. ಪಾಕಿಸ್ತಾನದ ರಾಯಭಾರಿ ಇಸ್ಪಾಹನಿ, ಅಪಪ್ರಚಾರ ಮಾಡುತ್ತಿದ್ದು ಸ್ಥಾನಭದ್ರ ಮಾಡಿಕೊಳ್ಳುತ್ತಿದ್ದಾಗ ಭಾರತದ ರಾಯಭಾರಿ ಒಂದು ಮಾತು ಆಡದೆ ಇದ್ದದ್ದು ಇಲ್ಲಿನ ಭಾರತೀಯರಿಗೆ ಅಸಮಾಧಾನ. ಅಸಫ ಅಲ್ಲಿ ಆಗ ತೀವ್ರ ಖಾಹಿಲೆಯಿಂದ ಹಾಸಿಗೆ ಹಿಡಿದದ್ದು ಜನಕ್ಕೆ ತಿಳಿಯುವುದು ಹೇಗೆ? ಇದು ನಿಜ ಆದರೂ ಅವರು ಗುಣ ಹೊಂದಿದ ವೇಳೆ ಕಾಶ್ಮೀರದ ಬಗ್ಗೆ ಮಾಡಬೇಕಾದಷ್ಟು ಪ್ರಚಾರ ಮಾಡಲಿಲ್ಲವೆಂದು ಗೊಣಗುವುದು ಹೋಗಲೇ ಇಲ್ಲ.

ಅರುಣಾಳ ಪ್ರಭಾವ

ಯುಕ್ತರಾಷ್ಟ್ರ ಅರ್ಥಿಕ ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆಯ ಸಭೆಗಾಗಿ ಭಾರತದ ಪ್ರತಿನಿಧಿಯಾಗಿ ಬಂದಿದ್ದ ಶ್ರೀಮತಿ ಅರುಣಾ ಅಸಫ ಅಲ್ಲಿ, ವಾಷಿಂಗ್‌ಟನ್ನಿಗೆ ಬಂದಾಗ, ಭಾರತದ ರಾಯಭಾರಿ ಕಚೇರಿಗೇ ಒಂದು ಕಳೆ ಏರಿತ್ತು. ಅಸಫ ಅಲ್ಲಿಯವರ ತೂಕ ಕೂಡ ಒಂದು ಗುಂಜಿ ಏರಿ

(೧೨ನೆಯ ಪುಟ ನೋಡಿರಿ)

ಚಿತ್ರಕಾರ ಕೆ. ಎಸ್. ಕುಲಕರ್ಣಿಯವರ ಪುರುಷ ಪ್ರಮಾಣ ಗಾಂಧೀಚಿತ್ರವನ್ನು ಲೇಡಿ ಮೌಂಟ್‌ಬ್ಯಾಟನ್ನರು ನೋಡುತ್ತಿರುವುದು. ಈ ಚಿತ್ರ ದಿಲ್ಲಿಯಲ್ಲಿ ಮೊನ್ನೆ ನಡೆದ ಅ. ಭಾ. ಲಲಿತಕಲಾ ಪ್ರದರ್ಶನದಲ್ಲಿ ಇಡಲ್ಪಟ್ಟಿತ್ತು.

ಹಿಂದುಸ್ತಾನ ಸರಕಾರದ ಗಣಿ ಮಂತ್ರಿ ಶ್ರೀ ಕಾಕಾಸಾಹೇಬ ಗಾಡಗೀಳರು ಮೊನ್ನೆ ಕಾವ್ಯ ಗದಗಿನಲ್ಲಿ ಪಾಣಿಗ್ರಹಣಮಾಡಿದ ಶ್ರೀಮತಿ ರಂಗೂಬಾಯಿಯೊಡನೆ.

ಬಸ್ ಜನರ ಸಂಚಾರಿ ಫಲಾಹಾರ ಗೃಹ: ಇಂಗ್ಲಂಡಿನಲ್ಲಿ ಇದೊಂದು ಅತ್ಯಾಧುನಿಕ ಕೌತುಕ. ಇದರಲ್ಲಿ ಅಡಿಗೆ ಮನೆ, ೧೬ ಜನ ಗಿರಾಕಿಗಳಿಗೆ ಫಲಾಹಾರ ಒದಗಿಸುವಷ್ಟು ಆಸನಗಳು ಇದೆಲ್ಲ ಇವೆ.

ಜನಮತ

ಅನ್ನ ಬಟ್ಟೆಯ ಗೋಳು

ಜನವುತಪ್ರಕಾಶಕರೇ,

ಸವಿನಯ ವಂದನೆಗಳು. ಆಹಾರ ವಸ್ತ್ರಗಳ ಬೆಲೆ ಏರಿದ್ದರ ಬಗ್ಗೆ ಕೂಗು ಬಹಳ ಎದ್ದಿದೆ. ಮಂತ್ರಿಗಳ ಅಜ್ಞಾನದ ಅನ್ಯಾಯವರ್ಷ ಅನೇಕ ಸಲ ಸಿಕ್ಕಿದೆ. ಆದರೆ ಅದು ಕಾರ್ಯರೂಪಕ್ಕೆ ಇಳಿಯದಿರುವುದರಿಂದ ಬಾಯಾರಿದವ ಅರ್ಧ ಗುಟುಕು ನೀರು ಕುಡಿದಾಗ ಗಂಟಲಲ್ಲೇ ಅದು ಬತ್ತಿ ಹೋದಂತಾಗಿದೆ. ಸೆಟ್ಟಿ ಸಿಂಗರ್‌ಕೊಳ್ಳುವವರೊಳಗೆ ಬಟ್ಟೆ ಸೂರೆಯಾಯಿತು ಎಂಬಂತೆ, ಈ ಮಂತ್ರಿಗಳು ಭಾಷಣ ಮಾಡಿ, ಅನಂತರ ಅದು ಒಂದು ಯೋಜನೆಯಾಗಿ, ಆ ಯೋಜನೆ ಕಾರ್ಯರೂಪಕ್ಕೆ ಬರಬೇಕಾದರೆ ಕಿರಿಯ ಸೋಮವಾರ ಬರಬೇಕು ಎಂದು ತೋರುತ್ತದೆ. ಈ ಗೋಳಿಗೆ ಮದ್ದೇ ಇಲ್ಲವೆ? ಬ್ರಿಟಿಶಶಾಹಿಯಿಂದ ಬಂದ ಈ ದೀರ್ಘಸೂತ್ರತ್ವ ಕಾಂಗ್ರೆಸ್ ಸರಕಾರಗಳಿಗೂ ಅಂಟಿಕೊಂಡುಬಿಟ್ಟಿತೆ? ಮತ್ತೆ ನಿಯಂತ್ರಣ ಹೇರುವ ಒಣ ಬೆದರಿಕೆ ಹಾಕಿದ್ದರಿಂದ ವ್ಯಾಪಾರಿಗಳು ವಸ್ತುಸಂಗ್ರಹ ಮಾಡಿ ಬೆಲೆ ಮತ್ತಷ್ಟು ಏರಿಸುವಂತಾಯಿತಲ್ಲದೆ ಅದರಿಂದ ಯಾವ ವಿಧದ ಸತ್ಫಲವುಂಟಾಗಲಿಲ್ಲ. ಶೇರ ಬಜಾರದಲ್ಲಿ ೩-೪ ದಿನ ಇಳಿತಾಯವಾಗಿದ್ದೊಂದೇ ಅದರಿಂದಾದ ಅಲ್ಪ ಸತ್ಪರಿಣಾಮ. ಸರಕಾರದವರ ಈ ವಾಗಿಂದ್ರಜಾಲ ಬಡಜನರ ಕೊರಳಿಗೆ ಉರುಳಾಗಿದೆ. ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ ಎಂಬಂತಾದುದಕ್ಕೆ ಪ್ರತೀಕಾರವೇ ಇಲ್ಲವಲ್ಲ!

—ದರಿದ್ರನಾರಾಯಣ

× × ×

ಈ ವ್ಯಕ್ತಿತ್ವ

ಸಂಪಾದಕ ಮಹಾಶಯರೇ,

ಮೈಸೂರಿನ ಕೆಲ ಮಂದಿ ಅದೇನೋ ಮೈಸೂರಿನ ವ್ಯಕ್ತಿತ್ವ ಉಳಿಸಿಕೊಳ್ಳಬೇಕು, ಹಾಗೆ ಹೀಗೆ ಅನ್ನುತ್ತಿರುವುದರ ಅರ್ಥವೇನೆಂಬುದನ್ನು ದಯೆಯಿಟ್ಟು ಸ್ವಲ್ಪ ವಿವರಿಸುವಿರಾ? ಮೋಕ್ಷವೆಂದರೆ ವಿಶ್ವಚೈತನ್ಯದಲ್ಲಿ ಮಾನವನ ವ್ಯಕ್ತಿತ್ವದ ಲಯ ಎಂದು ಒಬ್ಬ ಹೇಳಿದನಂತೆ. ಮದುವೆ ಎಂದರೆ ಹೆಂಡತಿಗೆ ಅರ್ಧಾಂಗದ ಹಕ್ಕು ಬಿಟ್ಟುಕೊಡಬೇಕಾಗುವುದೆಂದು ಒಬ್ಬ ಬೆಚ್ಚಿಬಿದ್ದನಂತೆ. ಅಖಂಡ ಹಿಂದುಸ್ತಾನದಲ್ಲಿ ಉಳಿದರೆ ಮುಸಲ್ಮಾನರ ವ್ಯಕ್ತಿತ್ವ ಉಳಿಯದೆಂದು ಜಿನ್ನಾ ಸಾಹೇಬರು ಪಾಕಿಸ್ತಾನ ಸ್ಥಾಪಿಸಿದ್ದು ಗೊತ್ತೇ ಇದೆ. ನಾಗರಿಕ ಜನ ಒಬ್ಬರೊಡನೊಬ್ಬರಿದ್ದರೆ ಆಯಾ ವ್ಯಕ್ತಿಗಳು ಪರಸ್ಪರರಿಗಾಗಿ 'ಸ್ವಾಚ್ಛಂದ್ಯ'ದ ಕೆಲವಂಶವನ್ನು ಬಿಟ್ಟುಕೊಟ್ಟು ಉಳಿಯುವ 'ಸ್ವಾತಂತ್ರ್ಯ'ವನ್ನು ಮಾತ್ರ ಇಟ್ಟುಕೊಳ್ಳಬೇಕಾಗುತ್ತದೆ ಎಂದಾ, ವ್ಯಕ್ತಿತ್ವಭಂಗ ನಿವಾರಣಕ್ಕಾಗಿ ಪ್ರತಿಯೊಬ್ಬನೂ ನಾಳೆ ತನ್ನ ತನ್ನ ಸ್ಥಾನವನ್ನು ಸ್ಥಾಪಿಸಿಕೊಳ್ಳ ಹೊರಟರೆ, ಹಿಂದುಸ್ತಾನದ ೩೩ ಕೋಟಿ ವ್ಯಕ್ತಿಗಳೂ ೩೩ ಕೋಟಿ ಪಾಕಿಸ್ತಾನಗಳನ್ನು ಕಟ್ಟಿಕೊಳ್ಳಬೇಕಾದೀತು ಇಂಥದೇ ಕತೆ ಮೈಸೂರಿನ ವ್ಯಕ್ತಿತ್ವ ಉಳಿಸಿಕೊಳ್ಳಬೇಕೆಂಬವರದು! ಇವರಿಗೆ ಯಾರೂ ಬುದ್ಧಿ ಹೇಳುವವರೇ ಇಲ್ಲವೆ? 'ಎತ್ತು ಬಂದಾಗ ಕಣ್ಣುಮುಚ್ಚಿಕೊಳ್ಳ' ಎಂಬ ಗಾದೆಯಂತೆ ಇಂಥ ಸುವರ್ಣ ಸಂಧಿಯನ್ನು ಉದಾಸೀನದಿಂದ ನೋಡುತ್ತ ಕಾಲ ಕಳೆವ ಈ ಪಾಯುಭಕ್ಷಕತ್ವಕ್ಕೆ ಏನೆನ್ನಬೇಕು? ವ್ಯಕ್ತಿತ್ವ ಎಂದರೆ ಕತ್ತರಿಗೆದೆಯೋ ಬೆಳ್ಳಿಗೆದೆಯೋ? ಎಂದು ಅವರನ್ನೀಗ ಕೇಳಬೇಕಾಗಿದೆ.

—ಅರೆಮೈಸೂರಿಗ

× × ×

ಹಿಂದಿಯ ಲೀಲೆ!

ಪ್ರಿಯ ಸಂಪಾದಕರೇ,

ಹಿಂದುಸ್ತಾನದಲ್ಲಿ ಹೊರಗಿನ ವ್ಯವಹಾರ ಗಂಡಸರ ಪಾಲಿಗೇ ಈಗಲೂ ಇರುತ್ತಿದ್ದರೂ ಅವರಿಗಿಂತ ಮೊದಲು ಹಿಂದಿ ಕಲಿಯಲು ಮಾತೃಭಾಷಾ ಜ್ಞಾನವೇ ಸರಿಯಾಗಿಲ್ಲದ ಹೆಂಗಳೆಯರೇ ಹೋಗುವುದನ್ನು ಕಂಡರೆ ಕೆಲಸವಿಲ್ಲದ ಕುಂಬಾರ ಎಂಬ ಗಾದೆ ನನ್ನಂತೆ ನಿಮಗೂ ನೆನಪಾಗುವದಿಲ್ಲವೆ?

—ಹಿಂದೀಪ್ರಿಯ

ಬೆಂಗಳೂರಲ್ಲಿ ಮೇ. ೮ ನೇ ರಾತ್ರಿ ಮಿತ್ರರೊಬ್ಬರ ಮನೆಯ ಮೆಟ್ಟಲು ಇಳಿವಾಗ ಕಾಲು ಜಾರಿ ಎಡಗಾಲಿನ ಹರಡದ ಎಲುಬು ಮುರಿದು ಕರ್ನಾಟಕದ ಪ್ರಾಂತಾಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಹಾಸಿಗೆ ಹಿಡಿದಿದ್ದು ಈಗ ಗುಣವಾಗುತ್ತಿದೆ. ಕಾಲಿಗೆ ಪ್ಲಾಸ್ಟರ ಹಾಕಿ ಕಟ್ಟಲಾಗಿದೆ. ಹಲವು ದಿನಗಳ ವಿಶ್ರಾಂತಿಯು ಅವಶ್ಯಕತೆಯಿದೆ.

ವಿವಿಧ ಪ್ರಪಂಚ

ಆದರ್ಶ ಪ್ರಿಯತಮ!

ಅಮೇರಿಕದ ವಾಹನ ಸಾಮಗ್ರಿಯ ಕೆಲಸಗಾರರ ಸಂಘದ ಅಧ್ಯಕ್ಷನಾದ ವಾಲ್ಟರ್ ರೂಥರನು ಆದರ್ಶ ಪತಿಯೆನಿಸಿರುವನು. ಅವನು ಕುಡಿಯುವುದಿಲ್ಲ, ಸೇದುವುದಿಲ್ಲ, ಹೆಂಡತಿಯನ್ನು ಬಿಟ್ಟು ಪ್ರಯಾಣ ಮಾಡುವುದಿಲ್ಲ, ಮನೆಯಲ್ಲೇ ಕುಳಿತು ಗ್ರಾಮೋಫೋನು ಕೇಳುವನಲ್ಲದೆ ರಾತ್ರಿಯ ಕ್ಲಬ್ಬುಗಳಿಗೆ ಹೋಗುವುದಿಲ್ಲ. ಸಭೆಯಲ್ಲಿ ಹೆಚ್ಚು ಹೊತ್ತು ಇರುವ ಸಂದರ್ಭದಲ್ಲಿ ಕೂಡಲೆ ಮನೆಗೆ ಫೋನಿನಿಂದ ತಿಳಿಸುವನು. ಕಾಫಿ ತಿಂಡಿಗೆ ಕೂಡ ಹೊಟೇಲಿಗೆ ಹೋಗದೆ ಮನೆಗೆ ಹೋಗುವನು.

ಮೇಲಿನ ಗುಣಗಳಿಗಾಗಿ ಅವನ ಹೆಂಡತಿ ಶ್ರೀಮತಿ ಮೇ ಅವನನ್ನು ಬಹಳ ಮೆಚ್ಚಿಕೊಂಡಿದ್ದಾಳೆ. ಅವನನ್ನು ಆದರ್ಶಪತಿ ಎಂದು ತಿಳಿದಿದ್ದಾಳೆ. ಆದರೆ ರೂಥರನು ಈ ಪ್ರಕಾರ ವೇಳಾಪತ್ರಿಕೆಯನುಸಾರ ತನ್ನ ನಿತ್ಯ ಕಾರ್ಯಗಳನ್ನು ನಡೆಸುತ್ತಿದ್ದುದೇ ಅವನಿಗೆ ಮೃತ್ಯುವಾಗುವಂಥ ಸಂದರ್ಭವೊಂದು ಒದಗಿತು. ಒಮ್ಮೆ ಅಡಿಗೆ ಮನೆಯಲ್ಲಿ ರೂಥರನು ಐಸ್‌ಕ್ರೀಂ ಮೆಲ್ಲುತ್ತ ನಿಂತಿದ್ದಾಗ ಕಿಟಕಿಯಿಂದ ಯಾರೋ ಗುಂಡು ಹಾರಿಸಿದರು. ಸತ್ತೆ ಎಂದು ಅವನು ಬಿದ್ದ. ಹೆಂಡತಿಯ ಪಾತಿವ್ರತ್ಯದ ಫಲದಿಂದ, ಇವನ ಸಾತಿವ್ರತ್ಯದ ಭಾಗ್ಯದಿಂದ ಕೈಗೆ ಗುಂಡು ತಾಗಿತಲ್ಲದೆ ಎದೆಗೆ ತಾಗಲಿಲ್ಲ. ಅಂತೂ ಅಸುವಿ ಬದುಕಿದ. ಹೆಂಡತಿಗೆ ಹೋದ ಜೀವ ಬಂದಂತಾಯಿತು. ಅವನಿಗೆ ಗುಣವಾಗುವ ವರೆಗೆ ಅವನ ಎದೆಯ ಮೇಲೆ ಕೈಯಿಟ್ಟು ಆ ಅಮೇರಿಕದ ಸಾವಿತ್ರಿ ಹತ್ತಿರ ಕುಳಿತವಳು ಅತ್ತಿತ್ತ ಕದಲಲಿಲ್ಲ. ಆದರ್ಶ ಪ್ರಿಯತಮನನ್ನು ಉಳಿಸಿಕೊಂಡು ಆಕೆ ತಾನೂ ಆದರ್ಶ ಪ್ರಿಯತಮೆಯೆನಿಸಿದ್ದಾಳೆ!

× × ×

ಅಮೇರಿಕದ ಕಾಲೇಜು ತರುಣರು

ಅಮೇರಿಕದ ಕಾಲೇಜು ತರುಣ ತರುಣಿಯರಲ್ಲಿ ಸುಧಾರಣೆಯ ಪ್ರವೃತ್ತಿ ಹೆಚ್ಚಿದ್ದು ಶ್ರೇಯಸ್ಕರವಿದೆ. ಕಮ್ಯುನಿಜಂ, ರ್‍ಯಾಡಿಲಿಕಜಂ, ಉದಾರವಾದ- ಹೀಗೆ ನಾನಾ ತತ್ವಗಳ ಆರಾಧಕರು ಪರಸ್ಪರ ವಿಚಾರ ವಿನಿಮಯವನ್ನು ಸೌಹಾರ್ದದಿಂದ ನಡೆಸುತ್ತಿದ್ದಾರೆ. ಧಾರ್ಮಿಕ ವಿಷಯದಲ್ಲೂ ವಿಶೇಷ ಆಸಕ್ತಿಯನ್ನು ಈಗೀಗ ಅವರು ತೋರುತ್ತಿರುವರಂತೆ. ಮಿನ್ನಸೋಟ, ಮಿಸ್ಸೋರಿ ಮುಂತಾದಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ತರುಣ ಸಂಘಗಳು ಚರ್ಚೆ, ಭಾಷಣ, ಪ್ರಚಾರಗಳಿಂದ ಜನಮನವನ್ನು ಸೆಳೆದಿದ್ದಾರೆ.

ಜಾಗತಿಕ ಸಮಸ್ಯೆಗಳ ಪರಿಹಾರಕ್ಕಾಗಿ ಉದಾತ್ತ ತತ್ವಗಳನ್ನು ಆದರ್ಶವಾಗಿಟ್ಟುಕೊಂಡು ವಿಚಾರ ಮಾಡುವ ಪ್ರವೃತ್ತಿ ವಿದ್ಯಾರ್ಥಿಗಳಲ್ಲಿ ಉಂಟಾಗಿದೆ. ಜಾಗತಿಕ ಏಕೀಕರಣ, ಕುಲಭೇದ ಎಣಿಸದಿರುವುದು, ದೈನಂದಿನ ಜೀವನದಲ್ಲಿಯ ಸೌಕರ್ಯಗಳ ಅಭಾವವನ್ನು ನೀಗಿಸಲು ಶಾಸನ ಸಭಾ ಸದಸ್ಯರಿಗೆ ಬೆನ್ನು ಹತ್ತುವುದು, ಆಯಾ ಆಡಳಿತಕ್ಕೆ ಸಂಬಂಧಿಸಿದ ಅಧಿಕಾರಿಗಳಿಂದ ಕರ್ತವ್ಯವನ್ನು ಮಾಡಿಸುವದು ಮುಂತಾದ ಹಲವಾರು ದೇಶೋಪಕಾರಿ ಕಾರ್ಯಗಳಲ್ಲಿ ಅಮೇರಿಕದ ತರುಣ ಜನಾಂಗ ಕೈಹಾಕಿ ತಕ್ಕ ಮಟ್ಟಿನ ಯಶಸ್ಸನ್ನು ಸಂಪಾದಿಸಿದೆಯೆಂದು ಶ್ರೀ ಡಿಕ್ಸನ್ ಹಾರ್ಟವೆಲ್ಲರು ಬರೆಯುತ್ತಾರೆ. ಅಲ್ಲಲ್ಲಿ ಅಲ್ಪ ಸ್ವಲ್ಪ ವಿಂಗಡ ವರ್ಣದ್ವೇಷ ಮತ್ತು ಯೆಹೂದಿ ವಿರೋಧಿ ಭಾವ ಇದ್ದು ಅಡಗಿ ಹೋಗಿ ಒಂದು ಸಾಮಾನ್ಯ ಮಟ್ಟದ ಉದಾರ ನೀತಿಯ ವಿಚಾರಪರತೆ, ಕರ್ತವ್ಯದೃಷ್ಟಿ, ಕಾರ್ಯಸಾಧಕತೆಗಳು ಹುಡುಗರಲ್ಲಿ ತಲೆದೋರುತ್ತಿರುವುದು ಉಳಿದ ದೇಶಗಳ ತರುಣರಿಗೊಂದು ಒಳ್ಳೆಯ ಮಾದರಿಯಾಗಿದೆ.

\+ + +

ವಿಲಕ್ಷಣ ಔಷಧಾಲಯ

ಅಮೇರಿಕದ ಸೇಂಟ್ ಪೀಟರ್ಸ್ ಬರ್ಗನಲ್ಲಿ 'ವೆಬ್ಸ್ ಸಿಟಿ' ಎಂಬೊಂದು ಅತಿದೊಡ್ಡ ಚಿಲ್ಲರೆ ಅಂಗಡಿ ಇದೆ. ಅಲ್ಲಿಯ ವ್ಯಾಪಾರ ಅದ್ಭುತವಾದುದು. ೧೯೪೭ ರಲ್ಲಿ ಅಲ್ಲಿ ೧ ಕೋಟಿ ೨೦ ಲಕ್ಷ ಡಾಲರ್ ವ್ಯಾಪಾರ ನಡೆಯಿತು. ಅದರಲ್ಲಿ ೧೦ ಲಕ್ಷ ಡಾಲರಿಗಿಂತ ಹೆಚ್ಚು ಔಷಧ ವಿಕ್ರಯದಿಂದ ಬಂದದ್ದು.

ಕೇವಲ ಔಷಧಗಳಷ್ಟೇ ಅಲ್ಲದೆ ನಾನಾ ವಿಧದ ಇತರ ನಿತ್ಯೋಪಯೋಗಿ ಸಾಮಾನುಗಳೂ ಮೇಲಿನ ಅಂಗಡಿಯಲ್ಲಿ ಸಿಗುತ್ತವೆ. ಪ್ರತಿಯೊಂದು ಸಾಮಾನೂ ಇತರ ಅಂಗಡಿಗಳಲ್ಲಿಗಿಂತ ಬಹಳ ಅಗ್ಗಕ್ಕೆ ಕೊಡುವ ಅಂಗಡಿಯಾದುದರಿಂದ ಅಲ್ಲಿ ಹೋಗುವ ಗಿರಾಕಿಗಳ ಸಂಖ್ಯೆ ಸಾವಿರಗಟ್ಟಲೆಯಲ್ಲಿದೆ.

ಔಷಧಗಳ ಜೊತೆಗೆ ಸೌಂದರ್ಯಸಾಧನಗಳು, ಮದ್ಯಾದಿ ಆಸವಗಳು, ಹೆಂಗಸರ ಸಿದ್ಧವಸ್ತ್ರಗಳು, ಕಾಫಿ, ಗ್ಯಾಸೋಲೀನ್ ಮತ್ತು ಇತರ ಕಿರಾಣಿ ಸಾಮಾನುಗಳು ಅಂಗಡಿಯಲ್ಲಿ ಮಾರಲ್ಪಡುತ್ತವೆ. ಮಾಂಸ, ಮದ್ಯ ಮತ್ತು ಹೊಗೆಸೊಪ್ಪುಗಳ ಮಾರಾಟ ೨೫ ಲಕ್ಷ ಡಾಲರಿನಷ್ಟು ಆಗುತ್ತದೆ.

ಸೇಂಟ್ ಪೀಟರ್ಸ್ ಬರ್ಗನ ಜನಸಂಖ್ಯೆ ೧೧ ಲಕ್ಷದಷ್ಟಿದೆ. ಮೊದಲು ೨ ಅಟ್ಟದ ಚಿಕ್ಕ ಔಷಧಾಲಯವಾಗಿದ್ದ ಅಂಗಡಿ ಒಂದು ನಗರದಷ್ಟು ಬೆಳೆಯಿತು. ಈ ಜನಪ್ರಿಯತೆಗೆ ಸಾಮಾನುಗಳ ಗುಣ ಮತ್ತು ಅಗ್ಗ ಬೆಲೆ ಇವೇ ಕಾರಣಗಳು. ಅಂಗಡಿ ದಿನಕ್ಕೆ ೧೬ ಗಂಟೆಗಳ ಕಾಲ ವಾರದ ಏಳೂ ದಿವಸಗಳಲ್ಲಿ ತೆರೆದಿರುತ್ತದೆ.

'ವೆಬ್ಸ್ ಸಿಟಿ' ಯಲ್ಲಿ ಒಂದು ಸೋಡಾ ಬುಗ್ಗೆಯಿದೆ. ಅದು ೧೬೦ ಅಡಿ ಉದ್ದವಿದ್ದು ಪ್ರತಿದಿನ ೧೨೦೦ ಗ್ಯಾಲನ್ನಿನಷ್ಟು ಐಸ್‌ಕ್ರೀಂ ತಯಾರಿಸಿ ಮಾರುತ್ತದೆ; ೩ ಸಾವಿರ ಸೇರು ಹಾಲು ಅಂಗಡಿಯಲ್ಲಿ ಖರ್ಚಾಗುತ್ತದೆ.

ಇದಲ್ಲದೆ ಅಂಗಡಿಯ ಭದ್ರಂಕರಣ ವಿಭಾಗದಲ್ಲಿ ಕಳೆದ ವರ್ಷ ೧ ಕೋಟಿ ೪೦ ಲಕ್ಷ ವ್ಯಕ್ತಿಗಳಿಗೆ ತಲಾ ೪೯ ಸೆಂಟುಗಳಂತೆ ಕೇಶಸಂಸ್ಕಾರ ಕೊಡಲಾಗಿದೆ.

ವೆಬ್ಬನಿಗೆ ಕೇವಲ ೪೮ ವರ್ಷ ವಯಸ್ಸು. ಅವನ ಪ್ರಕಾರ ಚಿಲ್ಲರೆ ವ್ಯಾಪಾರಕ್ಕೆ ಸರಕಾರದ ರಕ್ಷಣೆಯಿರುವದು ಅನವಶ್ಯಕವಲ್ಲದೆ ಅನೀತಿಕರ. ಅವನು ಕೆಲಸದ ಕಾಲ, ಗುಣ ಮತ್ತು ನೀತಿ ಇವುಗಳಲ್ಲಿ ಸಾಮಾನ್ಯ ರೂಢಿಯನ್ನು ಒಪ್ಪುವದಿಲ್ಲ. ಅವನು ಬಹಳ ಕಾಲ ದಿನಕ್ಕೆ ೧೬ ತಾಸು ದುಡಿಯುತ್ತಿದ್ದನು.

ವೆಬ್ಬನು ಕಲಿತದ್ದು ೬ ನೆಯ ಇಯತ್ತೆಯ ವರೆಗೆ ಮಾತ್ರ. ಅವನು ಚಿಕ್ಕ ಆಳುಗಳಿಂದ ಚೆನ್ನಾಗಿ ಉದ್ಯಮವನ್ನು ಹೇರಿಕೊಳ್ಳುತ್ತಾನೆ.

ವೆಬ್ಬನು ದೊಡ್ಡ ಪ್ರಮಾಣದಲ್ಲಿ ಸಾಮಾನುಗಳನ್ನು ಮೂಲ ಆಕರವಾದ ಕಾರಖಾನೆಯಿಂದಲೇ ತರಿಸಿಕೊಳ್ಳುತ್ತಾನೆ. ಅಲ್ಲದೆ, ಒಂದರಲ್ಲಿ ನಷ್ಟ ಸಂಭವಿಸಿದರೆ ಅದನ್ನು ಇನ್ನೊಂದರಲ್ಲಿ ತುಂಬಿಕೊಳ್ಳುತ್ತಾನೆ. ಆದುದರಿಂದ ಅವನ ಮೇಲೆ ಸ್ಪರ್ಧೆ ಹೂಡಿ ಗೆದ್ದವರು ಈ ವರೆಗೆ ಯಾರೂ ಇಲ್ಲ. ತನ್ನ ಅಗ್ಗ ಬೆಲೆ ಮತ್ತು ಅನುಕೂಲ ವ್ಯವಹಾರಗಳಿಂದ ಅಂಗಡಿಗೆ ಅವನು ದಿನಕ್ಕೆ ಸುಮಾರು ೩೦ ಸಾವಿರ ಗಿರಾಕಿಗಳನ್ನು ಬರಮಾಡಿಕೊಳ್ಳುತ್ತಾನೆ. ಬಂಡವಾಳಶಾಹಿಯಲ್ಲಿ ಇರಬೇಕಾದ ನ್ಯಾಯವಾದ ವ್ಯಾಪಾರ ಸೌಲಭ್ಯವು (ಬಳಕೆಗಾರರ ದೃಷ್ಟಿಯಿಂದ) ಈ ಅಂಗಡಿಯಲ್ಲಿದ್ದಷ್ಟು ಉಳಿದ ಎಲ್ಲೂ ಇಲ್ಲವೆಂದರೆ ಅತಿಶಯೋಕ್ತಿಯಾಗದು.

× × ×

ದುರಭ್ಯಾಸದ ಪರಿಹಾರೋಪಾಯ

ವಿಜ್ಞಾನವಿಂದು ನಿಮ್ಮ ದುರಭ್ಯಾಸವನ್ನು ಗೆಲ್ಲಲು ಮಾರ್ಗ ತೋರಿಸಿದೆ. ಧೂಮಪಾನ, ಕುಡಿತ, ಉಗುರು ಕಡಿಯುವುದು ಮುಂತಾದ ಹಲವಾರು ದುರಭ್ಯಾಸಗಳಿವೆ. ಕೇವಲ ಇಚ್ಛಾಬಲದಿಂದ ಗೆಲ್ಲಬಹುದೆಂಬುದು ಸರಿಯಾದ ಉತ್ತರವಲ್ಲ. ಏಕೆಂದರೆ ಅಭ್ಯಾಸ ಇಲ್ಲವೆ ಚಟವೆಂಬುದು ಒತ್ತಿದ ಜಿಗಿದಂತೆಯಂತೆ (Spring).

ನೈಟ್ ಡನ್‌ಲಪ್ ಎಂಬ ಮನೋವಿಜ್ಞಾನಿಯು ಚಟಗಳ ಬಗ್ಗೆ ಬಹಳ ಅಭ್ಯಾಸ ಮಾಡಿ ದುರಭ್ಯಾಸ ಚಿಕಿತ್ಸಾಲಯವೊಂದನ್ನು ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಿದ್ದಾನೆ. ಅವನು ಚಟವನ್ನು ಗೆಲ್ಲಲು ಕೆಳಗಿನ ನಾಲ್ಕು ಹಂತಗಳ ಕಾರ್ಯಕ್ರಮವನ್ನು ಕೊಡುತ್ತಾನೆ:

(೧) ನೀವು ಆದರ್ಶ ಪರಿಣಾಮದ ಸ್ಪಷ್ಟ ಚಿತ್ರವನ್ನು ಮನಸ್ಸಿನ ಮುಂದೆ ಇಟ್ಟುಕೊಳ್ಳತಕ್ಕದ್ದು.

(೨) ನೀವು ಪ್ರಾಮಾಣಿಕವಾಗಿ ಅದನ್ನು ಸಾಧಿಸಲು ಯತ್ನಿಸಬೇಕು.

(೩) ಬದಲಿಸುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು.

ಪಾಕ್ಷಿಕ ಜಯವನ್ನು ಪಡೆಯಲಿಕ್ಕೂ ನೀವು ಸಿದ್ಧರಿರಬೇಕು.

ಅನಂತರ ಚಟವನ್ನು ಅದಕ್ಕೆ ಹತ್ತಿರವಾದ ಕಡಿಮೆ ಅಪಾಯದ ವಸ್ತುಗಳ ಸೇವನೆಯಿಂದ ಕ್ರಮೇಣ ಸುಧಾರಿಸಿಕೊಳ್ಳಬೇಕು.

ಗಾಳಿಬಂದಾಗ ತೂರಿಕೊ

೧

'ರಿಪುಗಳೆದೆತಾಕಿ ದಾ-
ಳಿಡಬಂದು ನಮ್ಮೂರ
ಗಲ್ಲಿಗಳ ನುಗ್ಗಿದರೆ ಮಾಳ್ಪುದೇನು?'
ಎಂದು ಕೇಳಲು ಹುಡುಗ,
ಆಚಾರ್ಯರೆಂದರಿಲೆ-
ಅದಕೇಕೆ ಚಿಂತೆ? ಅಲ್ಲಂಥದೇನು?

೨

'ಗಾಳಿಬಂದಾಗ ತೂ-
ರಿಕೊ ಎಂದು ನಾ ನಿನಗೆ
ಹೇಳಿದುದ ಮರೆತೆಯಾ? ಸೈನ್ಯನುಗ್ಗಿ
ದಾರಿಯಲಿ ಬರೆ, ಜೇಬಿ-
ನಿಂದ ನಶ್ಯದ ಪುಡಿಯ
ತೂರಿಬಿಡು ಮುಖದ ಮೇಲೆಲ್ಲ ಜಗ್ಗಿ-

೩

'ನಾನೇ ಕಮಾಂಡರೆಂ
ದೆನ್ನು ಬಲುಜೋರಿಂದ
ಕಂಗಾಣದೊಪ್ಪುವರು ನಿನ್ನ ನುಡಿಗೆ'
ಈ ಪಾಠ ಕಲಿತು ಕ-
ಟ್ಟಿದ ಚಿನ್ನ ಲೀಗನ್ನು
ಈಗ ಅವನೇ ಮೂರ್ತಿ ಅದರ ಗುಡಿಗೆ!

೪

ಕುರುಡು ಲೀಗಿಂಗನಭಿ-
ಷಿಕ್ತ ಸಮ್ರಾಜನಪ;
ಖುರೆಪ್ರಿವನು ಕಳಿಸಿದನು ಮನೆಗೆ ಮತ್ತೆ
ಹಿರಿಮಂತ್ರಿಯೊಬ್ಬನಿಗೆ
ಜೀವದಾನವ ಕೊಟ್ಟ;
ಅವನ ಬೈಯುವ ನೀನು ದೊಡ್ಡ ಕತ್ತೆ!

—ಬಿ. ಎಚ್. ಎಸ್.

ದನಕರುಗಳಿಗೂ ವಿಮಾನ ವಾಹನ!

ಇತ್ತೀಚೆಗೆ ಲಂಡನ್ನಿನಿಂದ ೬॥ ಸಾವಿರ ಮೈಲು ದೂರದ ಕೆನ್ಯಕ್ಕೆ ೫೬ ಗಂಟೆ ಪ್ರಯಾಣ ಮಾಡಿ ೧೪ ಜಾತಿಯ ಕರುಗಳನ್ನು ಒಯ್ದು ಮುಟ್ಟಿಸಿತು. ಚಿತ್ರದಲ್ಲಿ ಹುಲ್ಲು ಮೆಟ್ಟಿಕೊಂಡು ವಿಮಾನದೊಳಗೆ ಒಂದು ಕರು ಪ್ರವೇಶಿಸುತ್ತಿರುವುದು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೯

ಶೇರ ಪೇಟೆಯಲ್ಲಿ ಈ ವಾರ ಬೆಲೆಗಳು ಸ್ವಲ್ಪ ಶಿಥಿಲವಾಗಿವೆ. ಹೈದರಾಬಾದ ಮೊದಲಾದೆಡೆಗಳಲ್ಲಿನ ರಾಜಕೀಯ ವಾತಾವರಣ ಈ ದೌರ್ಬಲ್ಯಕ್ಕೆ ಕಾರಣವೆಂದು ನಂಬಲಾಗಿದೆ. ಇಂದಿನ ಕೊನೆಯ ದರಗಳು ಈ ಕೆಳಗಿನಂತಿದ್ದವು. ಅದರೆ ಸಾಮಾನ್ಯವಾಗಿ ಅವು ಸೋಮವಾರದ ಸ್ಥಿತಿಗಿಂತ ಕೆಲ ಸುಧಾರಿಸಿವೆ.

ಜವಳಿ

ಅಹಮ್ಮದಾಬಾದ ಅಡ್ವಾನ್ಸ	೩೭೬–೪–೦
ಬಾಂಬೇ ಡಾಯಿಂಗ	೧೧೩೩–೮–೦
ಸೆಂಟ್ರಲ ಇಂಡಿಯಾ	೩೩೦–೦–೦
ಸೆಂಚುರಿ	೫೩೦–೦–೦
ಫೀನಿಕ್ಸ	೪೫೭–೮–೦
ಕೋಹಿನೂರು	೬೬೧–೦–೦
ಸೊಲ್ಲಾಪುರ	೫೯೫೦–೦–೦

ಇತರ

ಬೇಲಾಪುರ ಸಕ್ಕರೆ	೩೪೪–೦–೦
ಬಾಂಬೇ ಬರ್ಮಾ	೪೪೫–೦–೦
ಟಾಟಾ ಸ್ಟೀಲ ಡೆಫರ್ಡ್ಸ	೧೬೭೩–೮–೦
,, ಆರ್ಡಿನರಿ	೩೩೨–೦–೦
ಸಿಂಧ್ಯ ಸ್ಟೀಮ	೨೮–೩–೦
ಇಂಡಿಯನ್ ಅಯರ್ನ	೩೦–೨–೦
ಸೆಂಟ್ರಲ ಬ್ಯಾಂಕ	೮೪–೪–೦
ಇಂಪೀರಿಯಲ ಬ್ಯಾಂಕ(ಪೂರ್ಣ)	೧೯೯೭–೮–೦
ಇಂಡಿಯನ್ ಬ್ಯಾಂಕ	೨೨೩–೦–೦
ರಿಝರ್ವ ಬ್ಯಾಂಕ	೧೧೨–೦–೦

ಸರಕಾರಿ ಸಾಲ ಪತ್ರ

೩ ೦/೦ ೪೮–೫೩	೧೦೦–೪–೦
೩½ ೦/೦ ೪೯–೫೨	೧೦೧–೮–೦
೩ ೦/೦ ೬೩ ೬೫	೧೧೧–೫–೦

ಚಿನ್ನ - ಬೆಳ್ಳಿ

ಚಿನಿವಾರ ಪೇಟೆಯಲ್ಲಿ ಮಾರುವವರ ಭರ ಹೆಚ್ಚಾಗಿದೆ. ಸ್ವಲ್ಪ ಇಳಿಮುಖ ಧೋರಣ ಪ್ರಾರಂಭವಾಗಿದೆ. ಬೆಳ್ಳಿಯ ಬೆಲೆಯ ಮೇಲೆ ಇದರ ಪರಿಣಾಮ ಸ್ವಲ್ಪ ಹೆಚ್ಚಾಯಿತು. ಇಂದಿನ ಕೊನೆಯ ಬೆಲೆಗಳು ಹೀಗಿದ್ದವು.

ತಯಾರ	ಚಿನ್ನ	೧೧೬–೫–೦
ವಾಯದಾ	,,	೧೧೬–೩–೦
ಸಾವರಿನ್		೭೪–೧೨–೦
ತಯಾರ	ಬೆಳ್ಳಿ	೧೭೨–೬–೦
ವಾಯದಾ	,,	೧೭೨–೪–೦
ಚೇಂಬರ		೧೭೧–೧೫–೦

ಅರಳೆ ಪೇಟೆ

ಜಪಾನದೊಡನೆ ಅರಳೆ ವ್ಯಾಪಾರ ಕಳೆದ ವಾರಾಂತ್ಯದಲ್ಲಿ ಪ್ರಾರಂಭವಾದುದರಿಂದ ಪೇಟೆಯಲ್ಲಿ ಒಂದಿಷ್ಟು ಬಲ ಬಂದಿದೆ. ಜಪಾನದೊಡನೆ ವ್ಯಾಪಾರವಿಲ್ಲದೆ ೭ ವರ್ಷವಾಗಿತ್ತು. ಹೀಗಿದ್ದರೂ ಕಳೆದ ವಾರದ ಆತಿರೇಕ ಮಟ್ಟದಿಂದ ಬೆಲೆಗಳು ಇಳಿದಿವೆ.

ಮೇ ವಾಯದೆ	೭೪೦–೦–೦
ಜುಲೈ	೭೫೩–೦–೦
ಸೆಪ್ಟಂಬರ	೭೬೧–೮–೦

ಎಣ್ಣೆ ಕಾಳುಗಳು

ಶೇಂಗಾ	೧೭೦–೦–೦
,, ಹೊಸ ಬೆಳೆ	೧೬೮–೦–೦
ಅಗಸಿ	೨೭–೧೨–೦
ಅಗಸಿ ಎಣ್ಣೆ	೧೬–೧೨–೦

ಸಾಂಗಲಿ ಪೇಟೆ

ತಾ. ೧೭

ಹೊಸ ಅರಿಷಣ (ಪೇರು)	೧೧೨–೧೧೮
ಶೇಂಗಾ ಖಂಡಿ	೧೩೨–
ಮೆಣಸಿನಕಾಯಿ (ಪೇರು)	೧೫೦–೧೭೫
ಬೆಲ್ಲ	೨೮–೫೨

ಶಿವಮೊಗ್ಗ

ತಾ. ೧೯

ದೇಶಾವರ ನಂ. ೧ ಮಣ ೧ ಕ್ಕೆ	೩೬–೩೮
,, ,, ೨	೩೩–೩೬
ರಾಶಾ ಅಲವು	೩೩–೩೬
ತೊರೆಸಾಲು ,,	೩೦–೩೩
ಪಂತಿ ಚಟ್ಟೆ	೨೪–೨೮
ಚಿಟ್ಟೆ	೨೧–೨೨
ಮೆಣಸು	೩೬–೩೭

ಅಡಿಕೆ ಪೇಟೆ ಲಾಭದಾಯಕ ಭವಿಷ್ಯದಿಂದ ಕೂಡಿದೆ. ಬೆಲೆ ಒಳ್ಳೆ ಚೆನ್ನಾಗಿದೆ ಮಾಲು ನಿರ್ಯಾತ ಸೌಕರ್ಯವಿದೆ. ಬೇಡಿಕೆ ಚೆನ್ನಾಗಿದೆ. ಪೇಟೆಯಲ್ಲಿ ಸುಮಾರು ೫೦,೦೦೦ ಮೂಟೆ ಇದೆ.

ಮೆಣಸಿಗೆ ಈಗ ಒಳ್ಳೆ ಬೆಲೆ ಬಂದಿದೆ.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	೧	೪೯೫–೫೦೧
,,	೨	೪೮೦–೪೯೦
,,	೩	೪೭೦–೪೭೫
ಅಪಲಾಂಡ ಹತ್ತಿ	೧	೪೪೫–೪೫೦
,,	೨	೪೨೦–೩೩೦
ಜಿನ		೩೩೫–೩೫೫
ಅ. ಡಬಲರೋಲ		೩೦೫–೩೨೫
ಸ ಜಿನ		೩೦೦–೩೦೫
ಜ. ಹತ್ತಿಕಾಳು		೯–೯।
ಡ. ಹತ್ತಿಕಾಳು		೮॥।

ನಾಲ್ಕು ಮಾತು — ರಂಗನಾಥ ದಿವಾಕರ

ರಾಷ್ಟ್ರೀಯ ಮಜೂರ ಕಾಂಗ್ರೆಸ್ಸು

೧) ಹೋದ ವರುಷ ಎಪ್ರಿಲದಲ್ಲಿ ಪ್ರಾರಂಭವಾದ ಈ ಅಖಿಲ ಭಾರತೀಯ ಸಂಸ್ಥೆ ಒಂದೇ ವರುಷದಲ್ಲಿ ಮಾಡಿದ ಪ್ರಗತಿಯನ್ನು ನೋಡಿದರೆ ಅದು ಅತ್ಯಂತ ಅವಶ್ಯಕವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ಮೊನ್ನೆ ೧೬, ೧೭ ನೇ ತಾರೀಖಿಗೆ ಈ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಮುಂಬಯಿಯಲ್ಲಿ ನಡೆಯಿತು. ಒಂದೇ ವರುಷದಲ್ಲಿ ಅದರ ಸಭಾಸದರ ಸಂಖ್ಯೆ ಎಂಟು ಲಕ್ಷಕ್ಕೆ ಏರಿಕ್ಕಿದೆ. ದೇಶದಲ್ಲೆಲ್ಲ ೫೯೦ ರಷ್ಟು ಅದರ ಸಂಘಗಳು (ಯೂನಿಯನ್ನುಗಳು) ಹಬ್ಬಿಕೊಂಡಿವೆ. ದೇಶದಲ್ಲಿಯ ಎಲ್ಲ ಕೂಲಿಕಾರ ಸಂಘಟನೆಗಳಲ್ಲಿ ಅದು ಎಲ್ಲಕ್ಕೂ ಹೆಚ್ಚು ಪ್ರಾತಿನಿಧಿಕ ಸಂಸ್ಥೆ ಎಂದು ಸರಕಾರದವರಿಂದ ಒಪ್ಪಿತವಾಗುವಷ್ಟು ಅದು ಪ್ರಬಲವಾಗಿದೆ.

× × ×

ಕೂಲಿಕಾರ ಕ್ಷೇತ್ರದಲ್ಲಿ ಮುಖ್ಯವಾಗಿ ನಾಲ್ಕು ವಿಚಾರಪ್ರಣಾಲಿಗಳು ಅಥವಾ ವಿಚಾರ ಧಾರೆಗಳು ಸುಳಿಯುತ್ತಿವೆ. (೧) ಕಮ್ಯುನಿಸ್ಟರದು. ವರ್ಗಕಲಹ ಹೂಡಿ ಒಂದು ವರ್ಗವನ್ನು ಅಂದರೆ ಬಂಡವಾಳಗಾರರನ್ನು ಹಿಂಸಾಮಾರ್ಗದಿಂದ ನಿರ್ಮೂಲನಗೊಳಿಸಿ ಒಂದೇ ವರ್ಗದ ಒಂದೇ ಪಕ್ಷದ ಒಂದೇ ವಿಚಾರಧಾರೆಯ ನಿರಂಕುಶಾಧಿಕಾರ ಸ್ಥಾಪಿಸುವದು ಅವರ ಧ್ಯೇಯ.

(೨) ಟ್ರೇಡ ಯುನಿಯನ್ ಪಕ್ಷ. ರಾಜಕಾರಣ ಇಲ್ಲವೆ ರಾಜಕೀಯ ಪಕ್ಷೋಪಪಕ್ಷಗಳ ಗೊಂದಲದಲ್ಲಿ ಬೀಳದೇ, ರಾಜ್ಯವನ್ನು ಸ್ಥಾಪಿಸಬೇಕೆಂಬ ಹಂಬಲವನ್ನು ಇಟ್ಟುಕೊಳ್ಳದೆ, ಕೂಲಿಕಾರ ವರ್ಗದ ಕೇವಲ ಆರ್ಥಿಕ, ಸಾಮಾಜಿಕ, ನೈತಿಕ ಮಟ್ಟವನ್ನು ಏರಿಸಲು ಶಾಂತ ಉಪಾಯಗಳಿಂದ ಯತ್ನಿಸುವದು ಇದು ಈ ಪಕ್ಷದ ಗುರಿ.

(೩) ಸೋಶಿಯಾಲಿಸ್ಟ ಪಕ್ಷ. ಸಮಾಜಸತ್ತೆಯನ್ನು ಸ್ಥಾಪಿಸುವದೆ ಇವರ ಗುರಿ. ಆದರೆ ಶಾಂತ ಉಪಾಯಗಳಿಂದ ಹಾಗೂ ಕಾಯದೇ ಮಂಡಲಗಳಲ್ಲಿ ಸೇರಿ ಅನುಕೂಲ ಕಾಯದೆಗಳನ್ನು ಮಾಡಿ ಕೂಲಿಕಾರರ ಹಿತವನ್ನು ಸಂರಕ್ಷಿಸುವದು ತಮ್ಮ ಕರ್ತವ್ಯವೆಂದು ಈ ಪಕ್ಷವು ತಿಳಿದುಕೊಂಡಿರುವದು.

(೪) ರಾಷ್ಟ್ರೀಯ ಮಜೂರ ಕಾಂಗ್ರೆಸ್ಸು. ಇದು ರಾಷ್ಟ್ರೀಯ ಕಾಂಗ್ರೆಸ್ಸಿನ ಧೋರಣಕ್ಕೆ ಹೊಂದಿದುದು ಎಂದು ಹೇಳಬಹುದು. ಕೂಲಿಕಾರರ ಅತ್ಯಂತಿಕ ಹಿತವನ್ನು ಸಾಧಿಸುವದಲ್ಲದೆ ರಾಷ್ಟ್ರದಲ್ಲಿಯ ಮುಖ್ಯವಾದ ಹಾಗೂ ರಾಷ್ಟ್ರ ಜೀವನಕ್ಕೆ ಅತ್ಯಾವಶ್ಯಕವಾದ ಎಲ್ಲ ಉದ್ಯೋಗಗಳನ್ನು ರಾಷ್ಟ್ರೀಕರಿಸುವದು ಇದರ ಧ್ಯೇಯವಾಗಿದೆ.

+ + +

ಕೂಲಿಕಾರ ಎಂಬ ಶಬ್ದ ಪ್ರಯೋಗ ಮಾಡಿದೊಡನೆ ಕೈಯಿಂದ ದುಡಿಯುವವ ಎಂಬ ಅರ್ಥವಷ್ಟೆ ಹೊಳೆಯುತ್ತಿದೆ. ನಿಜವಾಗಿ ಕೂಲಿಕಾರ, ಅಥವಾ ಕೂಲಿಕಾರ ಸಂಘಟನೆ ಇದರ ಅರ್ಥ ಹೆಚ್ಚು ವ್ಯಾಪಕವಿರುವದು. ಕೈ, ಮೈ, ಮಿದುಳು ಈ ಮೂರರಲ್ಲಿ ಒಂದೇ ಅಥವಾ ಹೆಚ್ಚು ಸಾಧನಗಳಿಂದ ಕೂಲಿ ಅಥವಾ ಸಂಬಳವನ್ನು ಪಡೆದು ದುಡಿಯುವವರೆಲ್ಲರೂ ಕೂಲಿಕಾರರು. ಸ್ವಂತ ಬಂಡವಾಳು ಅಥವಾ ಸ್ವಂತ ದುಡಿಮೆಯ ಸಾಧನ ಸಾಮಗ್ರಿ ಇವು ಇಲ್ಲದೆ ಈ ಪ್ರಕಾರ ಸಂಬಳಕ್ಕಾಗಿ ದುಡಿಯುವವರೆಲ್ಲರೂ ಕೂಲಿಕಾರರು. ಅವರೆಲ್ಲರೂ ಸಂಘಟಿತರಾಗಬೇಕು. ತಮ್ಮ ಹಿತವನ್ನು ಸಾಧಿಸಿಕೊಳ್ಳಬೇಕು. ಪ್ರತಿಯೊಂದು ಉದ್ಯೋಗದಲ್ಲಿರುವ ಕೂಲಿಕಾರರೆಲ್ಲರೂ ಸಂಘಟಿತರಾಗಿ ತಮ್ಮ ಸುಖದುಃಖಗಳೆಲ್ಲ ಒಂದು ಎಂದು ತಿಳಿದು ಸಾಮೂಹಿಕ ಹಿತಕ್ಕಾಗಿ ಹೋರಾಡಬೇಕು.

× × ×

ರಾಷ್ಟ್ರೀಯ ಮಜೂರ ಕಾಂಗ್ರೆಸ್ಸು ಹೋರಾಡುವ ಸಾಧನಗಳ ವಿಷಯದಲ್ಲಿ ಮಹಾತ್ಮಾ ಗಾಂಧಿಯವರನ್ನು ಅನುಸರಿಸುವದು. ಯಾವ ಸಾಧನ ಮಾರ್ಗಗಳಿಂದ ಸ್ವಾತಂತ್ರ್ಯವು ದೊರೆತಿತೊ ಅದೇ ಮಾರ್ಗಗಳಿಂದ ಕೂಲಿಕಾರರು ಸ್ವತಂತ್ರರಾಗಬಲ್ಲರು, ಕಿಸಾನ ಪ್ರಜಾರಾಜ್ಯವನ್ನು ಸ್ಥಾಪಿಸಬಲ್ಲರು., ಆ ಶಿಸ್ತು, ಆ ಸಂಘಟನೆ ಅವಶ್ಯ.

× × ×

ಕೇವಲ ಉದ್ಯೋಗಗಳಲ್ಲಿ ದುಡಿಯುವವರಷ್ಟೇ ಸಂಘಟಿತರಾದರೆ ಸಾಲದು. ಒಕ್ಕಲುತನವೆಂಬ ಎಲ್ಲಕ್ಕೂ ದೊಡ್ಡ ಉದ್ಯೋಗದಲ್ಲಿದ್ದ ಕೂಲಿಕಾರರು- ಹೊಲಗೆಲಸದ ಕೂಲಿಕಾರರು- ಸಂಘಟಿತರಾಗಲಿಕ್ಕೆಬೇಕು. ಇದೇ ಈ ಕಾಂಗ್ರೆಸ್ಸಿನ ಉದ್ದೇಶವು.

× × ×

ಕರ್ನಾಟಕದಲ್ಲಿ ಇದರ ಸಂಘಟನ ತೀರ ಬಾಲ್ಯಾವಸ್ಥೆಯಲ್ಲಿದೆ. ಹಿಂದುಸ್ಥಾನದಲ್ಲಿರುವ ೫೯೦ ಸಂಘಗಳಲ್ಲಿ ೨ ಮಾತ್ರ ಯೂನಿಯನ್ ಕರ್ನಾಟಕದಲ್ಲಿವೆ! ೮ ಲಕ್ಷ ಸಭಾಸದರಲ್ಲಿ ೫ ಮೂರು ೪ ಸಾವಿರ ಮಾತ್ರ ಯುನಿಯನ್ ಕರ್ನಾಟಕದಲ್ಲಿದ್ದಾರೆ! ಮೈಸೂರ ಸಂಸ್ಥಾನದಲ್ಲಿಯೂ ಅದೇಗತಿ. ೮ ಸಾವಿರಕ್ಕಿಂತ ಸ್ವಲ್ಪ ಹೆಚ್ಚು ಸಭಾಸದರುಳ್ಳ ನಾಲ್ಕಾರು ಸಂಘಗಳು ಮಾತ್ರ ಈ ಮಜೂರ ಕಾಂಗ್ರೆಸ್ಸಿಗೆ ಸೇರಿವೆ! ಅಂದಬಳಿಕ ಈ ಕ್ಷೇತ್ರದಲ್ಲಿ ಇನ್ನೂ ಎಷ್ಟು ಕೆಲಸವಾಗಬೇಕಾಗಿದೆ ಎಂಬುದು ಒಡೆದು ಕಾಣುತ್ತದು.

೨. ಸಂಯುಕ್ತ ಕರ್ನಾಟಕ

ಕನ್ನಡ ನುಡಿಯ ಪ್ರಚಾರವಿದ್ದ ಭಾಗಗಳೆಲ್ಲ ಒಂದೇ ಒಂದು ಆಡಳಿತಕ್ಕೆ ಸೇರುವದೆಂಬುದು ಸಂಯುಕ್ತ ಕರ್ನಾಟಕವೆನಿಸುವದು. ಯೂನಿಯನ್ ಕರ್ನಾಟಕದ ಭಾಗವೆಲ್ಲ ಒಂದು ಭಾಷಾನುಗುಣ ಪ್ರಾಂತವಾಗುವದು ನಿಶ್ಚಿತವಾದಂತೆಯೇ ಆಗಿದೆ. ಆದರೆ ಇದೇ ಸಮಯದಲ್ಲಿ ಕನ್ನಡವಿದ್ದ ಮೈಸೂರು ಸಂಸ್ಥಾನವು ಕೂಡ ಕರ್ನಾಟಕದ ಇತರ ಭಾಗಗಳೊಡನೆ ಕೂಡಿಕೊಂಡು ಒಂದೇ ಆಡಳಿತಕ್ಕೆ ಸೇರಿಕೊಂಡರೆ ಮಹಾಕರ್ನಾಟಕ ಪ್ರಾಂತವು ನಿರ್ಮಾಣವಾಗಿ ಇದ್ದಿಸು ೧೫೦ ಲಕ್ಷ ಜನಸಾಮಾನ್ಯರ ಅತ್ಯಂತಿಕ ಕಲ್ಯಾಣವಾಗಬಲ್ಲದು. ಆ ದೃಷ್ಟಿಯಿಂದಲೆ ಈ ಪ್ರಶ್ನೆಯ ಕಡೆಗೆ ನೋಡುವದು ಅವಶ್ಯ.

× × ×

ಇದೇ ೨೨ ನೇ ತಾರೀಖಿಗೆ ಬೆಂಗಳೂರಲ್ಲಿ ಮೈಸೂರ ಸ್ಟೇಟ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯವರು (ವರ್ಕಿಂಗ ಕಮೀಟಿ) ಯುನಿಯನ್ ಕರ್ನಾಟಕದ ಕಾಂಗ್ರೆಸ ಮುಖಂಡರನ್ನು ಹಾಗೂ ಸಂಧಾನ ಸಮಿತಿಯನ್ನು ಬರಮಾಡಿಕೊಂಡಿದ್ದಾರೆ. ಇದು ಅತ್ಯಂತ ಸಮಾಧಾನದ ಸಂಗತಿಯು. ಈ ಎರಡೂ ಪಕ್ಷದವರು ಮುಖ್ಯವಾಗಿ ೧೫೦ ಲಕ್ಷ ಕನ್ನಡಿಗರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಭವಿತವ್ಯವನ್ನು ಲಕ್ಷಿಸಬೇಕೇ ಹೊರತು ಇತರ ಚಿಲ್ಲರೆ ಅಡಚಣೆಗಳನ್ನು ಲಕ್ಷಿಸುತ್ತ ಕೂಡುವದು ಯೋಗ್ಯವಾಗಲಾರದು. ಕರ್ನಾಟಕಕ್ಕೆ ಇದೊಂದು ಮಹಾಪರ್ವಕಾಲವೆಂದೇ ಹೇಳಬಹುದು. ಇದನ್ನು ಸಾಧಿಸಿದರೆ ೧೫೦ ಲಕ್ಷ ಕನ್ನಡಿಗರ ನಿರಂತರ ಕಲ್ಯಾಣವಾಗಬಲ್ಲದು. ಇದನ್ನು ಸಾಧಿಸದಿದ್ದರೆ ಅವರ ನಿರಂತರ ಹಾನಿಯನ್ನು ಮಾಡಿದಂತಾಗುವದು. ಮುಖಂಡರು ಸಾಕಷ್ಟು ದೂರದೃಷ್ಟಿಯಿಂದ ನಡೆದು ಕನ್ನಡಿಗರ ಅತ್ಯಂತಿಕ ಹಿತವನ್ನು ತಮ್ಮ ಧ್ಯೇಯವನ್ನಾಗಿರಿಸುವರೆಂದು ಅವರತ್ತ ಇಡೀ ಕನ್ನಡ ಜನಾಂಗ ನಿರೀಕ್ಷೆಯಿಂದ ನಿಟ್ಟಿಸಿ ನೋಡುತ್ತಿದೆ. ಜನರು ತಮ್ಮಲ್ಲಿಟ್ಟ ವಿಶ್ವಾಸಕ್ಕನುಸಾರವಾಗಿಯೆ ಎಲ್ಲರೂ ನಡೆದುಕೊಂಡು ಸಂಯುಕ್ತ ಕರ್ನಾಟಕವನ್ನು ಸಾಧಿಸುವರೆಂಬಲ್ಲಿ ಸಂಶಯವಿಲ್ಲ.

೩. ಆಧ್ಯಾತ್ಮಿಕ ಸಿದ್ಧಿ ಸಾಧನ

ಧ್ಯೇಯವು ಪಾರಮಾರ್ಥಿಕವೇ ಇರಲಿ, ಲೌಕಿಕವೇ ಇರಲಿ. ಸಾಧಕನು ಸಿದ್ಧಿಗಾಗಿ ಆತುರನಾಗಿರುವದು ಸ್ವಾಭಾವಿಕ. ಒಂದು ದೃಷ್ಟಿಯಿಂದ ನೋಡಿದರೆ ಆ ಆತುರತೆಯೆ ಅವನಾಸಾಧನ ತೀವ್ರ ಭಾವದ ಅಳತೆಗೋಲು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಆ ಆತುರತೆಯೆ ಅವನ ವಿನ್ನಡತೆಗೆ ಕಾರಣ! ತೀವ್ರ ಭಾವವನ್ನಳಿಯಗೊಡದೆ ವಿಹ್ವಲತೆಯನ್ನು ಹೋಗಲಾಡಿಸುವದು ಸಾಧನ ಮಾರ್ಗದಲ್ಲಿಯ ಒಂದು ಸಮಸ್ಯೆ. ಆ ಸಮಸ್ಯೆಯನ್ನು ಬಿಡಿಸುವ ಫಲದಲ್ಲಿ ಅವನ ಶಕ್ತಿ ಎಂಬುದೇ ಒಂದು ಪ್ರಾರ್ಗ. ಸಿದ್ಧಿಸಾಧನಗಳಲ್ಲಿಯೆ ಅಂತರವನ್ನರಿಸದೆ ಶುದ್ಧಸಾಧನಗಳಲ್ಲಿಯೆ ತಲ್ಲೀನನಾದವನಿಗೆ ಈ ಪ್ರಶ್ನೆಯೆ ಉಂಟಾಗುವದಿಲ್ಲ. ಗೀತೆಯಲ್ಲಿ 'ಅನೇಕಜನ್ಮಸಂಸಿದ್ಧ' ಎಂಬ ಪದವಿದೆ. ಸಾಧಕನಿಗೆ ಅನೇಕ ಜನ್ಮಗಳ ನಂತರ ಸಿದ್ಧಿ ದೊರೆಯಬಲ್ಲದು ಎಂದು ಇದರ ಅರ್ಥವಾಗುತ್ತದೆ. ಹಾಗಾದರೆ ನಾವು ಅಷ್ಟಷ್ಟು ಜನ್ಮಾಂತರಗಳನ್ನು ಕಳೆಯಬೇಕು ಎಂದು ಬೋಧವಾದರೆ ಮುಂದೆ ಗತಿಯೇನು? ಹಾಗಾಗಕೂಡದು. ಜನ್ಮಾಂತರದಲ್ಲಿ ಆಗತಕ್ಕದ್ದನ್ನು ಈಗ ಕಂಡವರಾರು? ಅದುದರಿಂದ ಕಾಲಗಣನೆ ಮಾಡುತ್ತ ಲಕ್ಷ ಕೊಡುವದೆಂದರೆ ಒಂದು ರೀತಿ ಸಾಧನಗಳಲ್ಲಿಯ ನಮ್ಮ ವಿಶ್ವಾಸವನ್ನು ಕಡಿಮೆ ಮಾಡಿಕೊಂಡಂತೆ. ಹಾಗೆ ಮಾಡದೆ, ಅಕೋ ಅದು ಸಿದ್ಧಿ. ಅದನ್ನು ಇಕೋ ಈ ಸಾಧನಗಳಿಂದ ಪಡೆಯಬಲ್ಲೆವು. ಈ ಸಾಧನಗಳಲ್ಲಿ ನಿಮಗ್ನನಾಗಿ ಶ್ರದ್ಧೆಯಿಂದ ಸಾಗುವದಷ್ಟೆ ನನ್ನ ಪರಮ ಕರ್ತವ್ಯ ಎಂಬ ಭಾವದಿಂದ ಹೊರಟರೆ ಮುಂದೆ ಯಾತರ ವಿಘ್ನ ಆತಂಕವೂ ಅಸ್ತಿತ್ವ ಉಳಿಯಲಿಕ್ಕಿಲ್ಲ.

೪ ಲೌಕಿಕ ಸಿದ್ಧಿ ಸಾಧನ

ಅಧ್ಯಾತ್ಮಿಕ ಸಿದ್ಧಿ ಸಾಧನಗಳ ಬಗ್ಗೆ ಹೇಳಿದ ಮಾತುಗಳೇ ಲೌಕಿಕ ಸಿದ್ಧಿ ಸಾಧನಗಳಿಗೂ ಅನ್ವಯಿಸುವವು. ಲೋಕಹಿತದ ಯಾವದೊಂದು ಧ್ಯೇಯವನ್ನು ಕಣ್ಣು ಮುಂದಿಟ್ಟುಕೊಂಡು ಶುದ್ಧ ಸಾಧನಗಳ ಮುಖಾಂತರ ಆ ಧ್ಯೇಯವನ್ನು ಸಾಧಿಸಲು ನಾವು ಮುಂದರಿಯಬೇಕು. ಸಿದ್ಧಿಯ ಬಗ್ಗೆ ನಾವು ಎಷ್ಟೇ ಆತುರರಿದ್ದರೂ ಆ ಆತುರತೆಯ ಮೂಲಕ ಆ ಸಿದ್ಧಿ ಸಾಧಿಸದು. ಸಾಧನಗಳ ಪರಿಪೂರ್ತಿಯಿಂದಲೆ ಸಿದ್ಧಿ ಹಸ್ತಗತವಾಗಬಲ್ಲದು. ಸಿದ್ಧಿ ಬೇಗನೆ ಆಗಲೊಲ್ಲದೆಂದು ವಿಹ್ವಲರಾಗುವದರಿಂದ ಮನಸಿಗೆ ವ್ಯಥೆಯಾಗುವುದೆ ವಿನಾ ಯಾವ ಲಾಭವೂ ಇಲ್ಲ. ಅದುದರಿಂದ ಯೋಗ್ಯ ಹಾಗೂ ಶುದ್ಧ ಸಾಧನಗಳನ್ನು ಪ್ರಯೋಗಿಸುತ್ತ ಅವುಗಳಲ್ಲಿಯೆ ತಲ್ಲೀನರಾಗುವುದೆ ಸುಖದ ಮಾರ್ಗವು, ಸಿದ್ಧಿಯ ಮಾರ್ಗವು.

× × ×

ಯೂನಿಯನ್ ಕರ್ನಾಟಕವೊಂದು ಪ್ರಾಂತವಾದರೆ ಸಾಕು ಆ ಮೈಸೂರನ್ನೊಂದು ಯಾಕೆ ಕೊರಳಲ್ಲಿ ಕಟ್ಟಿಕೊಳ್ಳುವಿರಿ ಎಂದು ಹಲವರು ಕೇಳುವದುಂಟು. ಅವರಿಗೆ ನನ್ನ ಉತ್ತರವೇನಂದರೆ, ೧೯೩೪ ರಿಂದ ಈ ಸಭೆಯವರು ಆ ಧ್ಯೇಯವನ್ನು ತಮ್ಮ ಕಣ್ಣೆದುರು ಇಟ್ಟುಕೊಂಡು ನಡೆದಿರುವರು. ದಾವಣಗೇರಿ ಮಹಾಸಭೆಯಲ್ಲಿ ೧೯೪೭ ರಲ್ಲಿ ಆ ಧ್ಯೇಯದ ಪುನರುಚ್ಚಾರವಾಗಿರುವದು. ಅಂತ ಬಳಿಕ ಇದೊಂದು ಕೇವಲ ವೈಯಕ್ತಿಕ ವಿಚಾರವಿಲ್ಲ. ಅಥವಾ ಹಲವರು ಟೀಕಿಸುತ್ತಿರುವಂತೆ ಅದು ಹಗಲುಗನಸೂ ಅಲ್ಲ. ಅದೊಂದು ಉಚ್ಚ ಧ್ಯೇಯ. ೧೫೦ ಲಕ್ಷ ಜನರ ಅತ್ಯಂತಿಕ ಹಿತದ ಸಂಗತಿಯದು. ಭಾಷಾನುಗುಣ ಪ್ರಾಂತರಚನಾ ತತ್ವದ ಪರಿಪೂರ್ತಿಯದು ಕನ್ನಡ ಜನಾಂಗದ ಅಂತರಿಕ ಆಕಾಂಕ್ಷೆಯದು. ಅದುದರಿಂದ ಅದನ್ನು ಸಾಧಿಸಲು ಶುದ್ಧ ಹಾಗು ಯೋಗ್ಯ ಸಾಧನಗಳನ್ನು ಉಪಯೋಗಿಸುತ್ತ ಅವುಗಳಲ್ಲಿಯೆ ತಲ್ಲೀನರಾಗಿ ದುಡಿಯುತ್ತ ಹೋಗತಕ್ಕದ್ದು. ಸಿದ್ಧಿಯು ಈ ಹೊತ್ತಲ್ಲ ನಾಳೆ ಒಂದೇ ತೀರುವದು. ಆ ವಿಚಾರದಲ್ಲಿ, ಆ ಧ್ಯೇಯದಲ್ಲಿ, ಸತ್ಯವಿದ್ದರೆ ಅದು ಯಶಸ್ಸನ್ನು ತಂದೇ ತೀರುವದು 'ಕಲ್ಪನೆಗಳಿಗೆ ಕಾಲುಗಳಿವೆ' (ಅಯ್‌ಡಿಯಾಜ್ ಹ್ಯಾವ್ ಲೆಗ್ಜ್) ಎಂಬುದೊಂದು ಪ್ರಮೇಯವು. ಸಿದ್ಧಿಯ ಬಗ್ಗೆ ನಾವು ಚಿಂತಿಸಿ ಸವೆಸುವದೇನು ಸಹಾಯಗಲು ಯಾರು ಹೇಳುವರು? ಅದು ಸಾಧಕನ ವಿಷಯವಲ್ಲ. ಸಾಧಕನು ಸಾಧನದಲ್ಲಿ ನಿಮಗ್ನನಿರಬೇಕು ಅಂದರೆ ಅವನ ಕೆಲಸವಾಯಿತು. ಸಿದ್ಧಿಯ ಚಿಂತೆ ಮಾಡುವವರು ಬೇರೆ ಇದ್ದಾರೆ!

ವಿನೂತನ ಆಯುರ್ವೇದ ಕಾರ್ಯಾಲಯ, ಲಿ. ವಿಜಾಪುರ

ಪರಮಾರೋಗದ ಮೇಲೆ
(Gonorrhoea)
ಪ್ರಾಯಮೇಹಾರಿ

ತಟ್ಟಿಸಿ-ನೋವಾಗಿ ಉರಿಮೂತ್ರ ಮೂತ್ರವಲ್ಲಿ ಕೀವು, ಸಂಧಿವಾತ ಬಿಳೀಸೆರನು, ಧಾತುಕ್ಷೀಣತೆಗಳನ್ನು ಗುಣಪಡಿಸುತ್ತದೆ.

ಹುಬ್ಬಳ್ಳಿ ಶಾಖೆ— ಕೊಪ್ಪೀಕರ ರೋಡ, ಹುಬ್ಬಳ್ಳಿ

ಕರ್ಮವೀರ

ಶ್ರೀಮುಖ್ಯಾಖ್ಯ [illegible] ವರ್ಷ [illegible]
ವೈಶಾಖ ಬ. ೨. ಸೋಮವಾರ

ನ್ಯಾಯದಾನದ ಕ್ರಮಕ್ಕೆ ವ್ಯತ್ಯಯ


ಮುಂಬಯಿ ಸರಕಾರದವರು ಪ್ರಕಟನೆಯೊಂದನ್ನು ಹೊರಡಿಸಿ, ಗಾಂಧೀಜಿ ಕೊಲೆಯ ನಂತರದ ಗಲಭೆಗಳಲ್ಲಿ ಅಪರಾಧಿಗಳಾದವರು ಪಶ್ಚಾತ್ತಾಪ ವ್ಯಕ್ತಪಡಿಸಿದರೆ ಅವರ ಮೇಲಿನ ಖಟ್ಲೆಗಳನ್ನು ಹಿಂತೆಗೆದುಕೊಳ್ಳಲಾಗುವುದೆಂದು ಸಾರಿದ್ದಾರೆ. ಗೃಹಮಂತ್ರಿಗಳು ಈ ವೇಳೆಯಲ್ಲಿ ಈ ಸಂಬಂಧದಲ್ಲಿ ಕೊಟ್ಟ ಆಶ್ವಾಸನಕ್ಕೂ ಈ ಪ್ರಕಟನೆಗೂ ತಾಳಮೇಳವಿಲ್ಲದ್ದರಿಂದ ಸರಕಾರದ ಈ ವಿಸಂಗತ ಧೋರಣದ ಬಗ್ಗೆ ಜನಕ್ಕೆ ಒಂದು ಬಗೆಯ ಕ್ಷೋಭೆ ಹುಟ್ಟುವುದು ಸ್ವಾಭಾವಿಕ. ಈ ಬಗೆಗೆ ಸರಕಾರದವರು ಮುಂದೆ ಮಾಡಿದ ಕಾರಣಗಳು ಏನೂ ಸಮರ್ಥನೀಯವಾಗಿಲ್ಲ. ಅವರ ಈ ಧೋರಣೆಯು ಜನಸಾಮಾನ್ಯ ಜನತೆಯ ಮೇಲೆ ಮತ್ತು ನ್ಯಾಯಖಾತೆಯ ಮೇಲೆ ಎಂತಾಗುವುದೆಂಬುದು ವಿಚಾರ ಮಾಡತಕ್ಕ ಸಂಗತಿಯಾಗಿದೆ. ಮಹಾತ್ಮರ ಕೊಲೆಯ ನಂತರದ ಹಾಗು ಈ ಗಲಭೆಗಳ ನಂತರದ ಭಾಷಣಗಳನ್ನು ನೋಡಿದರೆ ಅಪರಾಧಿಗಳನ್ನು ಹಾಗೆಯೇ ಬಿಟ್ಟರೆ ಸರಕಾರದ ಆಡಳಿತದ ಬಿಗಿವು ಶಿಥಿಲವಾಗುವದೆಂಬ ಯಾರಿಗಾದರೂ ಭೀತಿಯುಂಟಾಗದಿರದು. ಅಪರಾಧಿಗಳಿಗೆ ಯೋಗ್ಯ ಶಾಸನ ಮಾಡುವೆವು, ಅಪರಾಧಿಗಳನ್ನು ಹುಡುಕಿಕೊಡುವವರಿಗೆ ಸರ್ವ ಬಗೆಯ ಸಂರಕ್ಷಣೆ ಕೊಡುವೆವು, ಎಂದು ಮುಂತಾಗಿ ಗೃಹಮಂತ್ರಿಗಳು ತಮ್ಮ ಸಂಚಾರದಲ್ಲಿ ಘಂಟಾಘೋಷವಾಗಿ ಸಾರುತ್ತ ನಡೆದಿರುವಾಗಲೆ, ಕಾಂಗ್ರೆಸ್ಸಿನವರೆಂದು ಹೇಳಿಕೊಳ್ಳುವ ಕೆಲ ಜನರು ತಪ್ಪಿದವರಾಗಿ, ನಿಮ್ಮನ್ನು ಬಿಡಿಸುತ್ತೇವೆ, ಎಂದು ಮುಂತಾಗಿ ಅಪರಾಧಿಗಳಿಗೆ ಆಶ್ವಾಸನ ಕೊಡುತ್ತ ಸಾಗಿದ್ದರು. ಅಲ್ಲದೆ ಹಳ್ಳಿಹಳ್ಳಿಗಳಲ್ಲಿಯೂ ಗೃಹಮಂತ್ರಿಗಳ ಆಶ್ವಾಸನ ಪೊಳ್ಳುಪೊಳ್ಳಾದುದು, ಅದರಂತೆ ಸರಕಾರ ನಡೆಯುವದಿಲ್ಲ ಎಂದು ಮುಂತಾಗಿ ಸಂದೇಹ ವ್ಯಕ್ತವಾಗಿತ್ತು. ಅದೆಲ್ಲ ಈಗ ಸತ್ಯವಾಗಿ ಪರಿಣಮಿಸಿದ್ದರಿಂದ ಮಂತ್ರಿಗಳ ಆಶ್ವಾಸನಕ್ಕಿಂತ ಕಾಂಗ್ರೆಸ ಕಾರ್ಯಕರ್ತರೆಂದು ಹೇಳಿಕೊಳ್ಳುವವರ ಇಂಥದ ಮಾತುಗಳೇ ಫಲಕಾರಿಯಾದುವೆಂದು ಹೇಳಬೇಕಾಗುವದು. ಹೀಗಾದರೆ ಮಂತ್ರಿಗಳ ಮಾತುಗಳಲ್ಲಿ ಜನ ವಿಶ್ವಾಸ ಹೇಗೆ ಇಡಬೇಕು? ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಸರಕಾರಕ್ಕೆ ಸಹಾಯವನ್ನೇಕೆ ಸಲ್ಲಿಸಬೇಕು?

ಅಪರಾಧಿಗಳನ್ನು ನ್ಯಾಯಾಸನದ ಮುಂದೆ ತಳ್ಳಬೇಕು, ಈ ಗಲಭೆಗಳ ಬಗೆಗೆ ಸ್ವತಂತ್ರ ವಿಚಾರಣಾ ಮಂಡಳವನ್ನು ನೇಮಿಸಬೇಕು ಎಂದು ನಾವು ಹಲವಾರು ಸಲ ಕೇಳಿಕೊಂಡದ್ದುಂಟು. ವಿಚಾರಣಾ ಮಂಡಳವನ್ನು ನೇಮಿಸುವದೇನು ಬೇಕಾಗಿಲ್ಲ, ಆದರೆ ಅಪರಾಧಿಗಳನ್ನು ಖಟ್ಲೆಗೆ ಗುರಿಮಾಡದೆಯೇ ತೀರುವದು ಎಂಬ ಕೂಗು ಕೇಳಬರಹತ್ತಿತು. ಅದರೀಗ ಪಶ್ಚಾತ್ತಾಪ ವ್ಯಕ್ತಮಾಡಿದರೆ ಅಪರಾಧಿಗಳನ್ನು ಹಾಗೆ ಬಿಟ್ಟುಬಿಡಲಾಗುವದೆಂದು ಸರಕಾರ ಘೋಷಿಸಿಬಿಟ್ಟಿರುವದು.

ಸಾರ್ವಜನಿಕ ಕಾರ್ಯಕರ್ತರ ಮುಂದೆ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದರೆ ತೀರಿತಂತೆ! ಆಯಾ ವ್ಯಕ್ತಿಯಲ್ಲಿ ನಿಜವಾಗಿ ಪಶ್ಚಾತ್ತಾಪ ಭಾವನೆಯುಂಟಾಗಿರುವದೋ ಇಲ್ಲವೆ ಕೇವಲ ಖಟ್ಲೆಯಿಂದ ಮುಕ್ತನಾಗಲು ಪಶ್ಚಾತ್ತಾಪ ವ್ಯಕ್ತಪಡಿಸುವನೋ ಎಂಬುದನ್ನು ನಿರ್ಣಯಿಸುವವರಾರು? ಮತ್ತು ಆ ಸಾರ್ವಜನಿಕ ಕಾರ್ಯಕರ್ತರಾರು? ಅವರ ಹಿನ್ನೆಲೆ ಎಂಥದಿರಬೇಕು ಮುಂತಾದದ್ದನ್ನು ಸ್ಪಷ್ಟಪಡಿಸಿಲ್ಲ. ಈ ಗಲಭೆಗಳಲ್ಲಿ ಪ್ರೇರಕರಾರು ಪ್ರೇರಿತರಾರು ಎಂಬುದು ಮುಂತಾದ್ದೆಲ್ಲ ನ್ಯಾಯಾಸನದಲ್ಲಿಯ ವಿಚಾರಣೆಯಿಂದಲೆ ನಿಶ್ಚಯವಾಗತಕ್ಕದ್ದು. ಆ ಹಾದಿಯನ್ನೇ ಸರಕಾರದವರು ಕಳೆದುಬಿಟ್ಟದ್ದರಿಂದ ಹೆಚ್ಚು ಅಪರಾಧಿಗಳಾಗಿದ್ದವರೂ ಪಾರಾಗಿ ಹೋಗಬಹುದು ಹಾಗೆ ಹೋಗುತ್ತಿರುವರು. ಅಲ್ಲದೆ ಕೊಲೆ ಸುಲಿಗೆಗಳ ಅಪರಾಧಕ್ಕಾಗಿ ಖಟ್ಲೆಗೆ ಗುರಿಯಾದವರ ವಿರುದ್ಧ ಸಿಕ್ಕಿದ ಪ್ರಬಲ ಸಾಕ್ಷಿ ಪುರಾವೆಗಳೂ ಸಿಕ್ಕಿಲ್ಲವು. ಜಿಲ್ಲಾ ಮ್ಯಾಜಿಸ್ಟ್ರೇಟರ ಸಮಕ್ಷ ಪಶ್ಚಾತ್ತಾಪ ವ್ಯಕ್ತಪಡಿಸಲು ಕೊಟ್ಟ ಸಾಕ್ಷಿ ಪುರಾವೆಗಳು ನ್ಯಾಯಾಸನದಲ್ಲಿ ಗ್ರಾಹ್ಯವಾಗುವ ಸಂಭವ ಕಡಿಮೆ. ಸರಕಾರದ ಈ ಬಗೆಯ ಧೋರಣದಿಂದ ನ್ಯಾಯದಾನದ ಅಧಿಕಾರಕ್ಕೆ ಮಿಕ್ಕೆ ಪ್ರಕೃತಿ ವ್ಯತ್ಯಯವುಂಟಾಗುತ್ತದೆಂಬುದು ನಿರ್ವಿವಾದವಾಗಿದೆ.

ಪಶ್ಚಾತ್ತಾಪ ವ್ಯಕ್ತಪಡಿಸಿದವರನ್ನು ಬಿಡುಗಡೆ ಮಾಡುವ ಧೋರಣವೇ ಸರಿಯಾಗಿದ್ದರೆ ನ್ಯಾಯನಿರ್ಣಯದ ನಂತರ ಹಾಗೆ ಮಾಡಲು ಅವರಿಗೆ ಬೇಕಾದಷ್ಟು ಅವಕಾಶವಿದ್ದಿತು, ಬೇಕಾದಂಥ ಹೀನಕೃತ್ಯ ಮಾಡಿದವರನ್ನೂ ಕ್ಷಮಿಸುವ ಮೂಲಭೂತ ಅಧಿಕಾರ ಸರಕಾರಕ್ಕಿದ್ದೇ ಇದೆ. ಅದನ್ನುಪಯೋಗಿಸುವ ಧೋರಣವನ್ನು ಸರಕಾರ ವಹಿಸಿದರೆ ಈ ಭಯಂಕರ ಹಿಂಸಾಕೃತ್ಯಗಳ ಪ್ರೇರಕರು ಪ್ರೇರಿತರು ಯಾರು ಯಾರೆಂಬುದು ಗೊತ್ತಾಗಿ ಅವರ ಕೃತ್ಯಗಳ ಮೇಲೆ ಸ್ಪಷ್ಟ ಪ್ರಕಾಶ ಬೀಳುತ್ತಿತ್ತು ಮತ್ತು ಜನತೆಗೆ ಮತ್ತು ಸರಕಾರಕ್ಕೆ ಇಂಥ ಜನರ ಬಗ್ಗೆ ಯೋಗ್ಯ ಎಚ್ಚರಿಕೆ ವಹಿಸಲು ಅವಕಾಶ ಸಿಕ್ಕುತ್ತಿತ್ತು. ಸರಕಾರದವರು ಎಣಿಸಿದಂತೆ ಅವರ ಈ ಧೋರಣದಿಂದಲಾದರೂ ಆಡಳಿತದಲ್ಲಿ ಬಿಗುವು ಕಡಮೆಯಾಗದೆ ಕರ್ನಾಟಕದಲ್ಲಿ ಸ್ವಾಸ್ಥ್ಯವೂ ಶಾಂತಿ ಸುವ್ಯವಸ್ಥೆ ನೆಲೆಗೊಳ್ಳಲೆಂದು ಹಾರೈಸುತ್ತೇವೆ.

ಅ. ಭಾ. ಮಜೂರ ಕಾಂಗ್ರೆಸ್ಸು



ಉದ್ಘಾಟಕ ರಾಜೇಂದ್ರಬಾಬು—ಹಾಗು ಅಧ್ಯಕ್ಷ ಪಂ. ಹರಿಹರನಾಥಶಾಸ್ತ್ರಿ

ವಾರದ ಸಿಂಹಾವಲೋಕನ

ಇಸ್ರಾಯೆಲ ರಾಷ್ಟ್ರ

ಯಹೂದ್ಯರು ಜಗತ್ತಿನಲ್ಲೆಲ್ಲ, ಇತಿಹಾಸದಲ್ಲೆಲ್ಲ ಅತ್ಯಂತ ದುರ್ದೈವಿ ಜನಾಂಗವೆಂದು ಯಾವ ಸಂಶಯವೂ ಇಲ್ಲದೆ ಹೇಳಬಹುದು. ಪಾಲಿಸ್ತಾನ ಅವರ ಮೂಲಸ್ಥಾನ, ಜೆರುಸಲೇಮು ಅವರ ಕಾಶಿ. ಏಕೇಶ್ವರವಾದವನ್ನು ಮೊಟ್ಟಮೊದಲು ಜಗತ್ತಿನ ಮುಂದಿಟ್ಟವರು ಅವರೆಂದು ಇತಿಹಾಸಕಾರರು ಹೇಳುತ್ತಾರೆ. ಕ್ರಿ. ಪೂ. ೮ ನೆ ಶತಕದಲ್ಲಿ ಉತ್ತರ ಯಹೂದ್ಯ ರಾಜ್ಯವನ್ನು ಅಸುರರು (ಅಸೀರಿಯನ್ನರು) ಗೆದ್ದು ಅಲ್ಲಿನ ನಿವಾಸಿಗಳೆಲ್ಲರನ್ನು ಓಡಿಸಿಕೊಂಡು ಹೋಗಿಬಿಟ್ಟರು. ಅವರ ಗತಿ ಏನಾಯಿತೆಂದು ಇಂದಿಗೂ ಯಾರಿಗೂ ಗೊತ್ತಿಲ್ಲ. ಎರಡು ಶತಕಗಳನಂತರ ದಕ್ಷಿಣ ಪಾಲಿಸ್ತಾನವನ್ನು ಗೆದ್ದ ಬೆಬಿಲೋನಿಯನ್ನರು ಅಸುರರ ಕೃತಿಯನ್ನೇ ಪುನರಾವರ್ತಿಸಿದರು. ಆದರೆ ಮುಂದೆ ಬೆಬಿಲೋನವನ್ನು ನೆಲಸಮ ಮಾಡಿದ ಪರ್ಶಿಯನ್ನರು ಅಳಿದುಳಿದ ೪೦೦೦೦ ಯಹೂದ್ಯರನ್ನು ತಿರುಗಿ ಪಾಲಿಸ್ತಾನದಲ್ಲಿ ನೆಲೆಗೊಳಿಸಿದರು. ಕ್ರಿ. ಶ. ೧೩೫ ರಲ್ಲಿ ಪಾಲಿಸ್ತಾನ ರೋಮನ್ನರ ದಾಳಿಗೊಳಗಾಯಿತು. ಆಗ ಪಾಲಿಸ್ತಾನ ಯಹೂದ್ಯರು ಹೆಚ್ಚು ಕಡಿಮೆ ನಿರ್ವಂಶವಾದರು. ಈ ಎಲ್ಲ ವಿಪತ್ತಿಗಳ ಕಾಲಕ್ಕೆ ಅವರು ಪೂರ್ವ ಯುರೋಪಿನಲ್ಲಿ ಅಲ್ಲಲ್ಲಿ ಹಬ್ಬಿದರು. ಅವರ ಮೂಲಸ್ಥಾನ ಅರಬರ ಪಾಲಿಗೆ ಬಂತು. ತೀಕ್ಷ್ಣಮತಿ ಮತ್ತು ಧೀಮಂತ ಯಹೂದ್ಯರು ಎಲ್ಲೆಲ್ಲಿ ಹೋದರೂ ಅವರನ್ನು ಯಾರೂ ಪ್ರೀತಿಸುತ್ತಿರಲಿಲ್ಲ. ಜರ್ಮನರ ರಶಿಯಾ ಮತ್ತು ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಯಹೂದ್ಯ ಪೀಡನೆ ನಡೆದೇ ಇತ್ತು. ಹಿಟ್ಲರನು ಈ ಪೀಡೆಗೆ ಕಳಸವಿಡುವಂತೆ ಯುರೋಪಿನ ೬೦,೦೦,೦೦೦ ಯಹೂದ್ಯರನ್ನು ಕೊಲೆ ಮಾಡಿ ೧೦,೦೦,೦೦೦ ಜನರನ್ನು ಮಾತ್ರ ಜೀವದಿಂದ ಬಿಟ್ಟನು. ಆದರೆ ಯಹೂದ್ಯರು ಶ್ರದ್ಧೆಯೊಂದರ ಮೇಲೆಯೇ ಬಾಳುವಂತೆ ಕಾಣುತ್ತದೆ. ಬೈಬಲ್ಲಿನ ಹಳೆ ಒಡಂಬಡಿಕೆಯಲ್ಲಿ ಯಹೂದ್ಯರಿಗೆ ಪುಣ್ಯಭೂಮಿ (ಪಾಲಿಸ್ತಾನ) ತಿರುಗಿ ದೊರೆಯುವದೆಂಬ ವರವಾಕ್ಯವೊಂದುಂಟು. ಈ ವಾಕ್ಯವನ್ನೇ ನಚ್ಚಿ ೬—೭ ಲಕ್ಷ ಪಾಲಿಸ್ತಾನ ಯಹೂದ್ಯರು ೭ ಕೋಟಿ ಅರಬರ ವಿರೋಧಕ್ಕೆ ಸೊಪ್ಪುಹಾಕದೆ ಮೊನ್ನೆ ತಾ. ೧೪ ಕ್ಕೆ ಪಾಲಿಸ್ತಾನದಲ್ಲಿ ತಮ್ಮ "ಇಸ್ರಾಯಲ" ರಾಷ್ಟ್ರವನ್ನು ಸಾರಿ ಬಹಳ ಮಾಡಿ ದೈವದೊಡನೆ ತಮ್ಮ ಕೊನೆಯ ಹೋರಾಟ ಹೂಡಿದಂತಿದೆ. ಶಿವಾಸ್ತೇ ಪಂಥಾನಃ!

ಅಮೇರಿಕೆಯ ವಿದೇಶ ಧೋರಣ

ಈಗೊಂದೆರಡು ತಿಂಗಳುಗಳಿಂದ ವಿದೇಶ ಧೋರಣೆಯಲ್ಲಿ ಅಮೇರಿಕೆ ತಾಳಿದ ಅಂತರಂಗಗಳು ಅನೇಕರನ್ನು ದಿಕ್ಕೆಡಿಸುವಂತಿವೆ. ಪಾಲಿಸ್ತಾನದಲ್ಲಿ ಯಹೂದ್ಯರು ಅಕ್ರಮ ಪ್ರವೇಶ ಮಾಡಲು ಅಮೇರಿಕೆಯ ಪ್ರೋತ್ಸಾಹವೇ ಕಾರಣ. ಬಾಲ್ಫೋರ ಘೋಷಣೆಯಂತೆ ಪಾಲಿಸ್ತಾನದಲ್ಲಿ ಯಹೂದ್ಯ ರಾಜ್ಯ ಸ್ಥಾಪಿಸಲು ತಪ್ಪಿದ್ದಕ್ಕಾಗಿ ಬ್ರಿಟಿಶರನ್ನು ಟೀಕಿಸಿದವರು ಅಧ್ಯಕ್ಷ ಟ್ರೂಮನ್ನರು. ಮೊದಲು ಪಾಲಿಸ್ತಾನದ ವಿಭಜನೆಯಾಗಬೇಕೆಂದು ಹಟಹಿಡಿದು ಯುಕ್ತರಾಷ್ಟ್ರ ಸಂಘದವರು ಆ ಬಗ್ಗೆ ಗೊತ್ತುವಳಿ ಮಾಡಿದ ನಂತರ ವಿಭಜನೆಗೆ ತಮ್ಮ ಬೆಂಬಲವಿಲ್ಲೆಂದು ಬೆನ್ನು ತಿರುಗಿಸಿದವರೂ ಅಮೇರಿಕನ್ನರೆ. ಈಗ ಯಹೂದ್ಯರು ಇಸ್ರಾಯೆಲ ರಾಷ್ಟ್ರ ಸ್ಥಾಪಿಸಿದರೆ ಅದಕ್ಕೆ ಮನ್ನಣೆ ಕೊಡಲು ಎಲ್ಲರಿಗಿಂತ ಮುಂದೆ ಬಂದವರೂ ಅವರೆ. ಈ ವಿಸಂಗತಿಗಳಿಗೆಲ್ಲ ಒಂದೇ ಅರ್ಥವಿದೆ: ಎಣ್ಣೆ ಮತ್ತು ಮತ. ಅಮೇರಿಕೆಯಲ್ಲಿ ಯಹೂದ್ಯರ ಮತ್ತು ಅವರ ಬೆಂಬಲಿಗರ ಮತಗಳು ಬಹಳ ಮಹತ್ವದವು. ೧೯೪೮ ನವಂಬರಕ್ಕೆ ಅಧ್ಯಕ್ಷ ಚುನಾವಣೆ. ಇತ್ತ ಅರೇಬಿಯದಲ್ಲಿ ಎಣ್ಣೆ ಗಣಿಗಳ ಹಕ್ಕನ್ನು ಅಮೇರಿಕನ್ನರು ಪಡೆದಿದ್ದಾರೆ. ಅರಬರ ವಿರೋಧ ಎಣ್ಣೆಗೆ ಮೋಸವಾದೀತು. ಟ್ರೂಮನ್ನರು [illegible] ಎರಡೂ ಬೇಕನ್ನುವರು. ಅವರು ಯಹೂದ್ಯ ಮತಗಳನ್ನು ಕಳೆದುಕೊಳ್ಳಲೊಲ್ಲರು, ಅ. ಬ್ರಿ ಎಣ್ಣೆಯನ್ನೂ ಬಿಡಲೊಲ್ಲರು. ಅದಕ್ಕೇ ಇಷ್ಟೆಲ್ಲ ಅಂತರಲಾಗ!

ಜಪಾನದೊಡನೆ ವ್ಯಾಪಾರ

ಏಳು ವರ್ಷಗಳ ನಂತರ ಕಳೆದ ವಾರಾಂತ್ಯದಲ್ಲಿ ಹಿಂದುಸ್ತಾನ-ಜಪಾನ ವ್ಯಾಪಾರ ಮತ್ತೆ ಪ್ರಾರಂಭವಾಯಿತು. ಜಪಾನಿ ಶಿಷ್ಟಮಂಡಲವೊಂದು ಈಚೆಗೆ ಹಿಂದುಸ್ತಾನದ ಪ್ರಮುಖ ನಗರಗಳಲ್ಲಿ ಸಂಚರಿಸಿ ಕಳೆದ ವಾರ ಮುಂಬಯಿಗೆ ಬಂದು ತನ್ನ ದೌತ್ಯವನ್ನು ಮುಗಿಸಿತು. ಬಂಗಾಲ ಮುಂತಾದ ಕಡೆಯ [illegible] ಜಾತಿಯ ಅರಳೆಯಲ್ಲಿ ಸದ್ಯಕ್ಕೆ ವ್ಯಾಪಾರ ಪ್ರಾರಂಭವಾಗುವದು. ಈ ನಿರ್ಯಾತ ವ್ಯಾಪಾರದಲ್ಲಿ ಭಾಗ ವಹಿಸಬಯಸುವವರು ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನ್ ಕಾರ್ಯದರ್ಶಿಯ ಮೂಲಕ ನಡೆಸಬಹುದು. ಯುದ್ಧ ಪೂರ್ವದಲ್ಲಿಯಾದರೂ ಹಿಂದುಸ್ತಾನ ಮತ್ತು ಜಪಾನ ಇವುಗಳ ನಡುವೆ ಅರಳೆಯ ಮತ್ತು ಸಿದ್ಧ ವಸ್ತ್ರಗಳ ವ್ಯಾಪಾರವೇ ಹೆಚ್ಚಾಗಿ ನಡೆಯುತ್ತಿತ್ತು. ನಮ್ಮ ಅರಳೆಯನ್ನು ಅವರು ಕೊಂಡು ನಮಗೆ ಬೇಕಾದಷ್ಟು ಅಗ್ಗವಾಗಿ ಅರಿವೆಯನ್ನು ಒದಗಿಸುತ್ತಿದ್ದರು. ಅಂದಿಗಿಂತ ಇಂದಿನ ಪರಿಸ್ಥಿತಿ ಬದಲಾಗಿ ನಮಗೆ ಭೋಗ್ಯ ವಸ್ತುಗಳಿಗಿಂತ ಯಂತ್ರ ಸಾಮಗ್ರಿಗಳ ಅವಶ್ಯಕತೆ ಹೆಚ್ಚಾಗಿದೆಯಾದರೂ ಜಪಾನಿ ಬಟ್ಟೆಯೂ—ಅದು ಯುದ್ಧ ಪೂರ್ವದಲ್ಲಿ ಮಾಡುತ್ತಿದ್ದಂತೆ ನಮ್ಮ ಸ್ವದೇಶಿ ಗಿರಣಿಯೊಡೆಯರ ಸಮಾಜ ವಿರೋಧಿ ಧನಪಿಶಾಚಿಯನ್ನು ಉಚ್ಚಾಟನೆ ಮಾಡುವಂತೆ ಯೋಗ್ಯ ಮೇಲಾಟ ನಡೆಸುವಂತಿದ್ದರೆ—ಹಿಂದುಸ್ತಾನಕ್ಕೆ ಸ್ವಾಗತಾರ್ಹವೆ ಆಗಬಹುದು. ಆಗ ಬಡವನಿಗೆ ಉಪಕಾರವಾದೀತು.

ನಿಜಾಮರಿಗೆ ಮೌಂಟಬ್ಯಾಟನರ ಪತ್ರ

ಹೈದರಾಬಾದ ವಿಷಯದಲ್ಲಿ ಕೇಂದ್ರ ಮತ್ತು ಪ್ರಾಂತಿಕ ಮಂತ್ರಿಗಳಲ್ಲಿ ಕೆಲವರೂ ಹೊಣೆಗಾರ ಕಾಂಗ್ರೆಸ್ಸಿಗರೂ "ಸದ್ಯದಲ್ಲೆ ಉಗ್ರ ಕ್ರಮ ಬರಲಿದೆ" ಯೆಂದು ಹೇಳಿದ ಮೇಲೆ ತಿರುಗಿ ತೆರೆಮರೆಯ ಕೈವಾಡ ಪ್ರಾರಂಭವಾಗಿದೆ. ಲಾರ್ಡ ಲುಯಿ ಮೌಂಟಬ್ಯಾಟನ್ನರು ತಮ್ಮ ಖುದ್ದು ಕಾರ್ಯದರ್ಶಿ ಕ್ಯಾಂಬೆಲ್ಲ ಜಾನ್ಸನ್ನರ ಮೂಲಕ ಒಂದು ಗುಪ್ತ ಪತ್ರವನ್ನು ನಿಜಾಮರಿಗೆ ಕಳಿಸಿದ್ದಾರೆ ಆ ನಂತರ "ಅಧಿಕೃತ ವರ್ಗ"ಗಳು ಅರ್ಥಪೂರ್ಣ ಮೌನವನ್ನು ತಾಳಿವೆ. ಪತ್ರದ ಒಕ್ಕಣೆ ಹಾಗು ಈ ಗತ್ತಿನ ಕಾರಣಗಳ ಬಗ್ಗೆ ನಾನಾ ಊಹಾಪೋಹಗಳು ನಡೆದು ದಾರಿಹೋಕನನ್ನು ಮಂಗಾಡವನನ್ನಾಗಿ ಮಾಡಿವೆ. ಮೇ ೨೪ ನ್ನು ನಿಜಾಮರಿಗೆ ತಪ್ಪು ತಿದ್ದಿಕೊಳ್ಳುವ ಕೊನೆಯ ದಿನವಾಗಿ ಗೊತ್ತುಪಡಿಸಲಾಗಿದೆಯೆಂದೂ ಅಷ್ಟರೊಳಗೆ ನಿಜಾಮರು ರಜವಿಯನ್ನು ಹತ್ತಿಕ್ಕಿ ಹಾದಿಗೆ ಬರಬೇಕೆಂದೂ ಆ ಪತ್ರ ಹೇಳಿದೆಯೆಂದು ಒಂದು ತರ್ಕ. ಆದರೆ ಕ್ಯಾಂಬೆಲ್ಲರು ಹೈದರಾಬಾದಿನ ವಿವಿಧ ರಾಜಕೀಯ ಮುಂದಾಳುಗಳೊಡನೆ ಮಾತುಕತೆ ನಡೆಸಿದ್ದಾರೆಂಬ ಸುದ್ದಿ ಈ ತರ್ಕಕ್ಕೆ ಹೊಂದುವದಿಲ್ಲ. ಅತ್ತ ಬ್ರಿಟಿಶರಿಗೆ ಮೊದಲಿಂದಲೂ ಗೆಳೆಯರಾದ ನಿಜಾಮರೊಡನೆ ತಾವಿದ್ದಷ್ಟು ಕಾಲ ಮನಸ್ತಾಪ ಬೇಡೆಂದು ಕಾಲಹರಣ ಮಾಡಿ ಪಾರಾಗಲು ಮೌಂಟಬ್ಯಾಟನ್ನರು ಈ ವೇಷ ತೆಗೆದಿದ್ದಾರೆಂದೂ ಹೇಳುವವರಿದ್ದಾರೆ.

ಔದ್ಯೋಗಿಕ ಅಭಿವೃದ್ಧಿ

ಮೊನ್ನೆ ತಾ. ೧೬ ಕ್ಕೆ ಮುಂಬಯಿ ಸರಕಾರದವರು ತಮ್ಮ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಸರಕಾರದ ಔದ್ಯೋಗಿಕ ಧೋರಣವನ್ನು ವಿಶದಗೊಳಿಸಿ ಒಂದು ಪ್ರಕಟನೆ ಹೊರಡಿಸಿದರು. ೧೯೪೬ ರಲ್ಲಿ ನೇಮಿಸಲಾದ ಪ್ರಾಂತಿಕ ಉದ್ಯೋಗಗಳ ಸಮಿತಿಯ ಸೂಚನೆಗಳನ್ನನುಸರಿಸಿ ಈ ಧೋರಣ ರೂಪಿತವಾಗಿದೆ. ಪ್ರಾಂತದಲ್ಲಿ ಉದ್ಯೋಗಗಳು ಭರದಿಂದ ಬೆಳೆಯಬೇಕು, ಆದರೆ ಒಂದೇ ಕಡೆ ಉದ್ಯೋಗಗಳು ತುಂಬಿಹೋಗಿ ಪಟ್ಟಣಗಳ ಜನಸಂದಣಿ ಬೆಳೆಯಬಾರದು. ಈ ದೃಷ್ಟಿಯಿಂದ ಉದ್ಯೋಗಗಳನ್ನು ಹಂಚಿ ಬೀಳುವಂತೆ ಮಾಡುವದು ಸರಕಾರದ ಧೋರಣವಾಗಿದೆ. ಚಿಕ್ಕಪುಟ್ಟ ಗ್ರಾಮೋದ್ಯೋಗಗಳಿಗೂ ಉತ್ತೇಜನ ಕೊಡಲಾಗುವದು. ಈ ವರೆಗಿನ ಔದ್ಯೋಗಿಕ ತಾಟಸ್ಥ್ಯವನ್ನು ಬಿಟ್ಟು ಸರಕಾರ ಇನ್ನು ಪ್ರಾಂತದ ಸಂಪತ್ಸಂಗ್ರಹದ ವಿಷಯದಲ್ಲಿ ಮಾರ್ಗದರ್ಶನ ಮಾಡುವದಲ್ಲದೆ ಕೂಲಿಕಾರರ ಮತ್ತು ಗಿರಾಕಿಗಳ ಹಿತದೃಷ್ಟಿಯಿಂದ ಉದ್ಯೋಗಗಳ ಮೇಲೆ ನಿಯಂತ್ರಣವಿಡುವದು. ಪ್ರಾಂತದಲ್ಲಿ ಅಲ್ಲಲ್ಲಿ ಸ್ಥಳಗಳನ್ನಾರಿಸಿ ಅಲ್ಲಿ ಸಾರಿಗೆ, ವಿದ್ಯುತ್ ಮೊದಲಾದ ಸೌಕರ್ಯಗಳನ್ನು ಹೊಸ ಉದ್ಯೋಗಗಳನ್ನು ಪ್ರಾರಂಭಿಸಬಯಸುವವರಿಗೆ ಒದಗಿಸುವದಲ್ಲದೆ ಕಾರಖಾನೆಗಳ ಲಾಯಸೆನ್ಸಿಂಗ್ ಪದ್ಧತಿಯನ್ನು ಬಳಕೆಗೆ ತಂದು ಈಗಾಗಲೆ ಕಾರಖಾನೆಗಳು ತುಂಬಿರುವಲ್ಲಿ ಹೊಸವು ಹುಟ್ಟದಂತೆ ಪ್ರತಿಬಂಧಿಸುವದು. ಖಾಸಗಿ ಉದ್ಯೋಗಗಳಿಗೆ ಪ್ರೋತ್ಸಾಹ ಕೊಡುವದಾದರೂ ವಿಶಿಷ್ಟ ಉದ್ಯೋಗಗಳನ್ನು ತಾನೇ ಸ್ಥಾಪಿಸುವದಲ್ಲದೆ ಆ ಜಾತಿಯ ಉದ್ಯೋಗಗಳು ಈಗಾಗಲೆ ಇದ್ದರೆ ಅವುಗಳನ್ನೂ ತಾನೇ ಅಷ್ಟಷ್ಟೇ ವಶಪಡಿಸಿಕೊಳ್ಳುವದು. ಸಂಪತ್ತಿನ ಉತ್ಪಾದನೆಯನ್ನು ಹೆಚ್ಚಿಸಿ ಎಲ್ಲರಿಗೂ ಉದ್ಯೋಗವನ್ನೊದಗಿಸುವದೇ ಸರಕಾರದ ಧ್ಯೇಯ

ರಾಷ್ಟ್ರಭಾಷೆ

ಈ ಕೆಳಗಿನದು ಪುಣೆಯ ಮಹಾರಾಷ್ಟ್ರ ರಾಷ್ಟ್ರಭಾಷಾ ಸಭೆಯವರು ಘಟನಾ ಸಮಿತಿಯ ಅಧ್ಯಕ್ಷ ಮತ್ತು ಸದಸ್ಯರಿಗೆ ಮಾಡಿಕೊಂಡ ಬಿನ್ನಹ.

“ಭಾರತದ ಅಧಿರಾಜ್ಯದ ರಾಷ್ಟ್ರೀಯ ಇಲ್ಲವೆ ಇನ್ನೂ ಒಪ್ಪುವಂತೆ ಹೇಳುವುದಾದರೆ, ಮಾಂಡಲಿಕ ಭಾಷೆಯ ಪ್ರಶ್ನೆಯ ಬಗ್ಗೆ ಮಹಾರಾಷ್ಟ್ರ ರಾಷ್ಟ್ರಭಾಷಾ ಸಭೆಯ ವಿಚಾರ ಪೂರ್ಣ ಅಭಿಪ್ರಾಯವು ಈ ಕೆಳಗಿನಂತಿದೆ.

(೧) ಮಾಂಡಲಿಕ ವಿಷಯಗಳನ್ನು ಬಿಟ್ಟು ಉಳಿದ ಎಲ್ಲವುಗಳಲ್ಲಿ ಆಗಲೆ ಸುಪ್ರಸಿದ್ಧವಾದ ಪ್ರಾಂತ ಭಾಷೆಗಳೆನಿಸಿದ ಮರಾಠಿ, ಗುಜರಾತಿ, ಕನ್ನಡ, ತಮಿಳು, ತೆಲುಗು, ಬಂಗಾಲಿ ಮುಂತಾದವುಗಳನ್ನೇ ಪ್ರಾಂತಗಳಲ್ಲಿ ಬಳಸಬೇಕೆಂದು ಈ ಸಭೆ ನಿರ್ಧಾರವಾಗಿ ಅಭಿಪ್ರಾಯಪಡುತ್ತದೆ.

(೨) ಭಾರತ ರಾಜ್ಯಮಂಡಲದಲ್ಲಿ ಮಾಂಡಲಿಕ ಭಾಷೆಯೊಂದಿರಬೇಕು. ಅದು ಇಂದಿನ ಆಂಗ್ಲಭಾಷೆಯ ಬಳಕೆಯನ್ನು ಓಡಿಸಿ ಅದರ ಸ್ಥಾನದಲ್ಲಿ ಬಳಕೆಗೆ ನಿಲ್ಲಬೇಕು.

(೩) ಅಂಥ ಮಾಂಡಲಿಕ (Federal) ಭಾಷೆಯು ಆಂಗ್ಲಪೂರ್ವ ಯುಗದಲ್ಲಿ ಹಿಂದುಸ್ತಾನದಲ್ಲಿತ್ತೆಂದು ಈ ಸಭೆ ನಂಬುತ್ತದೆ. ಹಾಗಿಲ್ಲದಿದ್ದಲ್ಲಿ ಸಾರ್ವಜನಿಕ ವ್ಯವಹಾರವೇ ನಿಂತು ಹೋಗುತ್ತಿತ್ತು. ಇದು ವಸ್ತುಸ್ಥಿತಿಗೂ ವಿಷಯಜ್ಞತೆಗೂ ವಿರುದ್ಧವಾದದ್ದು.

(೪) ಈ ಸರ್ವಜನೀನ ಇಲ್ಲವೆ ಮಾಂಡಲಿಕವೆನಿಸಿದ ಹಳೆಯ ಭಾಷೆಯು ಮಧ್ಯಭಾರತಕ್ಕೆ ಸಂಬಂಧಿಸಿದ್ದು. ಇದೇ ಭಾಷೆ ಅನಂತರ “ಖಡೀ ಬೋಲಿ” ಎಂದು ಕಾಲಕ್ರಮೇಣ ಹೆಸರು ಪಡೆಯಿತು. ಈ ಸರ್ವಸಾಧಾರಣವಾದ ಭಾಷೆಯು ಈಗ ಸ್ಥೂಲವಾಗಿ ಹಿಂದಿ ಎಂದು ಕರೆವ ಭಾಷೆಯು ಹಳೆಯ ರೂಪಗಳಿಂದ ರೂಪಿತವಾಯಿತು. ಈ ಹಿಂದಿಯು ಭಾರತದ ಬೇರೆ ಬೇರೆ ಭಾಗಗಳಲ್ಲಿ ಸ್ಥಳೀಯ ಭಾಷೆಗಳ ಪ್ರಭಾವದಿಂದ ಅಂಶತಃ ರೂಪಾಂತರ ಹೊಂದಿತು. ರಾಜಭಾಷೆಯಾಗಿದ್ದ ಪಾರಸಿ ಮತ್ತು ಕುರಾನು ಶರೀಯತ್ತುಗಳ ಅರಬಿ ಇವುಗಳ ವರ್ಣಸ್ಸು ಜೊತೆಗೆ ಸೇರಿಕೊಂಡಿತು. ನಿಜವಾಗಿ ನೋಡಿದರೆ ಈ ಭಾಷೆಯೇ ಹಿಂದುಸ್ತಾನಿ ಎಂದು ಜನಜನಿತವಾಗಿ ಹೆಸರು ಪಡೆಯಿತು. ಈ ಹಿಂದುಸ್ತಾನಿಯನ್ನು “ಇಂಡೋಸ್ತಾನ್” ಎಂದು ಅಕ್ಬರ ಮತ್ತು ಜಹಾಂಗೀರರ ಮೊಗಲ ಸಾಮ್ರಾಜ್ಯದಲ್ಲಿಯ ಕ್ಯಾಥೋಲಿಕ್ ಮಿಶನರಿಗಳು ಕರೆದರು.

(೫) ಆ ಹಳೆಯ ಆಕರವಾದ ಹಿಂದುಸ್ತಾನಿಯನ್ನು ಆಧುನಿಕ ಯುಗಕ್ಕೆ ಅಗತ್ಯವಾದ ಶಬ್ದಾಗಮ ಶಬ್ದಾದೇಶಗಳೊಂದಿಗೆ ಉದ್ಧರಿಸಿ, ವಿಸ್ತರಿಸಿ, ಬೆಳೆಸಬೇಕೆಂದು ನಮ್ಮ ಗುರಿ. ಆಧುನಿಕ ಆವಶ್ಯಕತೆಯೆಂದರೆ ಮಾಂಡಲಿಕ ಸರಕಾರದ ಉದ್ದೇಶಗಳ ಸಾಧನೆ, ಅಂತಃ ಪ್ರಾಂತೀಯ ವ್ಯವಹಾರ ಮತ್ತು ಸಹಕಾರ ಇವುಗಳಿಗಾಗಿ ಆ ಹಿಂದುಸ್ತಾನಿಯನ್ನು ಸುಧಾರಿಸುವುದು.

(೬) ಅಂಥ ಮಾಂಡಲಿಕ ಭಾಷೆಯು ತನ್ನ ವ್ಯಾಪ್ತಿಯಲ್ಲಿ ವಿಸ್ತೃತವೂ ವಿಶಾಲವೂ ಆಗಿರಬೇಕು, ತನ್ನ ರೂಪದಲ್ಲಿ ಸರಳ ಮತ್ತು ಸ್ಥಿತಿಸ್ಥಾಪಕವಿರಬೇಕು ಮತ್ತು ತನ್ನ ಧ್ಯೇಯದಲ್ಲಿ ಅನ್ಯಭಾಷೆಯ ಪದಗಳನ್ನು ಒಳಕೆಗೆಡುಕೊಳ್ಳುವಂಥದಿರಬೇಕು ಎಂಬುದು ಸ್ಪಷ್ಟವಾಗಿಯೇ ಇದೆ. ಇದರಿಂದ ನಮ್ಮ ನಾಡಿನ ಬಹುಸಂಖ್ಯಾಕರು ಅದನ್ನು ಅರಿತು ಸುಲಭವಾಗಿ ಬಳಸುವಂತಾಗುತ್ತದೆ.

(೭) ಉಕ್ತ ಉದ್ದೇಶವನ್ನು ಸಾಧಿಸಲು ಕೃತಕವಾಗಿ ಹಿಂದಿ ಮತ್ತು ಉರ್ದುವಿನಿಂದ ನಿರ್ದಿಷ್ಟ ಸಂಖ್ಯೆಯ ಪದಗಳನ್ನು ತೆಗೆದುಕೊಂಡು ಭಾಷೆ ಎನ್ನು ಸತುರೆಸಗೊಳಿಸಬೇಕೆಂದು ಕೆಲವರು ಹೇಳುವುದು ತಪ್ಪೆಂದು ಸಭೆಯ ಮನೀಷೆ. ಸರಳತೆ ಮತ್ತು ಸುಲಭಗ್ರಾಹ್ಯತೆಗಳೇ ನಿಕಷವಾಗಬೇಕಲ್ಲದೆ ಮತ್ತಾವ ನಿಃಂಕುಶವಾದ ಗಣಿತ ಪ್ರಮಾಣವೂ ಆಗಲಾರದು.

(೮) ಯಾವುದಾದರೊಂದು ಪ್ರಾಂತಭಾಷೆಯನ್ನು ಒಯ್ದು ಮಾಂಡಲಿಕ ಭಾಷೆಯ ಪಟ್ಟಕ್ಕೇರಿಸುವ ಬುದ್ಧಿ ನಮ್ಮ ಕಾಯದೆಕಾರರಿಗೆ ಉಂಟಾಗದಿರಲೆಂದು ಸಹ ಈ ಸಭೆ ಎಚ್ಚರಿಕೆ ಕೊಡಬಯಸುತ್ತದೆ. ಏಕೆಂದರೆ ಅಂಥ ಮಾರ್ಗವು ಅಸ್ವಾಭಾವಿಕವೂ ಅವ್ಯವಹಾರ್ಯವೂ ಆಗಿರುವುದರಿಂದ ಅಯಶಸ್ವಿಯಾಗಿಯೇ ತೀರುವುದು. ಅದರಿಂದ ಅಭಿವೃದ್ಧಿಗೆ ತರಬೇಕೆಂದು ಬಯಸಿದ ಪ್ರಾಂತಭಾಷೆಗಳಿಗೆ ತರ್ಕಸಿದ್ಧವಾದ ಹಾನಿಯು ಪ್ರಾಪ್ತವಾಗುವದು.

(೯) ಎಲ್ಲ ಮಾಂಡಲಿಕ ವಿಧಿ, ನಿಯಮ, ಆಜ್ಞೆ ಮತ್ತು ಪ್ರಕಟನೆಗಳೂ ಪ್ರಾಂತಗಳ ಉಪಯೋಗಕ್ಕಾಗಿ ಆಯಾ ಪ್ರಾಂತಭಾಷೆಗಳಲ್ಲಿ ಪ್ರಕಾಶಿಸಲ್ಪಡಬೇಕೆಂಬ ನಿಯಮವಿರಬೇಕು. ಮತ್ತು ಅವುಗಳ ಅಧಿಕೃತ ಭಾಷಾಂತರಗಳಲ್ಲಿದ್ದಂತೆ ವಿಧೇಯವಾಗಬೇಕು ಎಂಬುದು ಈ ಸಭೆಯ ವಿಚಾರ.

(೧೦) ಲಿಪಿಯ ಬಗ್ಗೆ ಹೇಳಬೇಕಾದರೆ— ಹಿಂದಿ, ಬಂಗಾಲಿ, ಮರಾಠಿ, ಗುಜರಾಥಿ ಮುಂತಾದ ಈಗ ನಮ್ಮ ಅಧಿರಾಜ್ಯದಲ್ಲಿ ಬಳಸಲಾಗುತ್ತಿರುವ ಬಹುಸಂಖ್ಯಾಕ ಲಿಪಿಗಳೆಲ್ಲ ದೇವನಾಗರಿಯ ಒಂದಲ್ಲ ಒಂದು ರೂಪಗಳೇ ಆಗಿವೆ. ಆದುದರಿಂದ ಈ ಸಭೆಯ ಅಭಿಪ್ರಾಯದಲ್ಲಿ ಮುಖ್ಯವಾದ ಅಧಿಕೃತ ಲಿಪಿಯು ದೇವನಾಗರಿಯು ಯಾವುದಾದರೊಂದು ರೂಪವಾಗಿರತಕ್ಕದ್ದು. ಆಗೀಗ, ಬೇರೆ ಬೇರೆ ಉದ್ದೇಶಗಳಿಗಾಗಿ ಬೇಕಾದರೆ ರೋಮನ್ ಇಲ್ಲವೆ ಅರಬ್ಬೀ ಲಿಪಿಗಳನ್ನು ಬಳಸಬಹುದು. ಉದಾಹರಣೆ ಬೇಕಾದರೆ— ಅಂತರರಾಷ್ಟ್ರೀಯ ಪ್ರಪಂಚದಲ್ಲಿ ರೋಮನ್ ಲಿಪಿಯ ಬಳಕೆ ನಮ್ಮ ಅಧಿರಾಜ್ಯ ಸರಕಾರದ ಕೆಲಸವನ್ನು ಎಷ್ಟೋ ಪಾಲು ಸುಲಭ ಮಾಡಿ ಕೊಡಬಹುದಾಗಿದೆ.

(೧೧) (ಅ) ಆದುದರಿಂದ ಮೇಲೆ ವಿವರಿಸಿದಂತೆ ಮಾಂಡಲಿಕ ಭಾಷೆಯು ಹಿಂದುಸ್ತಾನಿಯೆಂದು ಕರೆಯಲ್ಪಡಲಿ ಮತ್ತು ದೇವನಾಗರಿಯು ಮುಖ್ಯವಾದ ಮಾಂಡಲಿಕ ಲಿಪಿಯಾಗಿ ಸ್ವೀಕೃತವಾಗಲಿ ಎಂದು ಈ ಸಭೆ ಪ್ರಾರ್ಥಿಸಿಕೊಳ್ಳುತ್ತದೆ.

(ಆ) ಮಾಂಡಲಿಕ ಭಾಷೆಯ ಮತ್ತು ಲಿಪಿಯ ಸಾಮಾನ್ಯ ಪರಿಜ್ಞಾನವು “ಅಪ್ಪರ್ ಪ್ರೈಮರಿ” ಶಾಲೆಯಿಂದಲೆ ಕಡ್ಡಾಯವಾಗಿ ಕಲಿಸಲ್ಪಡಬೇಕು ಇದರಿಂದ ಅಂತಃಪ್ರಾಂತೀಯ ಸಂಬಂಧ, ವ್ಯವಹಾರ ಮತ್ತು ಸಹಕಾರ ಇವು ಸುಲಭವಾಗುತ್ತವೆ.”

ಈ ಬಿನ್ನಹಕ್ಕೆ ಅಧ್ಯಕ್ಷರಾದ ಮಹಾಮಹೋಪಾಧ್ಯಾಯ ಪ್ರೊ. ಡಿ. ವಿ. ಪೋತ್‌ದಾರ, ಉಪಾಧ್ಯಕ್ಷರಾದ ಶ್ರೀ ವಸಂತರಾವ್ ನಾಯಕ್ ಮತ್ತು ಸಭೆಯ ಇತರ ನಾಲ್ಕು ಅಧಿಕಾರಿಗಳು ಸಹಿ ಮಾಡಿದ್ದಾರೆ.

ಲಿಪಿಯ ಸಂಬಂಧದಲ್ಲಿ ಮೇಲೆ ೧೦ ಮತ್ತು ೧೧ನೇ ಕಲಮುಗಳಲ್ಲಿ ಸೂಚಿಸಿದ್ದಕ್ಕಿಂತ ಸ್ವಲ್ಪ ಮುಂದೆ ಹೋಗಬಯಸಿದರೂ ಬಿನ್ನಹಪತ್ರಿಕೆಯಲ್ಲಿ ಹೇಳಿದ ಉಳಿದ ಎಲ್ಲ ವಿಷಯಗಳಿಗೂ ನಾನು ಒಪ್ಪಿಗೆ ಕೊಡುತ್ತೇನೆ. ಲಿಪಿಗಳ ಸಂಬಂಧದಲ್ಲಿ ನನ್ನ ಅಭಿಪ್ರಾಯ ಈ ಬಗೆಯಾಗಿದೆ.

೧) ಹಿಂದುಸ್ತಾನ ಸರಕಾರದ ಅಧಿಕೃತ ಲಿಪಿ ದೇವನಾಗರಿ, ಉರ್ದು ಮತ್ತು ನಿಯಮಬದ್ಧ ರೋಮನ್ ಲಿಪಿಗಳಾಗಿರಬೇಕು ಮತ್ತು ಸಾರ್ವಜನಿಕರು ಸರಕಾರದ ಯಾವದೇ ಕಚೇರಿಗಳಿಗೆ ಮನವಿ ಮುಂತಾದ್ದನ್ನು ಮೇಲಿನ ಯಾವದೇ ಲಿಪಿಗಳಲ್ಲಿ ಕಳಿಸಬಹುದು.

೨) ಈ ತಪ್ಪುಗಳಾಗದಂತೆ ಶಕ್ಯವಿದ್ದಷ್ಟು ಯೋಗ್ಯ ರೀತಿಯಿಂದ ಬೇರೆ ಬೇರೆ ಹಿಂದೀ ಭಾಷೆಗಳ ಶಬ್ದಗಳನ್ನು ತಿಳಿಸಲು ಶಕ್ಯವಾಗುವಂತೆ ಮತ್ತು ತಂತಿ ಮೂಲಕ ಕಳಿಸಲು ಬರುವಂತೆ ರೋಮನ ಲಿಪಿಯನ್ನು ನಿಯಮಬದ್ಧಗೊಳಿಸಲು ಹಿಂದುಸ್ತಾನ ಸರಕಾರದವರು ಆದಷ್ಟು ಬೇಗ ಕ್ರಮ ಕೈಕೊಳ್ಳಬೇಕು. ಇಂಥ ನಿಯಮಬದ್ಧ ರೋಮನ್ ಲಿಪಿಯನ್ನೇ ದೇಶದಲ್ಲಿ ಅಧಿಕೃತ ಲಿಪಿಯೆಂದು ಪರಿಗಣಿಸಬೇಕು.

೩) ಯಾವದೇ ಭಾಷೆಯಲ್ಲಿ ವ್ಯವಹಾರ ಮಾಡಿದರೂ ಸರಕಾರದವರು ಒಪ್ಪಿದ ಹಿಂದೀ ಲಿಪಿಯಲ್ಲಿ ಮತ್ತು ನಿಯಮಬದ್ಧ ರೋಮನ್ ಲಿಪಿಯಲ್ಲಿಯೋ ಆ ವ್ಯವಹಾರ ಸಾಗತಕ್ಕದ್ದು ಮತ್ತು ಸರಕಾರೀ ಮತ್ತು ಅರೆ ಸರಕಾರೀ ಪ್ರಕಟನೆಗಳು, ಸೂಚೀಪಟಗಳು ಮೊದಲಾದವುಗಳು ಅವು ಮನ್ನಣೆ ಪಡೆದ ಯಾವದೇ ಪ್ರಾಂತೀಯ ಭಾಷೆಗಳಲ್ಲಿ ಇರಲಿ ಅಥವಾ ಹಿಂದುಸ್ತಾನಿಯಲ್ಲಿ ಇರಲಿ, ಅವೆಲ್ಲ ಪ್ರಶಸ್ತಿ ಪಡೆದ ಪ್ರಾಂತೀಯ ಲಿಪಿಯಲ್ಲಿ ಅಥವಾ ಲಿಪಿಗಳಲ್ಲಿ ಮತ್ತು ನಿಯಮಬದ್ಧ ರೋಮನ್ ಲಿಪಿಯಲ್ಲಿ ಇರತಕ್ಕದ್ದು ಅಂದರೆ ತಮಿಳುನಾಡಿನಲ್ಲಿ ಯಾವದೊಂದು ನೋಟೀಸು ಹಿಂದುಸ್ತಾನಿಯಲ್ಲಿ ಪ್ರಸಿದ್ಧವಾಗಬೇಕಾಗಿದ್ದರೆ, ಅದು ತಮಿಳಿನಲ್ಲಿ ಮತ್ತು ರೋಮನ್ ಲಿಪಿಯಲ್ಲಿ ಪ್ರಸಿದ್ಧವಾಗತಕ್ಕದ್ದು, ಆಂಧ್ರ ಪ್ರಾಂತದಲ್ಲಿ ತೆಲುಗಿನಲ್ಲಿ ಮತ್ತು ರೋಮನ್ ಲಿಪಿಯಲ್ಲಿ, ಕರ್ನಾಟಕದಲ್ಲಿ ಕನ್ನಡ ಮತ್ತು ರೋಮನ್ ಲಿಪಿಯಲ್ಲಿ ಪ್ರಸಿದ್ಧಿಸತಕ್ಕದ್ದು. ಮತ್ತು ಕರ್ನಾಟಕದಲ್ಲಿ ಸರಕಾರಕ್ಕೆ ಮಾಡಿಕೊಳ್ಳುವ ಬಿನ್ನಹ ಪತ್ರಿಕೆಗಳನ್ನು ಕನ್ನಡ ಭಾಷೆಯಲ್ಲಾಗಲಿ ಹಿಂದುಸ್ತಾನಿಯಲ್ಲಿ ಆಗಲಿ ಕಳಿಸಬಹುದು ಆದರೆ ಆ ಬಿನ್ನಹ ಪತ್ರಿಕೆಗಳು ಲಿಪಿ ಕನ್ನಡವಾಗಬಹುದು ರೋಮನ್ ಆಗಬಹುದು.

ಹಿಂದೀ ಭಾಷೆಗಳನ್ನು ರೋಮನ್ ಲಿಪಿಯಲ್ಲಿ ಬರೆಯಬೇಕೆಂದು ಹರಿಜನ ಪತ್ರಿಕೆಯು ಮುಖಾಂತರವಾಗಿಯೇ ನಾನು ಪ್ರತಿಪಾದಿಸುವದನ್ನು ನೋಡಿ ವಾಚಕರಿಗೆ ಆಶ್ಚರ್ಯವೆನಿಸಬಹುದು. ಗಾಂಧಿಯವರು ಲಿಪಿಗಳ ಸಂಬಂಧದಲ್ಲಿ ತಾಳಿದ ಅಭಿಪ್ರಾಯಕ್ಕೆ ಇದು ವಿರುದ್ಧವಾಗಿದೆಯೆಂಬುದನ್ನು ನಾನು ಒಪ್ಪುತ್ತೇನೆ. ಈ ವಿಷಯಗಳ ಬಗ್ಗೆ ನಾನು ಬೇರೆ ಪತ್ರಿಕೆಗಳಲ್ಲಿ ಅನೇಕ ಸಲ ಚರ್ಚಿಸಿದ್ದೇನೆ. ಅದನ್ನು ಮತ್ತೆ ಇಲ್ಲಿ ವಿವರವಾಗಿ ಚರ್ಚಿಸಿದ್ದಾದರೆ ಈ ಲೇಖವು ಬಹಳ ದೀರ್ಘವಾಗುವದು; ಆದರೆ ಚರ್ಚೆಯು ಅವಶ್ಯವೇ ಎನಿಸಿದರೆ ಮುಂದೆ ಎಂದಾದರೊಮ್ಮೆ ಹರಿಜನದಲ್ಲಿಯೇ ಈ ವಿಷಯವನ್ನು ಚರ್ಚಿಸುವೆ.

ವರ್ಧಾ ಕಿಶೋರಲಾಲ ಮಶ್ರುವಾಲಾ

೨೮-೪-೪೮.

ಎಲ್ಲರಲ್ಲಿ ಇರಬೇಕಾದುದೇ

ಮುಂಬಯಿ ನಗರದ ಗುಜರಾತಿ ದಿನಪತ್ರಿಕೆಗಳಲ್ಲಿ ಎರಡು, ಜನ್ಮಭೂಮಿ ಮತ್ತು ವಂದೇಮಾತರಂ ಎಂಬವು ಕೆಳಗಿನ ಸಮಾಚಾರವನ್ನು ಒಳ್ಳೇ ಪ್ರಾಮುಖ್ಯವಾಗಿ ಪ್ರಕಟಿಸಿವೆ. ಆ ಸಮಾಚಾರ ಇದು.

ಒಂದು ವ್ಯಾಪಾರಿ ಸಂಸ್ಥೆಯ ಒಬ್ಬ ಸಹಾಯಕ ಕಾರಕೂನನು ಹತ್ತು ಹತ್ತು ಸಾವಿರ ರೂಪಾಯಿಗಳ ಎರಡು ನೋಟಿನ ಕಟ್ಟುಗಳನ್ನು ಯಜಮಾನನ ಬ್ಯಾಂಕಿಗೆ ಜಮೆ ಮಾಡಿಸಲು ತೆಗೆದುಕೊಂಡು ಹೋಗುತ್ತಿದ್ದನು. ಕಾರಕೂನನು ಹಾದಿಯಲ್ಲಿ ಒಂದು ಕಟ್ಟನ್ನು ಕಳೆದುಕೊಂಡನು. ಬ್ಯಾಂಕಿಗೆ ತಲುಪಿದ ಮೇಲೆಯೇ ಅವನಿಗೆ ಹಣ ಕಳೆದುದು ಗೊತ್ತಾಯ್ತು. ಅವನು ಕೂಡಲೆ ತನ್ನ ಯಜಮಾನನ ಕಚೇರಿಗೆ ಓಡಿಹೋಗಿ ನಡೆದುದನ್ನು ಹೇಳಿದನು. ಯಜಮಾನನು ಇವನನ್ನು ಶಂಕಿಸಿ ಪೋಲೀಸರ ವಶಕ್ಕೆ ಒಪ್ಪಿಸಿದನು ಹಾಗು ಸ್ಥಳೀಕ ಪತ್ರಿಕೆಗಳಲ್ಲಿ ಹೀಗೆ ಹಣಕಳೆದುಕೊಂಡ ಸಮಾಚಾರವನ್ನು ಪ್ರಕಟಿಸಿದನು.

ಸುದೈವದಿಂದ, ಲಲಶಂಕರ ಕಂಜಿ ಎಂಬವರಿಗೆ ಆ ನೋಟಿನ ಕಟ್ಟು ಸಿಕ್ಕಿತು. ಅವರ ಕಣ್ಣಿಗೆ ಈ ಬಗ್ಗೆ ಬಂದ ಸಮಾಚಾರದ ಪ್ರಕಟನೆಯೂ ಬಿತ್ತು. ಕೂಡಲೇ ಅವರು ಹಣದ ಒಡೆಯರನ್ನು ಕಂಡು ಅದನ್ನು ಅವರಿಗೆ ಒಪ್ಪಿಸಿದರು. ಪೋಲೀಸರ ವಶಕ್ಕಿದ್ದ ಕಾರಕೂನನನ್ನು ಕೂಡಲೇ ಬಿಟ್ಟು ಬಿಡಲಾಯ್ತು.

ಮೇಲ್ಕಾಣಿಸಿದ ಪತ್ರಿಕೆಗಳು ಶ್ರೀ ಲಾಲಶಂಕರರ ಪ್ರಾಮಾಣಿಕತೆಯನ್ನು ಎತ್ತಿ ತೋರಿಸಲೆಂದು ಈ ಸಮಾಚಾರವನ್ನು ಅಷ್ಟು ಪ್ರಾಮುಖ್ಯ ಕೊಟ್ಟು ಮುದ್ರಿಸಿದ್ದು ಸ್ವಾಭಾವಿಕ. ಅವರು ಹಾಗೆ ಮುದ್ರಿಸಿದ್ದು ಯುಕ್ತವೇ. ಆದರೆ ಇದರ ಜೊತೆಗೆ ನಾವು ಇದನ್ನೂ ನೆನಪಿಡಬೇಕಾಗಿದೆ. ಪ್ರಾಮಾಣಿಕತೆ ಎಂಬ ವಸ್ತು ಸಮಾಜದಲ್ಲಿ ಅತಿ ವಿರಳವಾಗಿ ಹೋಗಿದೆ. ಎಲ್ಲರಲ್ಲಿಯೂ ಇರಬೇಕಾದ ಈ ಗುಣವು ಶ್ರೀ ಶಂಕರಲಾಲರಲ್ಲಿಯೂ ಕಂಡುಬಂದರೆ ಅದರಲ್ಲಿ ಆಶ್ಚರ್ಯಪಡಬೇಕಾದುದೇನಿದೆ? ಈ ಪ್ರಾಮಾಣಿಕತೆ ಇಲ್ಲದೆ ಕರ್ತವ್ಯಚ್ಯುತನಾದವನನ್ನು ಕಂಡರೇ ಆಶ್ಚರ್ಯವೆನಿಸಬೇಕು, ಕೆಡುಕೆನಿಸಬೇಕು. ಇದಕ್ಕೆ ವಿಪರೀತವಾಗಿ ಇಂದು ನಾವು ಪ್ರಾಮಾಣಿಕತೆ ಕಂಡುಬಂದರೆ ಅದನ್ನು ಸಾರಿಹೇಳಿ ಅಚ್ಚರಿಪಡುತ್ತಿದ್ದೇವೆ. ಸಂಸ್ಕೃತಿಯ ಅಧಃಪಾತವಾಗಿ ಒಂದು ಸಣ್ಣ ಪ್ರಾಮಾಣಿಕ ಕೆಲಸವು ಮರುಭೂಮಿಯಲ್ಲಿ ಕಂಡ ಹಸುರಿನಂತೆ ಸುಖವೆನಿಸುವಂತಾಗಿದೆ.

ಗುಜರಾತಿಯಲ್ಲಿ ಒಂದು ಭಜನೆಯ ಶ್ಲೋಕವಿದೆ. ಅದರ ಅರ್ಥ ಹೀಗಿಂತು:

“ಸ್ತ್ರೀಯರನ್ನು ಕಂಡರೆ ಪುರುಷರು ದೂರ ಸರಿದು ನಡೆದಗದು ಮತ್ತು ಯಾರೂ ಎಲ್ಲಿಯೂ ಬಿದ್ದ ಇನ್ನೊಬ್ಬರ ಮಾತ್ತು ಏಗೆ ಕೈ ಹಚ್ಚದಂದು ದೇವರು ಖಂಡಿತ ಭೂಮಿಗಿಳಿದು ಬರುತ್ತಾನೆ.”

ಇದರ ಸಾರವಿಷ್ಟೇ. ಪುರುಷನ ಬಲಾತ್ಕಾರ ಭಯವು ಸ್ತ್ರೀಗೆ ಇಲ್ಲದಾದಾಗ, ಎಲ್ಲ ವ್ಯವಹಾರಗಳಲ್ಲಿಯೂ ಪ್ರಾಮಾಣಿಕತೆ ನೆಲಸಿದಾಗ ದೇವರ ರಾಜ್ಯವು ಭೂಮಿಗಿಳಿದು ಬಂದಂತೆಯೇ ಸರಿ.

ಮನಸ್ಸು ಮಾಡಿದರೆ ನಾವೆಲ್ಲರೂ ಶ್ರೀ ಲಾಲಶಂಕರರಂತೆ ಪ್ರಾಮಾಣಿಕರಾಗಿ ಸರ್ವೋದಯ ಸಮಾಜವನ್ನು ಸ್ಥಾಪಿಸುವ ಮಹಾ ಕಾರ್ಯದಲ್ಲಿ ಸಹಭಾಗಿಗಳಾಗಬಹುದು.

೩-೫-೪೮ ಕಿಶೋರಲಾಲ ಮಶ್ರುವಾಲಾ

ಪ್ರಶ್ನೋತ್ತರ

ಸಹಭೋಜನ

ಪ್ರಶ್ನೆ— ಈ ವರೆಗೂ ನಾವು ಯಾರನ್ನು ಮುಟ್ಟುತ್ತಿರಲಿಲ್ಲವೋ, ಮಾತಾಡಿಸುತ್ತಿರಲಿಲ್ಲವೋ ಅಂಥ ಜನರ ಸಂಗಡ ಸಹಭೋಜನದ ನಿಷೇಧವನ್ನು ನಾವು ಕಿತ್ತುಹಾಕಬೇಕೇ? ಹಾಗೆ ಮಾಡಬೇಕೆಂದು ಪೂಜ್ಯ ಗಾಂಧೀಜಿ ಹೇಳಿದ್ದಾರೆಯೆ?

ಉತ್ತರ— ಸಹಪಂಕ್ತಿಯ ನಿಷೇಧದಲ್ಲಿ ಧರ್ಮದೃಷ್ಟಿಯಿಂದ ನಾವು ಅದರ ಮುಕ್ತ ಭಾವದನ್ನು ನಾವು ಕಂಡು ಹಾಕಿಯೆ ತೀರಬೇಕು. ನಾನು ಕೊಟ್ಟ ಉತ್ತರವನ್ನು ತಿಳಿಯಲು ನಮ್ಮೀಸೆಯ ನಿಷೇಧವಿಲ್ಲ. ಅಂದ ಮೇಲೆ ಆ ಅನ್ನವನ್ನು ಬೇರೆ ಸಿದ್ಧ ಮಾಡೀ ಇರಲಿ, ಅದನ್ನು ಮಾನವ ಮಾತ್ರನೊಡನೆ ಒಂದೇ ಪಂಕ್ತಿಯಲ್ಲಿ ಕುಳಿತು ಉಣ್ಣಲು ಆಕ್ಷೇಪವೆತ್ತುವದು ಸರಿಯಲ್ಲ. ಇದರಲ್ಲಿ ತಿನ್ನುವ ನಿಯಮವನ್ನೊಂದು ಪಾಲಿಸುವದು ಅವಶ್ಯ ಅದರ ಬಗ್ಗೆ ಲಕ್ಷ್ಯವೀಯುವದೂ ಅವಶ್ಯ. ಆದರೆ ಅದನ್ನು ಆರೋಗ್ಯ ಮತ್ತು ಸ್ವಚ್ಛತೆಯ ದೃಷ್ಟಿಯಿಂದಲೆ ವಿಚಾರಿಸಬೇಕಲ್ಲದೆ, ಮುಟ್ಟುಚಟ್ಟು, ಮೇಲು ಕೀಳು ಎಂಬ ಭಾವನೆಯಿಂದ ನೋಡತಕ್ಕದ್ದಲ್ಲ. ಈ ತಿಳುವಳಿಕೆಯು ವಿಚಾರದಿಂದಂತೂ ನಿಶ್ಚಿತವೆಂದೆನಿಸುವುದು.

ಸಹಭೋಜನ ನಿಷೇಧಗಳನ್ನು ತೊಡೆದು ಹಾಕಬೇಕೆಂದು ಗಾಂಧೀಜಿ ಹೇಳಿಲ್ಲವೆಂದಲ್ಲ. ಆದರೆ ಒಂದು ವೇಳೆ ಗಾಂಧೀಜಿ ಹೇಳದಿದ್ದರೂ ನಾವು ಸ್ವತಃ ಅದನ್ನು ಯೋಚಿಸಿ ಹಾಗೆ ಮಾಡುವದವಶ್ಯ. ಅವರು ಹೇಳಿದ್ದನ್ನೇ ಹೇಳಿದಷ್ಟನ್ನು ಮಾತ್ರವೇ ನಾವು ಮಾಡಬೇಕೆಂದಾಗಲಿ ಅವರು ಹೇಳಿದ್ದನ್ನಾದರೂ ವಿಚಾರ—ಸಚಾರವಿಲ್ಲದೆ ಮಾಡಿಬಿಡಬೇಕೆಂದಾಗಲಿ ನಾವು ತಿಳಿದುಕೊಳ್ಳಕೂಡದು. ಸಹಭೋಜನ ನಿಷೇಧದ ವಿಷಯದಲ್ಲಿ ನಮಗೆ ಅಂಟಿಕೊಂಡಿರುವ ಸಂಸ್ಕಾರ ನಮ್ಮ ದೃಷ್ಟಿಯನ್ನು ಸಂಕುಚಿತವಾಗಿಯೂ ಹೃದಯವನ್ನು ಅನುದಾರವಾಗಿಯೂ ಮಾಡಿಬಿಟ್ಟಿದೆ. ಈ ಕಾರಣದಿಂದಲೇ ನಾವು ಸ್ವತಂತ್ರವಾಗಿ ವಿಚಾರಮಾಡಿ ಈ ನಿಷೇಧವನ್ನು ಕಿತ್ತೊಗೆಯುವ ನಿರ್ಣಯಕ್ಕೆ ಬರಬೇಕಾಗಿದೆ.

ಆದರೂ ಓದುಗರ ತಿಳುವಳಿಕೆಗಾಗಿ ಶ್ರೀ ನಿರ್ಮಲ ಕುಮಾರ ಬಸು ಅವರು ಸಂಪಾದಿಸಿದ “ಸಿಲೆಕ್ಷನ್ಸ್ ಫ್ರಾಮ್ ಗಾಂಧೀ” ಪುಸ್ತಕದ ಸಹಾಯದಿಂದ ಗಾಂಧೀಜಿಯ ಲೇಖಗಳಿಂದ ಕೆಲವಂಶಗಳನ್ನೆ ಇಲ್ಲಿ ಕೊಡಲಾಗಿದೆ. ಈ ವಿಷಯಗಳಲ್ಲಿ ಜನರನ್ನು ಅಷ್ಟಷ್ಟೇ ಮುಂದೊಯ್ಯಬೇಕೆಂದು ಗಾಂಧೀಜಿಯ ಇಚ್ಛೆಯಿದ್ದಂತೆ ಈ ಉದಾಹರಣೆಗಳಿಂದ ತಿಳಿದುಬರುತ್ತದೆ. ಸ್ವತಃ ಅವರು ಚಿಕ್ಕಂದಿನಿಂದಲೂ ಈ ಭೇದವನ್ನು ತ್ಯಜಿಸಿದ್ದರು ಮತ್ತು ಆಫ್ರಿಕೆಯಲ್ಲಿ ತಮ್ಮ ಮನೆಯಲ್ಲಾಗಲಿ ಸಂಸ್ಥೆಯಲ್ಲಾಗಲಿ ಅದಕ್ಕೆ ಎಳ್ಳಷ್ಟು ಅವಕಾಶ ಕೊಟ್ಟಿದ್ದಿಲ್ಲ. ಆದರೆ ಈ ಭೇದವನ್ನು ಅಳಿಸುವದರಲ್ಲಿ ಅವರು ಹುಸುಹುಸುವಾಗಿ ಹೆಚ್ಚುಹೆಚ್ಚು ಒತ್ತಾಯ ಮಾಡುತ್ತ ಹೋದರು.

೧೯೨೧ರಲ್ಲಿಯೆ ಗಾಂಧೀಜಿ ಹೀಗೆ ಹೇಳಿದ್ದರು: “ಒಂದು ವರ್ಣದಲ್ಲಿ ಹುಟ್ಟಿದವನು ಇನ್ನೊಂದು ವರ್ಣದವನೊಡನೆ ಊಟ-ಉಪಚಾರ, ಹೆಣ್ಣು-ಗಂಡಿನ ವ್ಯವಹಾರಗಳನ್ನು ಮಾಡಿದಾಕ್ಷಣ ಅವನಿಗೆ ಅದರಿಂದ ದೊರೆಕ ಅಂತಕ್ಕು ನಷ್ಟವಾಗಿ ಹೋಗುವದೆಂದು ನಾ ನೊಪ್ಪುವದಿಲ್ಲ. ವರ್ಣವ್ಯವಸ್ಥೆಯಿಂದ ಮನುಷ್ಯನ ವೃತ್ತಿ ನಿರ್ಧರಿಸಲ್ಪಟ್ಟಿತು ಹೊರತು, ಅದು ಅವನೇ ದೂಷಿತ ವ್ಯವಹಾರಕ್ಕೊಂದು ಮಿತಿಯನ್ನೂ ಹಾಕುವದಿಲ್ಲ, ನಿಯಂತ್ರಣವನ್ನೂ ಹೇರುವದಿಲ್ಲ.”

—ಯಂಗ್ ಇಂಡಿಯಾ, ೬—೧೦—೨೧

ಆದರೂ ಆ ಕಾಲದಲ್ಲಿ ಅವರು ಸಹಭೋಜನ ನಿಷೇಧವನ್ನು ತೊಡೆದು ಹಾಕುವ ವಿಷಯದಲ್ಲಿ ವಿಶೇಷ ಒತ್ತಾಯ ಮಾಡುತ್ತಿರಲಿಲ್ಲ. ಆ ಪದ್ಧತಿಗೆ ಮನ್ನಣೆಯನ್ನೆ ಕೊಟ್ಟಿದ್ದರು.

೧೯೩೨ರಲ್ಲಿ ಅವರು ಬರೆದುದು:

“ಬೇರೆ ಬೇರೆ ಜಾತಿಯವರು ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುವದಕ್ಕೂ ಹೆಣ್ಣು ಗಂಡಿನ ವ್ಯವಹಾರಕ್ಕೂ ಇರುವ ನಿಷೇಧಗಳು ಧರ್ಮದ ಅಂಗಗಳಲ್ಲ. ಹಿಂದೂ ಧರ್ಮದ ಅವನತಿ ಕಾಲದಲ್ಲಿ ಈ ರೂಢಿ ಅದರಲ್ಲಿ ಹೊಕ್ಕಿರಲು ಸಾಕು—

೧೦ ನೆಯ ಪುಟಕ್ಕೆ—

ಹಿಂದೀ ರಾಷ್ಟ್ರೀಯ ಮಜೂರ ಕಾಂಗ್ರೆಸ್ಸ್ ಅಧಿವೇಶನ

ಡಾ. ರಾಜೇಂದ್ರರಿಂದ ಉದ್ಘಾಟನೆ

ಗಾಂಧೀ ತತ್ವಗಳನ್ನನುಸರಿಸಿ ಕೂಲಿಕಾರರನ್ನು ಸಂಘಟಿಸುವದಕ್ಕೋಸ್ಕರ ಸ್ಥಾಪಿಸಲ್ಪಟ್ಟ ಹಿಂದೀ ರಾಷ್ಟ್ರೀಯ ಮಜೂರ ಕಾಂಗ್ರೆಸ್ಸು (ಇ. ಭಾ. ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸು) ಒಂದು ವರ್ಷದ ಕಾರ್ಯಕಲಾಪದ ನಂತರ ಮೊನ್ನೆ ತಾ. ೧೩—೧೪ ಕ್ಕೆ ಮುಂಬಯಿಯಲ್ಲಿ ತನ್ನ ಮೊದಲನೆ ಮಹಾ ಅಧಿವೇಶನದಲ್ಲಿ ಸೇರಿತು. ಪಂ. ಹರಿಹರನಾಥ ಶಾಸ್ತ್ರಿಯವರು ಅಧ್ಯಕ್ಷರಾಗಿದ್ದರು. ಡಾ. ರಾಜೇಂದ್ರ ಪ್ರಸಾದರು ಪರಿಷತ್ತನ್ನು ಉದ್ಘಾಟಿಸಿದರು. ಕೂಲಿಕಾರ ಹಿತಸಂರಕ್ಷಣೆಯ ಬಗ್ಗೆ ಹಲ ಗೊತ್ತುವಳಿಗಳಾದವು.

● ಡಾ. ರಾಜೇಂದ್ರರು ತಮ್ಮ ಉದ್ಘಾಟಕ ಭಾಷಣದಲ್ಲಿ ಶಾಂತ ಮತ್ತು ನ್ಯಾಯ ಮಾರ್ಗಗಳಿಂದ ಕೂಲಿಕಾರರು ಸಾಮಾಜಿಕ ಕ್ರಾಂತಿಯಲ್ಲಿ ಭಾಗವಹಿಸಬೇಕೆಂಬುದೇ ಹಿಂ. ರಾ. ಮಜದೂರ ಕಾಂಗ್ರೆಸ್ಸಿನ ಗುರಿಯೆಂದರು. ಕೂಲಿಕಾರರು ದೇಶಹಿತದೃಷ್ಟಿಯಿಂದ ಉತ್ಪಾದನೆಯನ್ನು ಹೆಚ್ಚಿಸುವ ಕಡೆ ಗಮನವೀಯಬೇಕೆಂದು ಅವರು ಕೇಳಿಕೊಂಡರು.

● ಗೃಹಮಂತ್ರಿ ಸರದಾರ ಪಟೇಲರು ಕಳಿಸಿದ ಸಂದೇಶದಲ್ಲಿ ದೇಶ ಮತ್ತು ಕೂಲಿಕಾರರ ನಿಃಸ್ವಾರ್ಥ ಸೇವೆಯಿಂದಲೇ ಮಜದೂರ ಕಾಂಗ್ರೆಸ್ಸು ಬೆಳೆಯ-ತಕ್ಕದೆಂದೂ ಅದು ಔದ್ಯೋಗಿಕ ಒಪ್ಪಂದವನ್ನು ಪಾಲಿಸುವದೆಂದೂ ಹೇಳಿದ್ದರು.

● ಅಧ್ಯಕ್ಷ ಹರಿಹರನಾಥ ಶಾಸ್ತ್ರಿಗಳು, ಕೂಲಿಕಾರರು ಸಂಕುಚಿತ ಮನೋವೃತ್ತಿಯನ್ನು ತ್ಯಜಿಸಬೇಕೆಂದರು. ಜೀವನದ ನೈತಿಕ ಮೌಲ್ಯವನ್ನರಿಯದೆ ಸರ್ವಾಂಗೀಣ ಉನ್ನತಿ ಅಸಾಧ್ಯ. ಕೂಲಿಕಾರರ ಸಂಕಷ್ಟಗಳನ್ನು ನಿವೇದಿಸುತ್ತ ತುಟ್ಟಿ ಭತ್ತೆ ಮತ್ತು ಕೆಳ್ದರ್ಜೆಯ ವೇತನ ಇವು ಏರುತ್ತಿರುವ ಜೀವನ ವೆಚ್ಚಕ್ಕೆ ಸಾಲದಾಗಿದೆಯೆಂದೂ ನಿರುದ್ಯೋಗವೂ ಬೆಳೆಯುತಿದೆಯೆಂದೂ ಹೇಳಿ, ಕೂಲಿಕಾರರಲ್ಲಿ ಹಬ್ಬುತ್ತಿರುವ ಅಸಂತೋಷವನ್ನು ಹೋಗಲಾಡಿಸಲು ಸರಕಾರಗಳು ಒಡೆಯ—ಕೂಲಿಕಾರ ಸಂಬಂಧವನ್ನು ಕ್ರಮಪಡಿಸುವ ಕಾಯದೆಗಳನ್ನು ತರಬೇಕೆಂದು ಸೂಚಿಸಿದರು. ಈಗ ಔದ್ಯೋಗಿಕ ನ್ಯಾಯಾಲಯಗಳು ಕೊಟ್ಟ ತೀರ್ಪುಗಳನ್ನು ಕೂಡ ಅಷ್ಟು ಮನ್ನಿಸದಿರುವಷ್ಟು ಎಷ್ಟೋ ಒಡೆಯರು ಉದ್ಧಟತನ ತೋರುತ್ತಿದ್ದಾರೆ ಆದ ಕೂಲಿಕಾರರು ತಮ್ಮ ಕರ್ತವ್ಯವನ್ನು ಪಾಲಿಸಬೇಕು. ಅವರು ಉತ್ಪಾದನೆಯನ್ನು ಹೆಚ್ಚಿಸಬೇಕು. ಉತ್ಪಾದನೆ ಹೆಚ್ಚಿದ್ದರೆ ಎಲ್ಲ ಹಣ ದೊರೆತರೂ ಜೀವನದ ಮಟ್ಟ ಸುಧಾರಿಸಲಾರದು ಆಶಕ್ಯವೆಂದರವರು. ಅವರು ಕಮ್ಯುನಿಸ್ಟರ ಧ್ವಂಸದ್ರೋಹವನ್ನು ಟೀಕಿಸಿದರು.

● ಮಜದೂರ ಕಾಂಗ್ರೆಸ್ಸಿನ ಹಿಂದಿನ ವರ್ಷದ ಅಧ್ಯಕ್ಷ ಡಾ. ಸುರೇಶಚಂದ್ರ ಬ್ಯಾನರ್ಜಿಯವರು ಸಾಮ್ಯವಾದಕ್ಕೆ ಎರಡು ಹಾದಿಯಿರುವ: ಒಂದು ಗಾಂಧೀಜಿಯ ಸತ್ಯ ಅಹಿಂಸಾ ಮಾರ್ಗ, ಇನ್ನೊಂದು ಮಾರ್ಕ್ಸ್‌ನ ಹಿಂಸೆ ರಕ್ತಪಾತದ ಮಾರ್ಗ. ಇದರಲ್ಲಿ ಗಾಂಧೀ ಮಾರ್ಗವೇ ಮಜದೂರ ಕಾಂಗ್ರೆಸ್ಸಿನ ಕೈದೀವಿಗೆ.

ಶ್ರೀ ಶಂಕರರಾವ ದೇವ, ಆಬಿದಲ್ಲಿ ಜಾಫರ ಖಾಯಿ ಇವರೂ ಮಾತಾಡಿದರು.

● ಮುಂಬಯಿ ಕೂಲಿಕಾರ ಮಂತ್ರಿ ಗುಲಝಾರಿಲಾಲ ನಂದಾರು ಮಜದೂರ ಕಾಂಗ್ರೆಸ್ಸೇ ಹಿಂದೀ ಕೂಲಿಕಾರರನ್ನು ಸಾಮಾಜಿಕ ಬಂಧನಗಳಿಂದ ವಿಮೋಚನೆ ಮಾಡಬಲ್ಲದೆಂದರು.

● ಸ್ವೀಕೃತವಾದ ಗೊತ್ತುವಳಿಗಳಲ್ಲಿ, ಬಂಡವಲಗಾರರು ತಮಗೆ ಶೇ ೩ಕ್ಕಿಂತ ಹೆಚ್ಚು ಲಾಭ ಮಾಡಿಕೊಳ್ಳಬಾರದು, ದೊಡ್ಡ ಊರುಗಳಲ್ಲಿ ಪ್ರತಿ ಕೂಲಿಕಾರ ಕುಟುಂಬಕ್ಕೆ ಕನಿಷ್ಠ ೧೦೦ ರೂ. ವೇತನ ಸಿಗಬೇಕು, ಸರಕಾರ ಮತ್ತು ನೌಕರರ ನಡುವಣ ವಿವಾದಗಳನ್ನು ಬಗೆಹರಿಸಲು ಸರಕಾರದವರು ಶಾಶ್ವತ ಔದ್ಯೋಗಿಕ ನ್ಯಾಯಾಲಯಗಳನ್ನು ತೆರೆಯಬೇಕು, ಸರಕಾರದ ೩ ನೇ ಮತ್ತು ೪ ನೆ ವರ್ಗದ ನೌಕರರ ಬಗ್ಗೆ ಮಾಡಲ್ಪಟ್ಟ ಶಿಫಾರಸುಗಳನ್ನು ತಿದ್ದಬೇಕು ಎಂಬಿವು ಮುಖ್ಯವಾದವು. ಔದ್ಯೋಗಿಕ ಒಪ್ಪಂದದ ಬಗ್ಗೆಯೂ ಒಂದು ಗೊತ್ತುವಳಿ ಪಾಸ ಮಾಡಲ್ಪಟ್ಟಿತು.

ಮೈಸೂರು ಸರಕಾರದವರು ಪತ್ರಗಳ ಸಾರಿಗೆಯ ಮೇಲೆ ಹಾಕಿದ ನಿರ್ಬಂಧವನ್ನು ಸದ್ಯಕ್ಕೆ ಹಿಂತೆಗೆದುಕೊಂಡು ಅವುಗಳ ನಿರ್ಯಾತಕ್ಕೆ ಅಪ್ಪಣೆ ಕೊಟ್ಟಿದ್ದಾರೆ.

ಪ್ರಶ್ನೋತ್ತರ

(೯ ನೇ ಪುಟದಿಂದ)

ಎರಡೂ ರೂಢಿಗಳಿಂದ ಹಿಂದೂ ಸಮಾಜ ದುರ್ಬಲವಾಗಿದೆ ಆದರೆ ಅವುಗಳ ಮೇಲೆ ಏನಾದರೂ ಒತ್ತಡ ಕೊಡಲು ನಾವಿಂದು ಪ್ರಯತ್ನಿಸಿದೊಡನೆ ಇಂದಿನ ಜನತೆಯ ಲಕ್ಷ್ಯ ಸದ್ಯದ ಮಹತ್ವ ಪೂರ್ಣ ವಿಚಾರಗಳಿಂದ ತೊಲಗಿಹೋಗುವದು. ಆದುದರಿಂದ ಇಂದು ಸ್ಪೃಶ್ಯಾಸ್ಪೃಶ್ಯ, ಹಿಂದೂ-ಅಹಿಂದೂ ಜನರು ಒಂದಾಗಿ ಭೋಜನ ಮಾಡುವ ಸಹಭೋಜನ ಕೂಟಗಳಲ್ಲಿ ಸ್ವೇಚ್ಛೆಯಿಂದ ಭಾಗ ವಹಿಸುತಿದ್ದರೆ ಅದನ್ನು ನಾನು ಸಲ್ಲಕ್ಷಣವೆಂದು ಸ್ವಾಗತಿಸುತ್ತೇನೆ.”

೪—೧೧—೩೨ ರ “ನನ್ನ ಹೃದಯ ವ್ಯಥೆ”ಯೆಂಬ ಹೇಳಿಕೆಯಿಂದ.

ಆದರೂ ಈ ರೂಢಿಯನ್ನು ತೊಡೆದು ಹಾಕಲು ದೊಡ್ಡ ಪ್ರಮಾಣದ ಚಳವಳಿಯನ್ನು ಹೂಡ-ವಂತೆ ಗಾಂಧೀಜಿಯವರು ಒತ್ತಾಯಮಾಡಲಿಲ್ಲ.

೧೯೪೬ ರಲ್ಲಿ ಅವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತಾರೆ:

“ಅಸ್ಪೃಶ್ಯತೆಯನ್ನು ಕಿತ್ತೊಗೆಯಬೇಕೆಂದು ಹೇಳುವದರಲ್ಲಿ ಸಹಭೋಜನ ಮತ್ತು ಹೆಣ್ಣು ಗಂಡಿನ ವ್ಯವಹಾರ ಸೇರಿಲ್ಲವೆಂದು ನಾನು ಹೇಳುತಿದ್ದಾಗ ನನ್ನ ದೃಷ್ಟಿಯಲ್ಲಿ ಒಟ್ಟು ಹಿಂದೂ ಸಮಾಜವಿತ್ತೇ ಹೊರತು ಕಾಂಗ್ರೆಸ್ ಕಾರ್ಯಕರ್ತರಾಗಲಿ ಕಾಂಗ್ರೆಸ್ಸಿಗರಾಗಲಿ ಇದ್ದಿಲ್ಲ. ಕಾಂಗ್ರೆಸ್ಸಿಗರಂತೂ ತಮ್ಮ ಜೀವನದ ಎಲ್ಲ ಅಂಗಗಳಿಂದಲೂ ಅಸ್ಪೃಶ್ಯತೆಯನ್ನು ಕಿತ್ತೊಗೆದೇ ತೀರಬೇಕು.”

—ಹರಿಜನ ೧—೨—೪೬

೧೯೪೬ ರಲ್ಲಿ ಒಂದು ಪ್ರಶ್ನೋತ್ತರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರು ಹೀಗೆನ್ನುತ್ತಾರೆ:

ಪ್ರಶ್ನೆ:- ಕಾಂಗ್ರೆಸ್ಸಿನ ಅಸ್ಪೃಶ್ಯತಾ ನಿವಾರಣ ಕಾರ್ಯಕ್ರಮದಲ್ಲಿ ಸಹಪಂಕ್ತಿ ಭೋಜನವೂ ಹೆಣ್ಣುಗಂಡಿನ ವ್ಯವಹಾರ ಮೂಲಕ ಒಂದಾಗುವದೂ ಸೇರಿರುವದೆ ?

ಉತ್ತರ:- ನನಗೆ ತಿಳಿದಮಟ್ಟಿಗೆ ಕಾಂಗ್ರೆಸ್ಸಿಗರ ಮನಸ್ಸಿನಲ್ಲಿ ಇಂದು ಹರಿಜನರೊಡನೆ ಕುಳಿತು ಊಟಮಾಡುವ ವಿಷಯದಲ್ಲಿ ಯಾವ ಆಕ್ಷೇಪವೂ ಉಳಿದಿಲ್ಲ. ಆದರೆ ನಾನು ನನ್ನ ಸ್ವಂತ ವಿಚಾರದಲ್ಲಿ, ಇಂದು ನಾವೆಲ್ಲರೂ ಹರಿಜನರಾದ ಹೊರತು ಅಸ್ಪೃಶ್ಯತೆಯ ಕಲಂಕರನ್ನು ಪುಟ್ಟ ಪೂರಾ ತೊಡೆದು ಹಾಕುವದು ಅಸಾಧ್ಯವೆಂದು ಹೇಳಿದ್ದೇನೆ ಆದುದರಿಂದ ಮದುವೆ ಮಾಡಿಕೊಳ್ಳಬಯಸುವ ಹುಡಗ-ಹುಡುಗಿಯವರಿಗೆ ನಾನು ಹೇಳುವದೇನಂದರೆ, ಯಾವ ವಿವಾಹದಲ್ಲಿ ಒಂದು ಪಕ್ಷ ಹರಿಜನ ಮತ್ತೊಂದು ಪಕ್ಷ ಸವರ್ಣ ಸಮಾಜಕ್ಕೆ ಸೇರಿರದಿಲ್ಲವೋ ಅಂಥವುಗಳನ್ನು ಸೇವಾಗ್ರಾಮ ಆಶ್ರಮದಲ್ಲಿ ನಡೆಯಗೊಡುವದು ಸಾಧ್ಯವಿಲ್ಲ. ಇದರಲ್ಲಿ ಅಂಥ ದೊಡ್ಡ ಅಡಚಣೆ ಯಾವದೂ ಇಲ್ಲವೆಂದು ನನಗೆ ಮನವರಿಕೆಯಾಗಿದೆ. ದೃಷ್ಟಿ ಪರಿವರ್ತನೆಯಾಗುವದೊಂದೇ ಬೇಕಾಗಿದೆ.

—ಹಿಂದುಸ್ಥಾನ ಸ್ಟ್ಯಾಂಡರ್ಡ
೫—೧—೪೬

ಈ ಪ್ರಕಾರ ಜನರು ಒಂದು ಹೆಜ್ಜೆ ಮುಂದೆ ಹೋಗಲು ಸಿದ್ಧತೆಯನ್ನು ತೋರಿದಾಗ ಇನ್ನೊಂದು ಹೆಜ್ಜೆ ಮುಂದಿಡುವಂತೆ ಗಾಂಧೀಜಿ ಅವರಿಗೆ ಬೋಧಿಸುತ್ತಿದ್ದರು.

ಈಗ ಮಾನವ ಮಾತ್ರರ ಜಾತಿ ಒಂದೇ ಎಂದು ತಿಳಿದುಕೊಳ್ಳುವ ಕಾಲ ಬಂದಿದೆ. ಜಾತಿ ಗೀತಿಯ ಬಂಧನದ ಕಾರಣದಿಂದ ಇಂಥವನ ಕೈಯ ಅನ್ನ ನೀರು ತಿನ್ನಬಾರದು. ಇಂಥವನದನ್ನು ಕೂಡದು ಎಂಬ ಹಿಂದೂ ಮನಸ್ಸಿನಲ್ಲಿ ನಟ್ಟು ಹೋಗಿರುವ ಸಂಸ್ಕಾರವನ್ನು ಕಿತ್ತು ಹಾಕುವದರಲ್ಲೇ ನಮ್ಮ ಕಲ್ಯಾಣವಿದೆ.

(ಗುಜರಾತಿಯಿಂದ) ಕಿ. ಘ. ಮಶ್ರೂವಾಲಾ

ಹೈದರಾಬಾದ ಪ್ರಮುಖ ಕಮ್ಯುನಿಷ್ಟರಾದ ಮಖದೂಮ ಮೋಹಿಯುದ್ದೀನ, ವ ಹಾದೇವಯ್ಯ, ಇರೇಡಿ ನರಸಿಂಹ, ಸಂಜೀವರೆಡ್ಡಿ ಮೊದಲಾದವರ ಮೇಲಿನ ವಾರಂಟುಗಳನ್ನು ಹಿಂತೆಗೆದುಕೊಂಡಿರುವದಾಗಿ ಹೈದರಾಬಾದ ಸರಕಾರದವರು ತಾ ೧೬ ರಂದು ಒಂದು ಪತ್ರಿಕಾ ಪ್ರಕಟನೆ ಹೊರಡಿಸಿ ಸಾರಿರುವರು. ಈ ರೀತಿ ೧೮ ಕಮ್ಯುನಿಸ್ಟ್ ಪೋಲಿಸ ವಾರಂಟು ಹಿಂತೆಗೆದು ಕೊಂಡಂತಾಗಿದೆ.

ಮಾಧ್ಯಮಿಕ ಶಿಕ್ಷಕರ ಸಂಬಳದ ಪ್ರಮಾಣ

ಮುಂಬೈ ಸರಕಾರದ ನಿರ್ಣಯ

ತರಬೇತಿ ಹೊಂದಿದ ಪದವೀಧರ ಶಿಕ್ಷಕರ ಸಂಬಳದ ಪ್ರಮಾಣವು ರೂ. ೮೦ ರಿಂದ ೨೦೦ ರೂಪಾಯಿಗಳಿರಬೇಕು ಶಿಕ್ಷಕರಿಗೆ ಕೊಡುವ ವಾರ್ಷಿಕ ಹೆಚ್ಚಳದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಎಸ್. ಟಿ ಸಿ. ಇಲ್ಲವೆ ಟಿ. ಡಿ. ಆದ ಪದವೀಧರ ಶಿಕ್ಷಕರಿಗೆ ಪ್ರತಿ ವರ್ಷ ಐದು ರೂ. ಗಳಿಗೆ ಕಡಿಮೆ ಯಿಲ್ಲದಂತೆ ಹೆಚ್ಚಳ ಕೊಡಬೇಕು. ಮ್ಯಾಟ್ರಿಕ್ ಪಾಸಾದವರಿಗೆ ೫೬ ರಿಂದ ೧೨೦ ರೂ. ಗಳ ಸಂಬಳ ಪ್ರಮಾಣವಿದೆ. ಇಂಟರ ಪರೀಕ್ಷೆ ಪಾಸಾದವರಿಗೆ ಪ್ರತ್ಯೇಕ ಸಂಬಳ ಪ್ರಮಾಣವಿಲ್ಲ.

ಬಿ. ಎ ಮತ್ತು ಎಂ. ಎ. ಪರೀಕ್ಷೆಗಳಲ್ಲಿ ಪ್ರಥಮ ಇಲ್ಲವೆ ದ್ವಿತೀಯ ಶ್ರೇಣಿಯನ್ನು ಪಡೆದವರಿಗೆ ಪಗಾರದಲ್ಲಿ ಮುಂಗಡ ಹೆಚ್ಚಳವನ್ನು ಕೊಡಲಾಗುವದು. ಮತ್ತು ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯನ್ನು ಪಡೆದಿದ್ದರೆ ಮೂರ ವರ್ಷದ ಬಡತಿಯನ್ನು ಒಮ್ಮೆಲೆ ಕೊಡಲಾಗುವದು.

ತುಟ್ಟಿ ಭತ್ತೆ ಮುಂತಾದ ಇತರ ಸೌಕರ್ಯಗಳು ಸರಕಾರೀ ನಿಯಮಗಳಂತೆ ದೊರೆಯುವವು.

ಮಾಧ್ಯಮಿಕ ಶಾಲೆಗಳಿಗೆ ಧನಸಹಾಯ

ಸದ್ಯದ ಆರ್ಥಿಕ ವರ್ಷದಲ್ಲಿ ಸರಕಾರೇತರ ಮಾಧ್ಯಮಿಕ ಶಾಲೆಗಳಿಗೆ ಕೆಳಗಿನಂತೆ ಧನಸಹಾಯವನ್ನು ಕೊಡಲಾಗುವದು. ಗ್ರಾಮಾಂತರ ಪ್ರದೇಶಗಳಲ್ಲಿಯ ಶಾಲೆಗಳಿಗೆ ೧೦೦ ಕ್ಕೆ ೩೩½ ರಂತೆ ಇತರ ಶಾಲೆಗಳಿಗೆ ೧೦೦ ಕ್ಕೆ ೩೦ ರಂತೆ ಕೊಡಲಾಗುವದು.

ಹಲವು ಸಮಯದ ವರೆಗೆ ಸರಕಾರವು ಮಾಧ್ಯಮಿಕ ಶಾಲೆಗಳ ಬಗ್ಗೆ ಯೋಗ್ಯ ಪರಿಮಿತಿಯಲ್ಲಿಯೇ ವೆಚ್ಚ ಮಾಡುವದೆಂದು ಒತ್ತಿ ಹೇಳುತ್ತದೆ.

ಸರಕಾರವು ಸಮೀಪದಲ್ಲಿಯೇ ವೇತನ ಪ್ರಮಾಣ ಸಂಬಂಧದಲ್ಲಿ ೭೦ ಲಕ್ಷ ರೂ. ಮತ್ತು ತುಟ್ಟಿ ಭತೆ ಸಂಬಂಧದಲ್ಲಿ ೧೬ ಲಕ್ಷ ರೂ. ಧನಸಹಾಯವನ್ನು ಕೊಡುವದು ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಾದಂತೆ ಮತ್ತು ಗೊತ್ತುಪಡಿಸಿದ ಪ್ರಮಾಣದಂತೆ ವೇತನವು ಹೆಚ್ಚಾದಂತೆ ಹಲವು ವರ್ಷಗಳಲ್ಲಿ ಈ ಸಂಖ್ಯೆಯನ್ನು ಇಮ್ಮಡಿಸಲಾಗುವದು

ಉಳಿದ ವೆಚ್ಚವನ್ನು ಕಾಣಿಕೆಯ ರೂಪದಲ್ಲಾಗಲೀ, ಶಾಲೆಯ ಫೀ ಹೆಚ್ಚಿಸಿ ಆಗಲಿ ಸಾರ್ವಜನಿಕರೇ ವಹಿಸಬೇಕು. ಸರಕಾರವು ಫೀಯ ಕನಿಷ್ಟ ಪ್ರಮಾಣವನ್ನು ಗೊತ್ತುಪಡಿಸಿದೆ. ಮುಂಬಯಿ, ಅಹಮದಾಬಾದ, ಪುಣೆ, ಸುರತ ಹೊರತಾಗಿ ಉಳಿದ ಪ್ರದೇಶದಲ್ಲಿ ಫೀಯ ಕನಿಷ್ಟ ದರವು ಕಿರಿಯ ವರ್ಗ ರೂ. ೩ ಹಿರಿಯ ವರ್ಗ ರೂ. ೫ ಇರತಕ್ಕದ್ದು.

ಹುಬ್ಬಳ್ಳಿಯ ಎಂ.ಡ್ರ್ಯಾಬ ಕೂಲಿಕಾರರನ್ನು ಸಂಘಟಿಸಲು ಮೊನ್ನೆ ತಾ ೧೬ ಕ್ಕೆ ಒಂದು ಸಂಘ ಸ್ಥಾಪಿಸಲ್ಪಟ್ಟಿತು. ಅದರ ಪ್ರಾಥಮಿಕಾಧಿವೇಶನಕ್ಕೆ ಘಟನಾ ಸಮಿತಿಯ ಸದಸ್ಯ ಶ್ರೀ ಬಿ ಎಸ್ ಮುನವಳ್ಳಿಯವರು ಅಧ್ಯಕ್ಷರಾಗಿದ್ದರು. ಮುಂಬಯಿ ಉಪಮಂತ್ರಿ ಶ್ರೀ ಕೆ. ಎಫ್ ಪಾಟೀಲರು ಉದ್ಘಾಟಕರಾಗಿದ್ದರು.

ಕೂಲಿಕಾರ ರಂಗ

(೧೨ನೇ ಪುಟದಿಂದ)

ಗಳಲ್ಲಿ ಯಾವುದು ಹೆಚ್ಚು ಪ್ರಾತಿನಿಧಿಕ ಸ್ವರೂಪದ್ದೆಂದು ವಿಚಾರಣೆ ನಡೆಸಲು ಸರಕಾರ ನೇಮಿಸಿದ ಸಮಿತಿ ಪೂರ್ಣ ರಾಷ್ಟ್ರೀಯ ಸಂಘಕ್ಕೇ ಪಾಲೆ ಹಾಕುವದೆಂದು ನಂಬಲಾಗಿದೆ. ಮುಂದಿನ ತಿಂಗಳು ಸಾನ್ ಫ್ರಾನ್ಸಿಸ್ಕೋದಲ್ಲಿ ಜರುಗಲಿರುವ ಅಂತರ್ ರಾಷ್ಟ್ರೀಯ ಕೂಲಿಕಾರ ಪರಿಷತ್ತಿನಲ್ಲಿ ಹಿಂದೀ ಕೂಲಿಕಾರರ ಪರವಾಗಿ ಯಾವ ಸಂಘದ ಪ್ರತಿನಿಧಿಗಳನ್ನು ಕಳಿಸಬೇಕೆಂದು ಬೇಗನೆ ನಿರ್ಣಯವಾಗಬೇಕಾಗಿದೆ. ರಾಷ್ಟ್ರೀಯ ಸಂಘವೇ ಹೆಚ್ಚು ಪ್ರಾತಿನಿಧಿಕವಾಗಿದೆಯೆಂದು ಸಮಿತಿ ತೀರ್ಮಾನಿಸಿದರೆ ಆ ಸಂಘದ ಪರವಾಗಿ ಯುಕ್ತಪ್ರಾಂತ ಕೂಲಿಕಾರ ಮಂತ್ರಿ ಬಾಬು ಸಂಪೂರ್ಣಾನಂದರು ಹಿಂದೀ ಶಿಷ್ಟಮಂಡಲದ ಮುಂದಾಳಾಗಿ ಹೋಗಬಹುದು.

\+ + +

ಕೂಲಿಕಾರ ಸುದ್ದಿಗಳು

ಎಲ್ಲ ಡೆಗಳಲ್ಲಿಯಂತೆ ಕರ್ನಾಟಕದಲ್ಲಿಯೂ ಮೋಟಾರ ಒಡೆಯರು ಅನೇಕ ವರ್ಷಗಳಿಂದ ಸುಸಂಘಟಿತರಾಗಿದ್ದರೂ ಮೋಟಾರ ಕೆಲಸಗಾರರು ಮಾತ್ರ ಈ ವರೆಗೆ ಸಂಘಟನೆಯಿಲ್ಲದೆ, ಬಾಯಿಲ್ಲದವರಾಗಿದ್ದರು. ಮೊನ್ನೆ ಧಾರವಾಡದಲ್ಲಿ (ತಾ ೧೦) ಕೂಡಿದ ಧಾರವಾಡ ಜಿಲ್ಲಾ ಮೋಟಾರ ಕೆಲಸಗಾರರ ಮೊದಲನೆ ಸಮ್ಮೇಲನದ ಪ್ರಗತಿಯನ್ನನುಸರಿಸಿ ಹೋದರೆ ಕೂಲಿಕಾರರ ಈ ಕೊರತೆ ಬಹಳ ಮಟ್ಟಿಗೆ ನೀಗಬಹುದು. ಸಮ್ಮೇಲನದ ಚಾಲ್ತಾ ಸಮಾಜವಾದಿ ಪಕ್ಷದವರ ಕೈಯಲ್ಲಿತ್ತು. ಧಾರವಾಡ ಸಮಾಜವಾದಿಗಳ ಕಾರ್ಯದರ್ಶಿ ವಸಂತ ದೇಶಪಾಂಡೆಯವರು ಅಧ್ಯಕ್ಷರಾಗಿದ್ದರು. ಮಹಾರಾಷ್ಟ್ರ ಮೋಟರ ಕೂಲಿಕಾರ ಸಂಘದ ನಾಯಕರಾದ ಮೋಹನ ಧಾರಿಯಾರು ಉದ್ಘಾಟಕರಾಗಿದ್ದರು. ಉದ್ಘಾಟಕರು ಕೂಲಿಕಾರರ ಎಲ್ಲ ತೊಂದರೆಗಳಿಗೆ ಬಂಡವಲಶಾಹಿ ಪದ್ಧತಿಯನ್ನು ದೂರಿ ಮೋಟಾರ ಸಾರಿಗೆಯ ರಾಷ್ಟ್ರೀಕರಣವಾದರೇನೇ ಕೂಲಿಕಾರರ ಸ್ಥಾನ ಭದ್ರವಾಗುವದೆಂದರು. ಸಾರಿಗೆಯನ್ನು ಸರಕಾರದವರು ವಶಪಡಿಸಿಕೊಳ್ಳಬೇಕೆಂಬಿವೇ ಮೊದಲಾದ ಗೊತ್ತುವಳಿಗಳಾದವು.

ಪ್ರಾಂತೀಕರಣದ ಮುನ್ನಡೆ

ಸಂಧಾನ ಸಮಿತಿಯ ಪ್ರಯಾಣ

ಪ್ರಾಂತೀಕರಣದ ಸಂಬಂಧದಲ್ಲಿ ಮೈಸೂರು ಸಂಸ್ಥಾನದೊಡನೆ ವಿಚಾರವಿನಿಮಯ ಮಾಡಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಅಧ್ಯಕ್ಷರು ಸಂಧಾನ ಸಮಿತಿಯನ್ನು ನೇಮಿಸಿರುವರಷ್ಟೇ? ಆ ಸಮಿತಿಯ ಸದಸ್ಯರಾದ ಶ್ರೀ ಎಂ. ಪಿ. ಪಾಟೀಲ ರಂಗನಾಥ ದಿವಾಕರ, ಡಾ ವಿ ಕೆ ಆರ್ ವಿ. ರಾವ ಜಿನರಾಜ ಹೆಗ್ಗಡೆ ವೀರನಗೌಡರು ಪಾಟೀಲ, ಅಂದಾನೆಪ್ಪ ದೊಡ್ಡಮೇಟಿಯವರು ಶುಕ್ರವಾರ ೨೧ ನೇ ತಾರೀಕಿನ ಮೇಲಗಾಡಿಯಿಂದ ಬೆಂಗಳೂರಿಗೆ ಪ್ರಯಾಣ ಬೆಳಿಸಿದರು. ಸಂಸ್ಥಾನ ಪ್ರಮುಖರೊಡನೆ ವಿಚಾರವಾದ ನಂತರ ಕೆಲ ಸದಸ್ಯರು ಸಂಸ್ಥಾನದ ಗ್ರಾಮಾಂತರಗಳಲ್ಲಿ ಸಂಚರಿಸಬೇಕೆಂದಿರುವರೆಂದು ತಿಳಿಯುತ್ತದೆ.

M. G. Regd. No 1888 “ಚಿರಾಯು” Estd. 1946

ಶ್ರೀ ಮಾರುತಿ ಕಾಂಪಿಟಿಷನ್ ನಂ. ೩೪

588 ವಿಶ್ವೇಶ್ವರಪುರಂ, ಬೆಂಗಳೂರ ನಗರ

ಗೆಲ್ಲಿರಿ 1000 ರೂಪಾಯಿ

ಸರಿ ಉತ್ತರಕ್ಕೆ 650 ರೂ. ೧,೨ ಮತ್ತು ೩ ತಪ್ಪಿಗೆ 300 ರೂ. ಮೊದಲು ತಲುಪುವ ಸರಿ ಉತ್ತರಕ್ಕೆ 50 ರೂ. 29-5-48ನೇ ದಿನವೂ ಸಹ ಉತ್ತರಗಳನ್ನು ಪೋಸ್ಟ್ ಮಾಡಬಹುದು ಉತ್ತರ 31-5-48

೧ನ	ಡು		■	೨	ರು	ಕೆ
	■	■	೩	1000	■	■
■	೪	■	ದಿ	■	■	೫
೬ನಿ			ಸು	■	■	ರ
■	ವಾ	ರೂ	ಪಾ	ಯಿ	೭	ಟು
೮	ಗಿ	ಗೆ	೯ಮೂ		■	ವ್ರ
■	■	ಲ್ಲಿರಿ		■	೧೦	ದು

ಆಧಾರಗಳು

[ಯ ಬಲಕ್ಕೆ]—೧ ಮಾಡಬಾರದ ಕೆಲಸಗಳನ್ನು ಮಾಡಿದರೆ...... ಉಂಟಾಗಬಹುದು ೩ ಪತ್ರಿಯಲ್ಲಿ......ಹಾಕ. ವೃದ್ಧಾಲಯರ ವಾಡಿಕೆ ೬ ಅಗಾಧವಾದ ಕಾರ್ಯಗಳನ್ನು......ವ್ರದ ಚಾತುರ್ಯವಿರಬೇಕು. ೭ ಪಕ್ಕಟಿ ಸಿಕ್ಕಿದರೆ...... ವೃಶಕ್ಕೆ ಕೇಳದು ಅರ್ಪರಾಗಿ ಬರಬಹುದಲ್ಲವೆ? ೮......ಯಾದಗೇನು ಅವನೂ ಮನುಷ್ಯನೇ ಅಲ್ಲವೇ? ೯ ಪಡ್ಡ, ಹೆಡ್ಡ. ೧೦ ಒಂದು ಸಂಖ್ಯೆ.

[ಮೇಲ ಕೆಳಕ್ಕೆ]— ೧ ಬೆತ್ತಲೆ, ಬರಿಮೈ. ೩ ಬೇರೆ ಮಾರ್ಗ ತಿಳಿಯದು. ೪ ಮಾಡಿದ ಕೆಲಸವನ್ನು...... ಕೊನೆಗಾಣಿಸುವುದು ಹಲವರ ಅಭ್ಯಾಸ ೫ ಶತ್ರುಯೋಧರಾದಿ........ ಒಳ್ಳೆಯ ಪಲ್ಲ ೯ ಮಾತನಾಡ ಬಾರದವ, ಬಾಯಿಲ್ಲದವ

ನಿಬಂಧನೆಗಳು:-ಪ್ರವೇಶಧನ ಉತ್ತರ ತುಂಬಿದ ಚೌಕಕ್ಕೆ ೧ ರೂ. ಮೇಲ್ಪಟ್ಟ ಪ್ರತಿ ಚೌಕಕ್ಕೆ ೮ ಆಣೆಯಂತೆ ಎಷ್ಟು ಬೇಕಾದರೂ ಬಿಳಿ ಕಾಗದದಲ್ಲಿ ಬರೆದು ಕಳಿಸಬಹುದು ಹಣ M.O. ಅಥವಾ ಕ್ರಾಸ್ ಮಾಡಿದ PO ಮೂಲಕ ರವಾನಿಸಬೇಕು ವಿಶ್ವರೂಪ್ಪ ಸಂಘಟಕರು.

ರೂಪರಂಗ

ಇಂದಿನ ಚಲಚ್ಚಿತ್ರಗಳು

ಲೇ:— ಶ್ರೀ ಮಾಧವ ಬಿಂ ದೇಶಪಾಂಡೆ

ಸಾಹಿತ್ಯವು ಸಮಾಜದರ್ಪಣ. ಸಮಾಜಸೇವೆಗೆ ಸಾಹಿತ್ಯವು ಒಂದು ಸಾಧನ. ಸಮಾಜದ ಪ್ರತಿಬಿಂಬವೇ ಸಾಹಿತ್ಯ.

"ಸಾಹಿತ್ಯದ ವಿಷಯವು ಮಾನವ ಹೃದಯ ಮತ್ತು ಮಾನವ ಚರಿತ್ರ" ಎಂದು ವಿಶ್ವಕವಿ ರವೀಂದ್ರರು ಹೇಳಿದ್ದಾರೆ ಮತ್ತು "Literature is the thought of thinking souls" ಎಂದು ಆಂಗ್ಲ ಕವಿಯೊಬ್ಬ ಸಾರಿದ್ದಾನೆ. ಜೀವನದ ಸಂಪರ್ಕವನ್ನು ಹೆಚ್ಚಿಸಿ ಅದರ ಅನುಭವವನ್ನು ನಿರೂಪಿಸಿ ನಮ್ಮ ಅರಿವು ಜಾಗೃತಿಗಳನ್ನು ಹೆಚ್ಚಿಸಿ ಜನತೆಗೆ ಒಂದು ಬಗೆಯ ಹೊಸ ದೃಷ್ಟಿಯನ್ನೀಯುವದೇ ಸಾಹಿತ್ಯದ ಕಾರ್ಯ. ಸಾಹಿತ್ಯವು ಜೀವನವನ್ನು ಪ್ರತಿಬಿಂಬಿಸುತ್ತ ಉತ್ತಮ ಜೀವನದ ನಿದರ್ಶನವನ್ನು ಸಮಾಜಕ್ಕೀಯುತ್ತಿದೆ. ಆದುದರಿಂದ ಸಾಹಿತ್ಯವು ಸಮಾಜದ ದರ್ಪಣವಾಗಿದೆ.

ಚಲಚ್ಚಿತ್ರಗಳು ಸಾಹಿತ್ಯದ ಅಂಗ

ಕಥೆ ಕಾದಂಬರಿ-ನಾಟಕ ಇವುಗಳಿಂದ ಸಮಾಜದಲ್ಲಿ ಜಾಗೃತಿಯುಂಟಾಗುವಂತೆ ಸಾಹಿತ್ಯವು ಕಾರ್ಯ ಮಾಡುತ್ತಿದೆ. ಅದರಂತೆ ಈಗಿನ ಮುಂದೋಡುವ ಜಗತ್ತಿನಲ್ಲಿ ಚಲನ ಚಿತ್ರಗಳಿಂದಲೂ ಜನಸೇವೆ ಜನತಾ ಕ್ರಾಂತಿ ಯಾಗಹತ್ತಿದೆ. ಚಿತ್ರಪಟಗಳಷ್ಟು ಪ್ರಭಾವಶಾಲಿಯಾದ ಪ್ರಚಾರವು ಬೇರೊಂದಿಲ್ಲ. ಸಾಹಿತ್ಯದಿಂದ ಸಂಸ್ಕೃತಿಯ ಉತ್ಕರ್ಷೆಯಾಗುವಂತೆ ಆದರ್ಶ ಪರಿಪೂರ್ಣತೆಯ ಚಲಚ್ಚಿತ್ರಗಳಿಂದಲೂ ಸಂಸ್ಕೃತಿಯ ಪುಟ್ಟ ಏರುತ್ತದೆ. ನಾಡಿನ, ನುಡಿಯ, ಸಂಸ್ಕೃತಿಯ ಪ್ರತಿಯಾಗುತ್ತದೆ. ಒಳ್ಳೆಯ ಆದರ್ಶವುಳ್ಳ, ಕಲಾ ಪರಿಪೂರ್ಣತೆಯುಳ್ಳ ಚಿತ್ರಪಟವು ಸಮಾಜದ ಮುಂದೆ ಉದಾತ್ತವಾದ ಆದರ್ಶವನ್ನಿಟ್ಟು ಸಮಾಜದ ನೈತಿಕ ಏಳ್ಗೆಯನ್ನು ಸಾಧಿಸಬಲ್ಲುದು. ಉದಾತ್ತ ಸಾಹಿತ್ಯವು ಸಮಾಜದಲ್ಲಿ ನೀತಿ ಬೋಧಗಳನ್ನು ಕಾಂತಾ ಸಮ್ಮಿತಿಯಿಂದ ಹರಡಿ, ಸಮಾಜೋನ್ನತಿಯನ್ನು ಮಾಡುವಂತೆ ಚಲಚ್ಚಿತ್ರಗಳು ಸಮಾಜದ ಸಾಂಸ್ಕೃತಿಯ ಏಳ್ಗೆಯನ್ನು ಸಾಧಿಸುತ್ತವೆ.

ಇಂದಿನ ಚಲಚ್ಚಿತ್ರ

ಚಲಚ್ಚಿತ್ರ ಕಲೆಗೆ ಆರಂಭವಾದುದು ಸುಮಾರು ೫೨ ವರ್ಷಗಳ ಪೂರ್ವದಲ್ಲಿ ೧೮೯೬ ನೇ ಇಸ್ವಿಯಲ್ಲಿ ಅಮೇರಿಕೆಯಲ್ಲಿ ಆಯಿತು. ಮತ್ತು ಭರತಖಂಡದಲ್ಲಿ ಇದರ ಪ್ರಾರಂಭ ೧೯೧೨ ರಲ್ಲಿ ಆಯಿತು. ಇಲ್ಲಿಯ ವರೆಗೆ ಅದೆಷ್ಟೋ ಚಿತ್ರಪಟಗಳು ವಿವಿಧ ಭಾಷೆಗಳಲ್ಲಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ವಸ್ತುಗಳನ್ನು ಬಳಸಿಕೊಂಡು ನಿರ್ಮಿತವಾಗಿ ಪ್ರದರ್ಶಿಸಲ್ಪಟ್ಟವೆ. ಆದರೆ ಇವುಗಳಲ್ಲಿ ಎಲ್ಲ ದೃಷ್ಟಿಯಿಂದಲೂ ಯಶಸ್ವಿಯಾದವು ಮಾತ್ರ ತೀರ ವಿರಳವೆಂದೇ ಹೇಳುವದು ಶೋಚನೀಯ. ಮುಖ್ಯವಾಗಿ ಚಿತ್ರಪಟಗಳಲ್ಲಿ ಮನರಂಜನೆ ಮತ್ತು ಜ್ಞಾನ ಬೋಧನಗಳು ಸಮರಸವಾಗಿ ಹೊಂದಿಕೊಂಡಿರಬೇಕು. ಚಲಚ್ಚಿತ್ರಗಳು ಸಮಾಜಸೇವೆಯನ್ನು ಸಾಧಿಸಬಲ್ಲವೆಂದು ಮೇಲೆ ವಿವರಿಸಿದೆ ಆದರೆ ಕೇವಲ ಮನರಂಜನೆಯನ್ನೇ ಧ್ಯೇಯವಾಗಿಟ್ಟುಕೊಂಡು ಚಿತ್ರಗಳ ಕಥೆ ರಚಿಸಲ್ಪಟ್ಟರೆ ಅಂಥ ಚಿತ್ರಗಳಿಂದ ಸಮಾಜ ಸೇವೆಯಾಗದು.

ಸಾಮಾಜಿಕ ಚಿತ್ರಗಳು

ಈಗಿನ ಸಾಮಾಜಿಕ ಚಿತ್ರಪಟಗಳಲ್ಲಿ ಎಷ್ಟೋ ಚಿತ್ರಪಟಗಳ ಕಥಾವಸ್ತು ಒಂದೇ. ಆದರೆ ಚಿತ್ರಪಟಗಳ ಹೆಸರು ಮಾತ್ರ ಬೇರೆ ಬೇರೆ. ಇಂಥ ಚಿತ್ರಪಟಗಳಲ್ಲಿ ಕೇವಲ ಕೀಳು ಭಾವನೆಗಳನ್ನು ಉದ್ರೇಕಗೊಳಿಸುವ ಚಿತ್ರಪಟಗಳೇ ಹೆಚ್ಚಾಗಿ ಪ್ರದರ್ಶನಕ್ಕೆ ಬರಹತ್ತಿವೆ. ಒಂದೇ [illegible] ಕಥೆ- ಅಸ್ವಾಭಾವಿಕತೆ ಎಂಬುದು ಪ್ರೇಕ್ಷಕರಿಗೆ ಗೋಚರವಾಗದೇ ಇರುತ್ತಿವೆ. ಆದರೆ ಮಾನವನ ಬಾಳಿನ ಉದಾತ್ತ ಧ್ಯೇಯವನ್ನು [illegible] ವಂತಹ ಮತ್ತು ಸಮಾಜದಲ್ಲಿಯ ವಿಷಮವಾದ ತೊಡಕು, ಅನ್ಯಾಯಗಳನ್ನು [illegible] ತೋರುವಂಥ ಚಿತ್ರಪಟಗಳು ತೀರ ವಿರಳ. ಚಿತ್ರಪಟಗಳ ಉದ್ದೇಶ ಕೇವಲ ಮನರಂಜನೆ ಅಲ್ಲ; ಆದರೆ ಮನರಂಜನೆಯ ಜೊತೆಗೆ ಸಮಾಜ ಸುಧಾರಣೆಯ ಉದ್ದೇಶವೂ ಕಥೆಯಲ್ಲಿ ಬೆರೆತಿರಬೇಕು. ಆದರೆ ಇವೆಲ್ಲವುಗಳನ್ನು ಅದೆಷ್ಟೋ ಚಿತ್ರ ನಿರ್ಮಾಪಕರು ಮರೆತು ಕೇವಲ ಹಣವನ್ನು ಸುಲಿಯುವದಕ್ಕಾಗಿ ಚಿತ್ರಗಳನ್ನು ನಿರ್ಮಿಸುತ್ತಲಿದ್ದಾರೆ. ಅಲ್ಲದೆ ಇಂಥ ಪ್ರತಿಯೊಂದು ಸಾಮಾಜಿಕ ಚಿತ್ರಪಟವಲ್ಲೂ ಸತಿಪತಿಯರ ಪ್ರೇಮವನ್ನು ಮನಬಂದಂತೆ ಚಿತ್ರಿಸುವ ಚಿತ್ರಗಳೇ ಬಹಳ. ಆದರೆ ಈಗಿನ ಚಿತ್ರ ನಿರ್ಮಾಪಕರು ಬಂಧು ಪ್ರೇಮ, ತಾಯಿಯ ಪ್ರೇಮ ಇದನ್ನ ಮರೆತಂತೆ ಕಾಣುತ್ತದೆ.

ಹೀಗಾಗಿ ಸಾತ್ವಿಕ ಪ್ರೇಕ್ಷಕರ ಮನವನ್ನು ಇಂಥ ಚಿತ್ರಗಳು ತಣಿಸಲಾರವು. ಇಂಥ ಚಿತ್ರಗಳಿಂದ ಯಾವ ಸಂಸ್ಕೃತಿಯು ಪುಟ್ಟವೂ ಹೆಚ್ಚದು.

"ಮನಕೀಜೀತ, ಹಮ್ರಾಹಿ, ದೇವತ್, ಸಿಂಧೂರ ಇತ್ಯಾದಿ ಕೆಲವು ಉತ್ತಮ ಚಿತ್ರಗಳು ಬರುತ್ತಿವೆ

ನಟಿ ಖುರ್ಷಿದ ಮತ್ತು ಸಾದಿಕ್ ಅಲ್ಲಿ ಸೆಂಟ್ರಲ್‌ನವರ 'ಮಿಟ್ಟೀ' ಚಿತ್ರದಲ್ಲಿ. ಹುಬ್ಬಳ್ಳಿಯ 'ರೂಪಂ'ನಲ್ಲಿ ಈಗ ನಡೆಯುತ್ತಿದೆ

ಪೌರಾಣಿಕ--ಐತಿಹಾಸಿಕ ಚಿತ್ರಗಳು

ಈಗೀನ ಪೌರಾಣಿಕ-ಐತಿಹಾಸಿಕ ಚಿತ್ರಪಟಗಳಲ್ಲಿಯೂ ಅದೆಷ್ಟೋ ಲೋಪದೋಷಗಳು ಕಂಡು ಬರುತ್ತಿವೆ, ಮೂಲ ಕಥೆಯಲ್ಲಿ ವ್ಯತ್ಯಾಸವನ್ನುಂಟು ಮಾಡಿ ಜನರಲ್ಲಿ ತಪ್ಪು ಭಾವನೆಯನ್ನು ಹರಡುವ ಚಿತ್ರಗಳೇ ಬಹಳ. ಕಥೆಯಲ್ಲಿ ವ್ಯತ್ಯಾಸವನ್ನುಂಟು ಮಾಡಿ ಇಂಥದು ಕಥೆಯ ತಿರುಳನ್ನು ತಿಳಿಯದ ಹಾಗೆ ನಿರ್ಮಿಸುತ್ತಾರೆ. ಕೇವಲ ನರ್ತನ, ಹಾಸ್ಯ, ವಿಲಾಸ-ಪಾನ ಮತ್ತು ಪ್ರೇಮದ ಅತಿರೇಕದಲ್ಲಿ ಚಿತ್ರಗಳನ್ನು ಮುಳುಗಿಸಿಬಿಡುವರು. ಆದರೆ ಅಚ್ಚುಕಟ್ಟಾಗಿ ಮೂಲ ಕಥೆಯಲ್ಲಿ ವ್ಯತ್ಯಾಸವುಂಟಾಗದೆ ನಿರ್ಮಿಸಲ್ಪಟ್ಟ ಐತಿಹಾಸಿಕ ಪೌರಾಣಿಕ ಚಿತ್ರಗಳು ಕೆಲವೇ ಮಾತ್ರ.

ವಿಕ್ರಮಾದಿತ್ಯ, ರಾಮರಾಜ್ಯ, ಶಾಕುಂತಲ, ವಾಲ್ಮೀಕಿ, ಮಹಾರಥಿ ಕರ್ಣ ಮತ್ತು ಕನ್ನಡದಲ್ಲಿ ವಸಂತ-ಸೇನಾ ಹರಿಶ್ಚಂದ್ರ, ಕಬೀರ ಇತ್ಯಾದಿ ಕೆಲವು ಒಳ್ಳೆಯ ನಿದರ್ಶನಗಳು.

ಕಲೆ ತನ್ನ ಧ್ವನಿ ಶಕ್ತಿಯನ್ನವಲಂಬಿಸಿದಾಗ ಅದರ ವಿಸ್ತಾರ, ಪರಿಣಾಮಕಾರಿತ್ವ ಹೆಚ್ಚುತ್ತದೆ. ವಾಚ್ಯಕ್ಕಿಂತ ಸೂಚ್ಯ ಪ್ರಭಾವಿ. ನೀತಿ ಬೋಧನೆ ಕಲೆಯ ಮುಖ್ಯ ಗುರಿಯಲ್ಲವಾದರೂ ಕಲೆ ಕೊಡುವ ಆನಂದ, ರಸಾನುಭವ ಸಾತ್ವಿಕವಾಗಿದ್ದರೆ, ಅದರ ಪರಿಣಾಮ ಸದ್ಬೋಧ ರೂಪದ್ದೇ ಆಗುವುದು ಅನಿವಾರ್ಯ. ಈ ದೃಷ್ಟಿಯಿಂದ ಮನರಂಜನೆಯನ್ನು ಅರ್ಥ ಮಾಡಿಕೊಂಡರೆ ಸಾತ್ವಿಕ ಮನಸ್ಸಿಗೆ, ಸುಸ್ಕೃತ ಮನಸ್ಸನ್ನುಳ್ಳ ಪ್ರೇಕ್ಷಕರಿಗೆ ದೃಷ್ಟಿಪೇಯವಾಗುವಂಥ ಚಿತ್ರಗಳನ್ನು ತಯಾರಿಸಲು ಪ್ರವೃತ್ತಿ ಉಂಟಾಗುತ್ತದೆ. ನಮ್ಮ ಸಾಮಾಜಿಕ, ಐತಿಹಾಸಿಕ ಮತ್ತು [illegible] ಇಲ್ಲವೆ ಇನ್ನಾವ ಬಗೆಯವೇ ಆಗಲಿ. ಚಲಚ್ಚಿತ್ರಗಳು ಮೇಲಿನ ಮಾತನ್ನು ನಿದರ್ಶಿಸಲು [illegible] ಹೆಚ್ಚಾಗಿ ಪ್ರಯತ್ನಿಸುವುದು ಸಮಾಜಹಿತ ಮತ್ತು ಸಂಸ್ಕೃತಿ ಪೋಷಣದ ದೃಷ್ಟಿಯಿಂದ, ನಮ್ಮ ಜನರ ಮಾನಸಿಕ ಆರೋಗ್ಯವನ್ನು ಸುರಕ್ಷಿತವಾಗಿ ಇಡುವ ದೃಷ್ಟಿಯಿಂದ, ಅತ್ಯಗತ್ಯ.

ಕಾಶ್ಮೀರದ ಒಲವು ಎತ್ತ?

ಜನಸಂಖ್ಯೆಯ ಒಂದು ಪೃಥಕ್ಕರಣ

ಕಾಶ್ಮೀರವನ್ನು ಅಮಾನುಷ ಅತ್ಯಾಚಾರಗಳಿಂದ ಉಳಿಸುವದೊಂದೇ ತನ್ನ ಇಚ್ಛೆಯೆಂದೂ ಶಾಂತಿಸ್ಥಾಪನೆಯಾದ ಬಳಿಕ ಅಲ್ಲಿಯ ಪ್ರಜೆಗಳು ತಮ್ಮ ಇಚ್ಛೆಯಂತೆ ಮತಕೊಟ್ಟು ಯಾವ ಡೊಮಿನಿಯನ್ನಿಗೆ ಸೇರಬೇಕೆಂದು ನಿರ್ಧಯವಾಗಿ ತಾವೇ ನಿರ್ಧರಿಸಬಹುದೆಂದೂ ಹಿಂದೀ ಸರಕಾರ ಅಡಿಗಡಿಗೆ ಸಾರುತ್ತ ಬಂದಿದೆ. ಹಿಂದೀ ಸೈನ್ಯ ಇನ್ನು ಕೆಲವೇ ವಾರಗಳಲ್ಲಿ ಕಾಶ್ಮೀರದಿಂದ ದಾಳಿಗಾರರನ್ನು ಹೊರಗಟ್ಟಲು ಸಮರ್ಥವಾಗುವದೆಂಬಲ್ಲಿ ಈಗ ಏನೂ ಸಂದೇಹವುಳಿದಿಲ್ಲ ಆ ಮೇಲೆ ಮತಗಣನೆ ನಡೆಸಿ ಕಾಶ್ಮೀರ ತನ್ನ ಭಾಗ್ಯವನ್ನು ನಿರ್ಧರಿಸಿಕೊಳ್ಳಬಹುದು. ಅಂಥ ಕಾಲಬಂದಾಗ ಕಾಶ್ಮೀರ ಯಾವ ಕಡೆ ಒಲೆಯಬಹುದು? ಈ ಪ್ರಶ್ನೆ ಹಿಂದುಸ್ತಾನದಲ್ಲಿ ಅನೇಕರ ತಲೆತಿನ್ನುತ್ತಿದೆ ಕಾಶ್ಮೀರದಲ್ಲಿ ಕೂಡ ಇದೇ ಪ್ರಶ್ನೆ ಕೇಳಲ್ಪಡುತ್ತಿದೆಯಂತೆ.

ಹಿಂದುಸ್ತಾನದಲ್ಲಿ ಜಾತೀಯ ಸೌಹಾರ್ದವನ್ನು ಕಾಯ್ದುಕೊಳ್ಳಿರಿ ಎಂದು ಕಾಶ್ಮೀರ ಪ್ರಮುಖ ಶೇಖ ಅಬ್ದುಲ್ಲಾ ಅವರು ಆಗಾಗ್ಗೆ ನಮಗೆ ಉಪದೇಶಿಸುತ್ತ ಇರುವದನ್ನು ನೋಡಿ ಅನೇಕರು ಆಶ್ಚರ್ಯಪಡುತಿರಬಹುದು ಅಬ್ದುಲ್ಲಾರ ಈ ಒತ್ತಾಯಕ್ಕೆ ಕಾರಣವಿಲ್ಲದೇ ಇಲ್ಲ. ಜಮ್ಮು ಮತ್ತು ಕಾಶ್ಮೀರ ಮುಸ್ಲಿಂ ಬಹುಸಂಖ್ಯಾಕ ಸಂಸ್ಥಾನವೆಂದು ಎಲ್ಲರಿಗೂ ಗೊತ್ತು. ಹಿಂದುಸ್ತಾನದ ಬಹುಸಂಖ್ಯಾಕರು ಮುಸ್ಲಿಮರನ್ನು ಪೀಡಿಸಿದರೆ ಕಾಶ್ಮೀರದ ಮುಸ್ಲಿಮರು ಹೆದರಿ ಪಾಕಿಸ್ತಾನಕ್ಕೇ ಮಾಲೆ ಹಾಕಬಹುದು.

ಕಾಶ್ಮೀರದ ಮುಸ್ಲಿಮರಾದರೂ ಏಕಜನಾಂಗದವರಾಗಿದ್ದರೆ ಶೇಖ ಅಬ್ದುಲ್ಲಾರ ಪ್ರಭಾವವೊಂದೇ ಅವರನ್ನು ಹಿಂದೀ ಒಕ್ಕೂಟದ ಕಡೆ ಸೆಳೆಯುತಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲ.

ಜನಸಂಖ್ಯಾ ಪೃಥಕ್ಕರಣ

ಕಾಶ್ಮೀರವನ್ನು ಕಾಶ್ಮೀರ, ಜಮ್ಮು ಮತ್ತು ಗಡಿ ಜಿಲ್ಲೆಗಳಾದ ಗಿಲ್ಗಿಟ್, ಲಡಕ ಮತ್ತು ಅಸ್ತೋರ ಎಂಬದಾಗಿ ಮೂರುಭಾಗ ಮಾಡಬಹುದು. ಕಾಶ್ಮೀರದ ಒಟ್ಟು ಜನಸಂಖ್ಯೆ ೧೭.೪ ಲಕ್ಷ ಅವರಲ್ಲಿ ೧೬.೨ ಲಕ್ಷ ಮುಸ್ಲಿಮರು. ಆದರೆ ಈ ವಿಭಾಗದ ಮುಜಫರಾದ ಜಿಲ್ಲೆ ಪಶ್ಚಿಮ ಪಂಜಾಬದ (ಪಾಕಿಸ್ತಾನ) ಹಜಾರಾ ಜಿಲ್ಲೆಗೆ ತಗಲಿದ್ದು ಅಲ್ಲಿ ಪಂಜಾಬಿ ಮುಸ್ಲಿಮರೇ ಬಹಳ. ಗಡಿನಾಡು ಪ್ರಾಂತದಲ್ಲಿ ಪಂಜಾಬಿ ಪ್ರಭಾವವುಳ್ಳ ಮುಸ್ಲಿಮರು ಹೆಚ್ಚಾಗಿದ್ದ ಜಿಲ್ಲೆಗಳಲ್ಲಿ ಪಾಕಿಸ್ತಾನವಾದಿಗಳಿಗೆ ಬೆಂಬಲವಿತ್ತಲ್ಲದೆ ಪಠಾಣರಲ್ಲಿ ಅಷ್ಟೊಂದಿರಲಿಲ್ಲವೆಂಬದನ್ನು ನಾವು ಇಲ್ಲಿ ನೆನೆದುಕೊಳ್ಳಬಹುದು ಮುಜಫರಾಬಾದದ ಪಂಜಾಬಿ [illegible]

ಗಿಲ್ಗಿಟ್ ಮೊದಲಾದ ಗಡಿ ಜಿಲ್ಲೆಗಳ [illegible] ಲಕ್ಷ ಜನಸಂಖ್ಯೆಯಲ್ಲಿ ಮುಸ್ಲಿಮೇತರರು ಕೇವಲ ೧೦೦೦೦ ಇದ್ದಾರೆ.

ಹೀಗೆ ಜಮ್ಮು—ಕಾಶ್ಮೀರದ ೪೦ ಲಕ್ಷ ಜನಸಂಖ್ಯೆಯಲ್ಲಿ ೧೭.೫ ಲಕ್ಷ ಪಂಜಾಬಿ ಮುಸಲ್ಮಾನರು, ೧೩.೩ ಲಕ್ಷ ಕಾಶ್ಮೀರಿ ಮುಸ್ಲಿಮರು, ೯.೨ ಲಕ್ಷ ಮುಸ್ಲಿಮೇತರರು. ಮೊನ್ನಿನ ಜಾತೀಯ ಕಲಹಗಳಲ್ಲಿ ಸತ್ತವರ ಸಂಖ್ಯೆಯ ಬಗ್ಗೆ ಮುಸ್ಲಿಮರೂ ಹಿಂದುಗಳೂ ಬಹಳ ಅತಿಶಯೋಕ್ತಿಪೂರ್ಣ ಅಂಕೆಗಳನ್ನು ಹೇಳುತ್ತಿದ್ದರೂ ಎರಡೂ ಕಡೆ ಸೇರಿ ಸುಮಾರು ೪ ಲಕ್ಷ ಜನ ಸತ್ತಿರಬಹುದು ಇಲ್ಲವೆ ಓಡಿರಬಹುದೆಂದೂ ಅವರಲ್ಲಿ ಹಿಂದೂ ಮುಸ್ಲಿಮ ರಿಬ್ಬರ ಸಂಖ್ಯೆ ಸಮಾನವಾಗಿರಬಹುದೆಂದೂ ಊಹಿಸಲಡ್ಡಿಯಿಲ್ಲ.

ಅಂತೂ ೩೬ ಲಕ್ಷ ಜನರು ಕಾಶ್ಮೀರದಲ್ಲಿ ಉಳಿದಿದ್ದಾರೆ. ಅವರಲ್ಲಿ ೧೫.೫ ಲಕ್ಷ ಪಂಜಾಬಿ ಮುಸ್ಲಿಮರು. ೧೩.೩ ಲಕ್ಷ ಕಾಶ್ಮೀರಿ ಮುಸ್ಲಿಮರು; ೭.೨ ಲಕ್ಷ ಮುಸ್ಲಿಮೇತರರು ಶೇಖ ಅಬ್ದುಲ್ಲಾರ ಅನುಯಾಯಿಗಳು. ಅನೇಕ ಪಂಜಾಬಿ ಮುಸ್ಲಿಮರನ್ನು ಒಲಿಸಿಕೊಂಡಿರುವದಾಗಿ ಹೇಳಿದರೂ ಪಂಜಾಬಿಗಳಲ್ಲಿ ಅಧಿಕಾಂಶ ಜನರು ಪಾಕಿಸ್ತಾನದಲ್ಲಿ ಸೇರಲು ಬಯಸುವವರೆನ್ನಲಡ್ಡಿಯಿಲ್ಲ. ಮುಸ್ಲಿಮೇತರರೆಲ್ಲರೂ ಹಿಂದುಸ್ತಾನಕ್ಕೆ ಮತ ಕೊಡುವರೆಂದು ನಂಬಬಹುದು ಹೀಗೆ ಕಾಶ್ಮೀರಿ ಮುಸ್ಲಿಮರ ಕೈಯಲ್ಲೆ ಬೀಗದ ಕೈ ದೊರೆತಂತಾಯಿತು. ಅವರಲ್ಲಿ ನೂರಕ್ಕೆಪ್ಪತ್ತು ಜನರು ಹಿಂದುಸ್ತಾನದ ಪರವಾಗಿ ಮತ ಕೊಟ್ಟರೆ ಕಾಶ್ಮೀರ ಸುಲಭವಾಗಿ ನಮಗೆ ಸಿಗುವದು. ಅವರು ಒಲಿಯುವರೆ? ಶೇಖ ಅಬ್ದುಲ್ಲಾರು ಹಿಂದೀಯರಿಗೆ ಮಾಡಿಕೊಂಡ ಬಿನ್ನಹದ ಅರ್ಥ ಇಷ್ಟೆ.

ಒಂದು ಚಲಚ್ಚಿತ್ರದ ವಿಮರ್ಶೆಯಲ್ಲಿ ಒಬ್ಬ ನಟಿಯನ್ನು ಯದ್ವಾತದ್ವಾ ಟೀಕಿಸಲಾಗಿತ್ತು. ಅವಳು ಕಂಪನಿಯ ಯಜಮಾನನ ಹತ್ತಿರ ಹೋಗಿ, "ನೋಡಿರಿ, ಆ ವಿಮರ್ಶಕ ನನ್ನನ್ನು ಹೇಗೆ ಕುತ್ಸಿತ ಟೀಕೆಗೆ ಗುರಿಪಡಿಸಿದ್ದಾನೆ!" ಎಂದಳು.

"ಮರೆತುಬಿಡು ಅದನ್ನು! ಅವನು ಶುದ್ಧ ಗಿಣಿ. ಅವರಿವರು ಹೇಳಿದ್ದನ್ನೇ ಹೇಳುವುದು ಮಾತ್ರ ಅವನಿಗೆ ಗೊತ್ತು" ಎಂದು ಯಜಮಾನನೆಂದನು.

ಮಗುವು ಕಾರಣವಿಲ್ಲದೆ ಅಳುತ್ತಿದ್ದರೆ
ರುಚಿಕರವಾದ ಗ್ರೈಪ್ ಸಿರಪ್ ಕೊಟ್ಟಲ್ಲಿ
ಮಗುವು ಉಲ್ಲಾಸಿತ ಮತ್ತು ಆರೋಗ್ಯದಿಂದಿರುತ್ತದೆ.
ಇದು I.T.L. ತಯಾರಿಕೆ.
ಮಾರುವ ಏಜಂಟರು:- ಕರ್ನಾಟಕ ಆ್ಯಂಡ್ ಡೆಕ್ಕನ್ ಏಜನ್ಸೀಸ್, ಬೆಳಗಾವಿಗಲ್ಲಿ, ಹುಬ್ಬಳ್ಳಿ.

ರಾಯಭಾರಿ ಆಸಫ ಅಲ್ಲಿ

(೩ನೆಯ ಪುಟದಿಂದ)

ಶ್ರೀಮತಿ ಶ್ರೀಮತಿಯವರು ಕೂಡ ಅಸಫ ಅಲ್ಲಿಯವರ ಜೊತೆಗೆ ಸಂಚಾರ ಮಾಡಿ ಕೆಲವು ಕಡೆ ಭಾಷಣ ಮಾಡಿ, ವಾಶಿಂಗ್‌ಟನ್ನಿನಲ್ಲಿ ಪಂಜಾಬ್ ನಿರಾಶ್ರಿತರ ಪರಿಹಾರ ನಿಧಿ ಸಮಿತಿಯನ್ನು ಸ್ಥಾಪಿಸಿ ಹಣ, ಆಹಾರ, ಬಟ್ಟೆಗಳನ್ನು ಶೇಖರಿಸಿದರು. ನಾವು ಭಾರತೀಯ ವಿದ್ಯಾರ್ಥಿ ಸಂಘದ ವರೂ ನಿರಾಶ್ರಿತರಿಗಾಗಿ ೦೦೦ ಡಾಲರನ್ನು ಶೇಖರಿಸಿ ಪಂಡಿತ ಜವಾಹರಲಾಲ ನೆಹರು ವರಿಗೆ ಕಳುಹಿಸಿಕೊಟ್ಟೆವು ಇದು ಅಮೇರಿಕನ್ನರಿಂದ ಕೂಡಿಸಿದ್ದು.

ಶ್ರೀ ಅಸಫ ಅಲ್ಲಿಯವರ ೧೪ ತಿಂಗಳ ರಾಯಭಾರಿತನ ಹೊಳ್ಳಾಗಲಿಲ್ಲ. ಮುಂದಿನ ರಾಯಭಾರಿಗೆ ಬಲವಾದ ತಳಹದಿ ಹಾಕಿ ಹೋದರು, ಅವರು ಭಾರತಕ್ಕೆ ಗಳಿಸಿದ ಅಮೇರಿಕದ ಸ್ನೇಹಿತರ ಸಂಖ್ಯೆ ಕಡಿಮೆಯಿದ್ದರೂ, ಆ ಸ್ನೇಹಿತರೆಲ್ಲ ಕಡೆತನಕ ಭಾರತದ ಸ್ನೇಹಿತರಾಗಿರುವಂತೆ ಮಾಡಿದರು. ಅವರು ಹೋಗುವಾಗ "ಆಶೆಯೆಂಬುದು ಬಹಳ ದೊಡ್ಡ ವಸ್ತು" ಎಂದರು. ಅದು ನಿಜವಾಗಲಿ.

ರಾಯಭಾರಿ ಕಚೇರಿಯ ನೋಟ

ವಾಶಿಂಗ್‌ಟನ್ನಿಗೆ ಬಂದಕೂಡಲೇ ಭಾರತದ ರಾಯಭಾರಿ ಕಚೇರಿಯನ್ನು ನೋಡಬೇಕೆಂದು ಮನಸ್ಸಾಗುವುದು ಸಹಜ. ರಾಯಭಾರಿ ಕಚೇರಿಗೆ ಸಂಬಂಧಪಟ್ಟಂತೆ, ಮೂರು ದೊಡ್ಡ ಕಟ್ಟಡಗಳಿವೆ ರಾಯಭಾರಿಯು ವಾಸಿಸುವ 'ಅರಮನೆ' ರಾಯಭಾರಿಯ ಕಚೇರಿ, ರಾಯಭಾರಿಯ ಸುದ್ದಿ ಖಾತೆ ಮತ್ತು ವಿದ್ಯಾಖಾತೆಯ ಕಚೇರಿ.

ಕ್ರಾಂತಿಯ ಕಿಡಿ ಅರುಣಾ

ಹಿಂದಿನ ಭಾರತದ ಏಜಂಟ ಜನರಲ್ ಶ್ರೀ ಗಿರಿಜಾಶಂಕರ ವಾಜಪೇಯಿಯವರು ವಾಸಿಸುತ್ತಿದ್ದ ಗೃಹದಲ್ಲಿ ಶ್ರೀ ಅಸಫ್ ಅಲ್ಲಿಯವರ ವಾಸ. ಅದು ಭಾರತ ಸರ್ಕಾರದ ಆಸ್ತಿ. ರಾಜಧಾನಿಯ ಉತ್ತರಕ್ಕೆ ಸಣ್ಣ ಗುಡ್ಡವೊಂದರ ಮೇಲೆ ಈ ಭವನ ಕಟ್ಟಲ್ಪಟ್ಟಿರುವುದು ಇದರ ವಿಳಾಸ, ೨೭೦೦. ಮೇಕೂಂಬ್ ಬೀದಿ. (2700 Macomb Street N. W. Washington, D. C) ದೊಡ್ಡ ದಿಡ್ಡಿ ಬಾಗಲು, ಅದರ ಪಕ್ಕದ ದಿಣ್ಣೆಯ ಮೇಲೆ ತ್ರಿವರ್ಣ ರಾಷ್ಟ್ರೀಯಧ್ವಜ ವಿರಾಜಮಾನವಾಗಿದೆ. ಮೊನ್ನೆ ಕರ್ನಾಟಕದ ಕರಮರಕರರು ಯು.ರಾ ಸಂಘಕ್ಕೆ ಹೋದಾಗ ಜಗರಾಷ್ಟ್ರ ಧ್ವಜಗಳ ಮಧ್ಯೆ ಭಾರತೀಯ ಝೆಂಡಾದ ಕೆಳಗೆ ನಿಂತು "ಝೆಂಡಾ ಊಂಚಾ ರಹೇ ಹಮಾರಾ" ಹಾಡಿಯೇ ಬಿಟ್ಟರು. ಪಕ್ಕದಲ್ಲಿ ಓಡಾಡುತ್ತಿದ್ದ ಅಮೇರಿಕನ್ನರು, ಈ ಬಿಳಿಟೋಪಿ ಭಾರತೀಯರ ಭಕ್ತಿ ನೋಡಿ ಚಕಿತರಾದರು (ನ್ಯೂಯಾರ್ಕ ಟೈಮ್ಸ ವರದಿ). ಡಿಸೆಂಬರ್ ತಿಂಗಳಲ್ಲಿ ನಾ ರಾಜಧಾನಿಗೆ ಹೋದಾಗ ರಾಯಭಾರಿಯ ವಾಸದ ಮನೆಯ ಒಳಗೆ ಹೋಗುವ ಅವಕಾಶ ಸಿಕ್ಕಿತ್ತು. ಸಾಮಾನ್ಯವಾಗಿ ರಾಯಭಾರಿ ಊರಲ್ಲಿದ್ದರೆ, ನೋಡಬೇಕಾದ ಸ್ಥಳಗಳೆಲ್ಲಾ ನೋಡಲು ಅವಕಾಶವಾಗುವದಿಲ್ಲ. ಆಗ ಅಸಫ್ ಅಲ್ಲಿ ಭಾಷಣದ ಪ್ರವಾಸಕ್ಕೆ ಹೊರಟಿದ್ದರಿಂದ ನನಗೆ ಅವರ ಮನೆಯೊಳಗೆ "ಲಗ್ಗೆ" ಮಾಡಲು ಕಷ್ಟವೇ ಆಗಲಿಲ್ಲ. ಅವರ ಆಪ್ತ ಕಾರ್ಯದರ್ಶಿ ಮದರಾಸಿನ ಶ್ರೀ ಟಿ ಎಸ್ ರಾಮಚಂದ್ರರವರ ಮುಖಾಂತರ ಅಲ್ಲಿಗೆ ಹೋಗಲು ಅಪ್ಪಣೆ ದೊರಕಿಸಿಕೊಂಡೆ ಅರಮನೆ ಪ್ರವೇಶಿಸಿದ ಕೂಡಲೇ ಕಾಣುವುದು ದೊಡ್ಡದಾದ ಮಹಾತ್ಮಾ ಬುದ್ಧನ ವಿಗ್ರಹ- ಭಾರತೀಯ ಸಂಸ್ಕೃತಿಯ ಕಥೆಯ ದಂತದಲ್ಲಿ ತಯಾರಿಸಿದ ತಾಜಮಹಲ್ ಹೊರಡ ಪೇಲಿ ಕಿಂಕಾಪಿನ ಜರದ ಜಮಖಾನ. ಎಡಕ್ಕೆ ಪಕ್ಕದಲ್ಲಿ ಆಗಂತುಕರ ಪುಸ್ತಕ ಆ ಪುಸ್ತಕದಲ್ಲಿ ಆ ಮನೆಗೆ ಬಂದವರೆಲ್ಲಾ ರುಜು ಮಾಡಬೇಕು. ದೊಡ್ಡ ರಾಯಭಾರಿ, ರಾಜಕಾರಣಿಗಳಿಂದ ಹಿಡಿದು ನನ್ನಂಥವನ ವರೆಗೂ ರುಜುಗಳಿದ್ದವು. ಆ ಭಾರೀ ಊಟದ ಸಮಾಚಾರ ಬರೆದಿದ್ದೆನಲ್ಲಾ! ಆ ಊಟ ಆದದ್ದು ಇಲ್ಲೇ. ಅಂದಿನದಿನದ ೪೦೦ ಅತಿಥಿಗಳೂ ರುಜುಮಾಡಿದ್ದರು. ನಾನಾ ಭಾಷೆಗಳ ರುಜುಗಳಿದ್ದವು. ಕನ್ನಡಿಗ ಅತಿಥಿಗಳಿದ್ದರೂ ಅವರು ರುಜುಗಳು ಇಂಗ್ಲೀಷದಲ್ಲೇ ಇದ್ದುವು. ಉಳಿದವರು ತಮ್ಮ ಭಾಷೆಗಳಾದ ಹಿಂದಿ, ಮರಾಠಿ, ಗುಜರಾತಿ ಅಥವಾ ಉರ್ದುವಿನಲ್ಲೋ ರುಜುಮಾಡಿದ್ದರು. ನಾನು ಕನ್ನಡದಲ್ಲೇ ನನ್ನ ಹೆಸರು ಬರೆದು ಮುಂದೆ ಕರ್ನಾಟಕ ಎಂದು ಬರೆದೆ. ಅದನ್ನು ಬರೆದ ಮೇಲೆ ನನಗೆ ಒಂದು ತರಹದ ಆನಂದ, "ಪ್ರತಿಷ್ಠೆ" ಎಂದು ಬೇಕಾದರೂ ಅನ್ನಿ.

ಶ್ರೀ ಅಸಫ್ ಅಲ್ಲಿಯವರ ಕಾರಕೂನರಾದ ಶ್ರೀ ಕರಿಮುಲ್ಲಾರವರು ದೂತಿಯೊಬ್ಬಳನ್ನು ಕರೆದು ನನಗೆ ಎಲ್ಲವನ್ನು ತೋರಿಸಬೇಕೆಂದು ಅಪ್ಪಣೆಯಿತ್ತರು. ಇಲ್ಲಿ ಸೇವಕರೆಲ್ಲಾ ಗ್ರೀಕ್, ಬ್ರಿಟಿಶ ಅಥವಾ ಅಮೇರಿಕನ್ ಪ್ರಜೆಗಳು. ಅಡಿಗೆಯವ ಗ್ರೀಸ್ ದೇಶದವ. ಮೊದಲು ಓಲಗಶಾಲೆಗೆ (State room)ಗೆ ಹೋದೆವು. ಇದನ್ನು ತುಂಬಾ ಹಣ ಚೆಲ್ಲಿ ಅಲಂಕಾರ ಮಾಡಿದ್ದಾರೆ. ದಂತ, ಚಿನ್ನ, ಬೆಳ್ಳಿ, ವಿಗ್ರಹಗಳು, ಭಾರತದ ನಾನಾ ಸಂಸ್ಕೃತಿಯ ಕುರುಹಿನ ಚಿತ್ರಗಳು ಮುಂತಾದವುಗಳಿಂದ ರಂಜಿಸಲಾಗಿದೆ- ಪರದೇಶದ ರಾಯಭಾರಿಗಳು ಬಂದಾಗ ಅವರಿಗೆ ಸತ್ಕಾರ ಇಲ್ಲಿಯೇ. ಮಹಡಿಯ ಮೇಲೆ ಶ್ರೀ ಅಸಫ್ ಅಲ್ಲಿಯವರು ವಾಸಿಸುವ, ಓದುವ, ಕೆಲಸ ಮಾಡುವ ಕೊಠಡಿಯಲ್ಲಿ ಪ್ರವೇಶಿಸಿದೆವು. ಅವರು ವಾಸಿಸುವ ಕೊಠಡಿಯಲ್ಲಿ ಪಂಡಿತ ನೆಹರುರವರ ಭಾವಚಿತ್ರಗಳು ಹಾಕಲ್ಪಟ್ಟಿತ್ತು. ಅವರ ಓದುವ ಕೊಠಡಿಯಲ್ಲಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರಿಂದ ರುಜುಹಾಕಿ ಕೊಡಲ್ಪಟ್ಟ ಭಾವಚಿತ್ರವೊಂದಿತ್ತು. ಅವರ ಕೆಲಸದ ಕೊಠಡಿಯಲ್ಲಿ ಪೂಜ್ಯ ಬಾಪೂಜಿಯವರ ಚಿತ್ರವೂ ಇತ್ತು. ಮೇಜಿನ ಮೇಲೆ ಕೆಲವು ತಿಂಗಳ ಕೆಳಗೆ ಶ್ರೀ ಅಸಫ್‌ಅಲ್ಲಿ ಬರೆದ ಕವನವೊಂದಿತ್ತು. ಅವರ ಹೆಸರು "Peace" ಶಾಂತಿ ಎಂದು. "Hope is a very great thing" (ಆಸೆ ಬಹಳ ದೊಡ್ಡದು) ಎಂಬ ತತ್ವ ಅದರಲ್ಲಡಗಿತ್ತು. (ಅಪದ್ಧ ಓದಿದ್ದಕ್ಕೆ ಕ್ಷಮಾಪಣೆಯನ್ನು ಕೇಳಲೆ?) ಓ! ಮರೆತೆ ಅವರ ಮಲಗುವ ಕೊಠಡಿಯಲ್ಲಿ ರಾಣಿ ಅರುಣಾದೇವಿಯ ಕೊಡಲು ಕೆಡದಿದ ಕ್ರಾಂತಿಕಾರಿಯ ಭಾವಚಿತ್ರವೂ ಇತ್ತು.

ನಂತರ ಶ್ರೀಮತಿಯವರ ರೂಮಿಗೆ ಹೋದೆವು. ಅಲ್ಲಿ ಪುಸ್ತಕಗಳ ರಾಶಿ. ಅಮೇರಿಕದ ಸೋಷಿಯಲಿಸ್ಟ ಪತ್ರಿಕೆಯೊಂದಿತ್ತು. ಅದರ ಮೇಲೆ ಭಾರತದಲ್ಲಿ ಬರೆದ ಕೆಲವು ಪುಸ್ತಕಗಳಿದ್ದವು. 'ಜನತಾ' ಇದ್ದವು. ಯಾವ ಭಾವಚಿತ್ರಗಳೂ ಕಣ್ಣಿಗೆ ಕಾಣಲಿಲ್ಲ ಎಲ್ಲವೂ ಬಿಳಿಯ ವಸ್ತ್ರಗಳಿಂದ ಅಲಂಕರಿಸಲ್ಪಟ್ಟಿತ್ತು. ಅವರ ಬರೆಹದ ಕೆಲವು ಕರಡು ಕಾಗದಗಳು ಮೇಜಿನ ಮೇಲಿದ್ದವು. ಆ ದೂತ ಆ ಕಡೆ ತೋರಿಸುತ್ತ 'Her Excellency is now working on a book She is a hard worker' (ಶ್ರೀಮತಿಯವರು ಒಂದು ಪುಸ್ತಕ ಬರೆಯುತ್ತಿದ್ದಾರೆ. ಅವರೊಳ್ಳೆ ಉದ್ಯೋಗಶೀಲರು) ಎಂದು ಹೇಳಿದರು. ನನಗದನ್ನು ನೋಡುವ ಧೈರ್ಯವಾಗಲಿಲ್ಲ. ಆಕೆಯೇ ತೋರಿಸಿದಳು.

ಈ ಕೊಠಡಿಗಳ ಪಕ್ಕದಲ್ಲಿ ಮೂರು ಅಂತಹವೇ ಕೊಠಡಿಗಳಿವೆ. ಮಹಾರಾಜರ, ನವಾಬರ, ಕುಟುಂಬ ವಾಶಿಂಗಟನ್‌ಗೆ ಬಂದಾಗ ರಾಯಭಾರಿಯ ಸ್ವಂತ ಅತಿಥಿಗಳಾದಾಗ ಇಲ್ಲಿ ವಾಸಿಸುವರು. ಎಲ್ಲವನ್ನು ನೋಡುವ ವೇಳೆಗೆ ಒಂದು ಘಂಟೆಯಾಯಿತು. ಈ ಅರಮನೆಯಲ್ಲಿ ಭಾರತೀಯ ಕಲೆ, ಸಂಸ್ಕೃತಿಗಳ ಅರಿವಾಗುವದಾದರೂ ಭಾರತೀಯ ಸರಳತೆ ಎದ್ದು ಕಾಣುವದಿಲ್ಲ.

Government of India (ಹಿಂದುಸ್ಥಾನ ಸರಕಾರ) ಎಂಬ ದೊಡ್ಡ ಹಲಿಗೆ ತಗಲು ಹಾಕಿರುವುದೇ 2107, Chancery, Indian Embassy, ಭಾರತದರಾಯಭಾರಿಯ ಅಧಿಕೃತ ಕಚೇರಿ. ಇದು Massachessetts Avenue ದಲ್ಲಿದೆ. ವಿಳಾಸ ಮೇಲಿದ್ದಂತೆ ಕಬ್ಬಿಣದ ಬಾಗಿಲುಗಳನ್ನು ದಾಯ್ದು ಹೋಗಬೇಕು. ಅಲ್ಲೊಬ್ಬ ದೂತ ನಿಂತಿರುತ್ತಾನೆ. ಆತ ಬ್ರಿಟಿಷ್. What do you want, Sir ? (ಏನು ಬೇಕು ಸ್ವಾಮೀ) ಎನ್ನುತ್ತಾನೆ ಅತನೇ ಕಚೇರಿಗೆ ಮೊದಲ ಅಧಿಕೃತ ಪರಿಚಯಕಾರ. ಮಹಡಿಯ ಮೇಲೆ ರಾಯಭಾರಿಯ ಅಫೀಸ್. ರಾಯಭಾರಿಯ ಕುರ್ಚಿಯ ಹಿಂದೆ ಅಮೇರಿಕದ ಮತ್ತು ಭಾರತದ ಧ್ವಜಗಳನ್ನು [ದೊಡ್ಡವು] ಕಸ್ತರಿಯಂತೆ ಇಲ್ಲಿಸಿದ್ದಾರೆ. ಇಲ್ಲಿಯೂ ಬುದ್ಧನ ಭಾವಚಿತ್ರವೊಂದಿದೆ. ಪಕ್ಕದಲ್ಲಿ ಮೊದಲನೇ ಕಾರ್ಯದರ್ಶಿ ಶ್ರೀ ಆರ್. ಕೆ. ನೆಹರುರವರ ಕಚೇರಿ. ನಾ ಹೋದಾಗ ಶ್ರೀ ಸೇನ್‌ರು ಮಂತ್ರಿಯಾಗಿದ್ದರು!

ಈ ಮುಖ್ಯ ಕಚೇರಿಯಿಂದ ನಾಲ್ಕು ಮಾರು ಹೋದರೆ ಸಿಕ್ಕುವದೇ ೨೧೧೧ ನಂಬರಿನ Mass. Ave N. W. ದ ಭಾರತದ ರಾಯಭಾರಿಯ ಸುದ್ದಿ ಖಾತೆ ಮತ್ತು ವಿದ್ಯಾಖಾತೆಯ ಕಚೇರಿಗಳು ಅಮೇರಿಕದಲ್ಲಿ ಬಹುದಿನಗಳಿಂದ ನೆಲಸಿದ್ದ ಡಾ|| ಅನೂಪಸಿಂಗರು ಮೊನ್ನೆ ಹೊಸದಾಗಿ ಶ್ರೀ ಜಗದೀಶ ನಟರಾಜನ್‌ರ ಬದಲು ಸುದ್ದಿ ಖಾತೆಯ ಮುಖ್ಯಾಧಿಕಾರಿಗಳಾಗಿ ನೇಮಿಸಲ್ಪಟ್ಟರು. ಪ್ರತಿವಾರವೂ ಅಮೇರಿಕದಲ್ಲಿ ನೆಲಸಿರುವ ಭಾರತೀಯರಿಗೆ ಇಲ್ಲಿಂದ ವಾರ್ತಾ ಪತ್ರಗಳು ಭಾರತದ ಮುಖ್ಯ ಸುದ್ದಿಗಳನ್ನು ಕೊಡುತ್ತವೆ. ಭಾರತದ ಬಗ್ಗೆ ಸಂಸ್ಕೃತಿಯ ಕಾರ್ಯಕ್ರಮ ಏರ್ಪಡಿಸಲು ಇಲ್ಲಿಂದ ಸಹಾಯ ಪಡೆಯಬಹುದು. ಚಲನ ಚಿತ್ರಗಳು, ಭಿತ್ತಿ ಪತ್ರಗಳು, ಗ್ರಾಮೋಫೋನ್ ರಿಕಾರ್ಡುಗಳು ಮುಂತಾದುದನ್ನು ಈ ಅಫೀಸ್ ಒದಗಿಸುತ್ತದೆ. ಇದಕ್ಕೆ ಹೊಂದಿರುವದೇ ವಿದ್ಯಾ ಖಾತೆಯ ಕಚೇರಿ ಮದ್ರಾಸಿನ ಪ್ರೊ ಸುಂದರಮ್ ಕಾಲಕ್ಕೆ ಕಚೇರಿ ಬೇರೆ ಕಡೆ ಇತ್ತು. ಆಗ ನಮ್ಮ ಕರ್ನಾಟಕದ ಪ್ರೊ ಪೂರ್ಣನ್‌ರವರು ಉಪವಿದ್ಯಾಧಿಕಾರಿಗಳಾಗಿದ್ದರು. ಈಗ ಡಾ. ಬೈರಾಮ್ ಎಂಬುವನು ಆಡಳಿತ ನಡೆಸುತ್ತಿದ್ದಾರೆ. ಈ ಕಚೇರಿಯೇ ಭಾರತದ ವಿದ್ಯಾರ್ಥಿಗಳಿಗೆ ಪ್ರವೇಶ, ವಾಸ ಮುಂತಾದುವುಗಳನ್ನು ಮಾಡಿಕೊಟ್ಟು ಭಾರತೀಯ "ಅಧಿಕಾರೇತರ ರಾಯಭಾರಿ"ಗಳ ಯೋಗಕ್ಷೇಮ ನೋಡಿಕೊಳ್ಳಬೇಕು. ಆದರೆ ಈ ಕಚೇರಿ ಎಷ್ಟೂ ಸಮರ್ಪಕವಾಗಿ ಕಾರ್ಯ ನಡೆಸುತ್ತಿಲ್ಲ. ಬೇಕಾದಷ್ಟು ನಿದರ್ಶನಗಳಿವೆ. ಶ್ರೀ ಅಸಫ ಅಲ್ಲಿಯವರು ಕೂಡ ಈ ಕಡೆ ಗಮನ ಕೊಡಲಿಲ್ಲ. ಪ್ರೊ. ಸುಂದರಮ್ ಕಾಲದಲ್ಲಿ ಎಷ್ಟೋ ವಾಸಿಯಾಗಿತ್ತು. ಈಗ ಅಧ್ವಾನ ಹೇಳತೀರದು. ಸಾಮಾನ್ಯವಾಗಿ ಈ ಕಚೇರಿಗಳ ಸಾಮಾನ್ಯ ಆಡಳಿತ ಇನ್ನೂ ಬ್ರಿಟಿಶ ಕಾಲದಲ್ಲಿದ್ದಂತೆಯೇ ಇದೆ.

ರಾಯಭಾರಿತನ ಬಹು ಪ್ರಾಮುಖ್ಯವಾದದ್ದು. ಅಮೇರಿಕೆ ಮತ್ತು ಭಾರತದ ಬಾಂಧವ್ಯ ಬೆಳೆಸಲು ತಕ್ಕ ರಾಯಭಾರಿಗಳು ಶ್ರೀ ರಾಜಾಜಿಯಂಥವರೋ ಅಥವಾ ಶ್ರೀ ಕೆ. ಎಂ. ಮುನಶಿಯಂಥವರೋ ಆಗಬೇಕು ಸರ್. ಎಸ್. ರಾಧಾಕೃಷ್ಣನ್ನರು ಬಂದರೂ ಪರವಾಯಿಲ್ಲ. ಆಗಲೀಗ ಸಂಸ್ಕೃತಿ, ರಾಜಕೀಯ ಎರಡೂ ಬೆಳಗಲು ಹೆಚ್ಚು ಸಾಧ್ಯವಾದೀತು.

ಕೂಲಿಕಾರ ರಂಗ

ಫ್ರೆಂಚ ಕೂಲಿಕಾರನ ಸ್ಥಿತಿಗತಿ

ಹಿಂದೀ ಕೂಲಿಕಾರರ ಪ್ರತಿನಿಧಿ ಯಾರು ?

ಅಂತರ ರಾಷ್ಟ್ರೀಯ ಕೂಲಿಕಾರ ಸಂಸ್ಥೆಯ ರಸಾಯನ ಉದ್ಯಮಗಳ ಸಮಿತಿಯ ಸಭೆಗೆ ಹಿಂದೀ ಪ್ರತಿನಿಧಿಯಾಗಿ ಪ್ಯಾರಿಸಿಗೆ ಹೋದ ಡಾ. ಸುರೇಶಚಂದ್ರ ಬ್ಯಾನರ್ಜಿಯವರು ಅಮೃತ ಬಜಾರ ಪತ್ರಿಕೆಯಲ್ಲಿ ಫ್ರೆಂಚ ಕೂಲಿಕಾರನ ಸ್ಥಿತಿಗತಿಗಳನ್ನು ಕುರಿತು ಕೆಲ ಮಾತು ಬರೆದಿದ್ದಾರೆ. ಹಿಂದೀ ಕೂಲಿಕಾರನು ಸ್ವಾಭಾವಿಕವಾಗಿ ಆಸಕ್ತಿ ತೋರಬಹುದಾದ ಈ ವಿಷಯದ ಕೆಲವಂಶವನ್ನು ಇಲ್ಲಿ ಎತ್ತಿ ಕೊಡಲಾಗಿದೆ.

× × ×

ಫ್ರೆಂಚ ಕೂಲಿಕಾರರ ರಾಷ್ಟ್ರೀಯ ಸಂಘಟನೆಗಳು ಮೂರಿವೆ. ಅವುಗಳಲ್ಲಿ (೧) ಅತಿ ದೊಡ್ಡದೆಂದರೆ ೩೦ ಲಕ್ಷ ಸದಸ್ಯರುಳ್ಳ ಜನರಲ್ ಕಾನ್ ಫೆಡರೇಶನ್ ಆಫ್ ಲೇಬರ್ (ಸಿ. ಜಿ. ಟಿ.) ಇದು ಕಮ್ಯುನಿಸ್ಟರ ಹಿಡಿತದಲ್ಲಿದೆ (೨) ಈ ಸಂಸ್ಥೆಯೊಡನೆ ಈಚೆಗಿನ ವರೆಗೆ ಸಹಕರಿಸಿ ನಡೆದು ಈಗ ಕಮ್ಯುನಿಸ್ಟರ ರಶಿಯಾ ದಾಸ್ಯಕ್ಕೆ ಬೇಸತ್ತು ಬೇರಾಗಿರುವ ಸಾಮ್ಯವಾದಿಗಳ ಕೈವಾಡವುಳ್ಳ ಕೂಲಿಕಾರ ಶಕ್ತಿ ಸಂಘ (ಸಿ. ಜಿ. ಟಿ. ಎಫ್. ಓ.) ಎರಡನೆ ಸ್ಥಾನದಲ್ಲಿದ್ದು ಅದರ ಸದಸ್ಯತ್ವ ೧೫ ಲಕ್ಷ. (೩) ಕ್ರಿಶ್ಚನ್ ಕೂಲಿಕಾರ ಸಂಘ (ಸಿ. ಎಫ್ ಟಿ. ಸಿ.) ಮೂರನೆಯದು ಅದರ ಸದಸ್ಯರು ಸಾಧಾರಣ ೧೦ ಲಕ್ಷ. ಮೊದಲನೆ ಎರಡು ಸಂಸ್ಥೆಗಳು ಧರ್ಮದೊಡನೆ ಯಾವ ಸಂಪರ್ಕ ಇಟ್ಟುಕೊಂಡಿಲ್ಲ. ಮೂರನೆಯದರಲ್ಲಿ ಧಾರ್ಮಿಕ ಛಾಯೆಯಿದೆ.

× × ×

ಕೂಲಿಕಾರರ ಆರ್ಥಿಕ ಸ್ಥಿತಿಯನ್ನು ಅರಿತುಕೊಳ್ಳಲು ಜವಳಿ ಕೂಲಿಕಾರರ ಆದಾಯವನ್ನು ಉದಾಹರಿಸಬಹುದು. ಗಂಡಸು ಹೆಂಗಸರಿಗಿಬ್ಬರಿಗೂ ಜವಳಿ ಉದ್ಯೋಗದಲ್ಲಿ ಸಮಾನ ಕೂಲಿ ದೊರೆಯುತ್ತದೆ. ನೂಲುವ ಭಾಗದಲ್ಲಿ ನೂರಕ್ಕೆ ೮೦ ರಷ್ಟು ಮತ್ತು ನೇಯುವ ಭಾಗದಲ್ಲಿ ನೂರಕ್ಕೆ ೪೦ ರಷ್ಟು ಹೆಂಗಸರಿದ್ದಾರೆ. (ಹಿಂದುಸ್ಥಾನದಲ್ಲಿ ನೇಯುವ ಹೆಂಗಸರೆ ಇಲ್ಲ.) ವಾರಕ್ಕೆ ೪೦ ತಾಸು ಕೆಲಸ ಮಾಡುತ್ತಾರೆ. ಶನಿವಾರ, ರವಿವಾರ ರಜೆ. ದಿನಕ್ಕೆ ಎಂಟು ತಾಸು ಕೆಲಸ. ಬುದ್ಧಿವಂತ ನೇಕಾರ ತಿಂಗಳಿಗೆ ಸುಮಾರು ೨೦೦ ರೂಪಾಯಿ ದುಡಿಯುತ್ತಾನೆ. ನೂಲುವವನ ಕೂಲಿ ಸುಮಾರು ೧೫೦—೧೬೦ ರೂಪಾಯಿ ಆಗುವದು.

\+ + +

ಹಿಂದುಸ್ಥಾನದಲ್ಲಿ ಇನ್ನೂ ಪ್ರಾರಂಭಾವಸ್ಥೆಯಲ್ಲಿರುವ ಸಾಮಾಜಿಕ ಭದ್ರತೆಯ ಯೋಜನೆಗಳು ಫ್ರಾನ್ಸಿನಲ್ಲಿ ಬಹಳ ಮುಂದುವರಿದಿವೆ. ಸ್ವತಃ ಕೂಲಿಕಾರನ ಸಂಬಳದಲ್ಲಿ ನೂರಕ್ಕೆ ೬ ರಷ್ಟನ್ನು ಮುರಿದುಕೊಂಡು ಸಾಮಾಜಿಕ ಭದ್ರತೆಯ ನಿಧಿಗೆ ಕೊಡಲಾಗುತ್ತದೆ ಆದರೆ ಒಡೆಯನು ಆ ನಿಧಿಗೆ ಈ ಕೆಳಗಿನಂತೆ (ದಿನಗೂಲಿಯನ್ನು ಬಿಟ್ಟು) ಕೊಡುತ್ತಾನೆ: (೧) ಕೂಲಿ ಹಣದ ನೂರಕ್ಕೆ ೧೪ ರಷ್ಟು ಕುಟುಂಬ ಭತ್ತೆ. (೨) ನೂರಕ್ಕೆ ೧೦ ರಷ್ಟು ವಿಮೆಗೆ (೩) ನೂರಕ್ಕೆ ೩ ರಷ್ಟು ಅಪಘಾತ ವಿಮೆಗೆ (೪) ನೂರಕ್ಕೆ ೫ ರಷ್ಟು ವಾರ್ಷಿಕ ರಜಾ ದಿನಗಳಿಗಾಗಿ. (೫) ನೂರಕ್ಕೆ ೧೦ ರಷ್ಟು ಆರೋಗ್ಯ ರಕ್ಷಣೆಗಾಗಿ ಅರ್ಥಾತ್ ನಿರುದ್ಯೋಗ ವಿಮೆ ಹೊರತು ಮತ್ತೆಲ್ಲ ಸೌಕರ್ಯ ಫ್ರೆಂಚ ಕೂಲಿಕಾರನಿಗಿದೆ.

೧೪ ವರ್ಷಕ್ಕಿಂತ ಕೆಳಗಿನ ಕೂಲಿಕಾರರಿಗೆ ವರ್ಷಕ್ಕೆ ೪ ವಾರ, ೨೧ ವಯಸ್ಸಿನ ವರೆಗಿನವರಿಗೆ ೩ ವಾರ, ಪ್ರೌಢರಿಗೆ ವರ್ಷಕ್ಕೆ ೨ ವಾರ ಸಂಬಳ ಸಹಿತ ರಜೆಯುಂಟು ಬಸಿರಿ ಹೆಂಗಸರಿಗೆ ಹಡೆಯುವ ಮೊದಲು ೬ ವಾರ, ಹಡೆದ ಮೇಲೆ ೮ ವಾರ ಸಂಬಳ ಸಹಿತ ರಜೆ.

ಜಡ್ಡಾದರೆ ಜಡ್ಡಾದ ೩ನೆ ದಿನದಿಂದ ಕೂಲಿಕಾರನಿಗೆ ದಿನಗೂಲಿಯಲ್ಲಿ ನೂರಕ್ಕೆ ೬೦ ರಷ್ಟನ್ನು ಕೊಡಲಾಗುತ್ತದೆ. ಇಂಥ ಡಾಕ್ಟರರ ಕಡೆಗೇ ಹೋಗಬೇಕೆಂಬ ನಿರ್ಬಂಧ ಹಾಕದೆ ಅವನ ಡಾಕ್ಟರನ ಮತ್ತು ಔಷಧದಂಗಡಿಯ ಬಿಲ್ಲಿನಲ್ಲಿ ನೂರಕ್ಕೆ ೮೦ ರಷ್ಟನ್ನು ನಿಧಿಯಿಂದ ಕೊಡಲಾಗುತ್ತದೆ.

ವೃದ್ಧಾಪ್ಯದ ವಿರಾಮ ವೇತನ ವರ್ಷಕ್ಕೆ ೨೪೦೦೦ ಫ್ರಾಂಕ್ [೪೦೦ ರೂಪಾಯಿ] ಸಿಗುವದು.

× × ×

ಒಟ್ಟಿನ ಮೇಲೆ ಫ್ರೆಂಚ ಕೂಲಿಕಾರನ ಜೀವನ ಮಟ್ಟ ಹಿಂದುಸ್ಥಾನದಲ್ಲಿರುವದಕ್ಕಿಂತ ಎಷ್ಟೋ ಮೇಲಾಗಿದೆಯೆಂದು ಡಾ. ಬ್ಯಾನರ್ಜಿ ಹೇಳುತ್ತಾರೆ. ಪ್ಯಾರಿಸ್ ಕೂಲಿಕಾರನಿಗಿರುವ ಮೂರು ಕೋಣೆಗಳ ಮನೆ ಸುಂದರವಾಗಿದ್ದು ಅದನ್ನು ಒಡೆಯನೇ ಕಟ್ಟಿಸಿಕೊಟ್ಟಿರುತ್ತಾನೆ. ಅದರ ಮುಂದೆ ಕಾಯಿಪಲ್ಲೆ ಹಣ್ಣು ಹಂಪಲು ಬೆಳೆಯುವಷ್ಟು ಆಕಾರದ ಸಣ್ಣ ಕೈತೋಟವಿದೆ ಇಷ್ಟೆಲ್ಲ ಸೇರಿ ತಿಂಗಳಿಗೆ ರೂ. ೧-೪-೦ ಬಾಡಿಗೆ ಕೊಟ್ಟರೆ ಸಾಕು. ಇಷ್ಟು ಒಳ್ಳೆಯ ಮನೆಗಳು ನಮ್ಮ ದೇಶದಲ್ಲಿ ಕೂಲಿಗಾರರಿಗಿರಲಿ, ಮಧ್ಯಮ ವರ್ಗದವರಿಗೆ ಕೂಡ ಸಿಗುವದಿಲ್ಲವೆಂದು ಡಾ. ಬ್ಯಾನರ್ಜಿ ಹೇಳುತ್ತಾರೆ.

\+ + +

ಆದರೂ ಫ್ರೆಂಚ ಕೂಲಿಕಾರ ಸಂತುಷ್ಟನಾಗಿರುವಂತಿಲ್ಲ ದುಡ್ಡಿದ್ದವರು ಅವನಿಗಿಂತಲೂ ಬಹಳ ಆರಾಮದಲ್ಲಿರುತ್ತಾರೆ. ಇದನ್ನು ಹೋಗಲಾಡಿಸಿ ತಾನು ಅವರ ಮಟ್ಟಕ್ಕೇರುವ ವರೆಗೆ ಅವನಿಗೆ ಶಾಂತಿಯಿಲ್ಲ.

ಹಿಂದೀ ಕೂಲಿಕಾರನ ಪ್ರತಿನಿಧಿ ಯಾರು ?

ಹಿಂದೀ ಕೂಲಿಕಾರರ ನಿಜವಾದ ಪ್ರತಿನಿಧಿ ಯಾರೆಂಬ ಪ್ರಶ್ನೆ ಮತ್ತೆ ವಿವಾದಕ್ಕೆಡೆಕೊಡುವಂತೆ ಕಾಣುತ್ತದೆ. ಈ ವರೆಗೆ ಪ್ರಥಮ ಸ್ಥಾನದಲ್ಲಿದ್ದ ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸ್ಸು ಕಮ್ಯುನಿಷ್ಟರ ಕೈವಾಡಕ್ಕೊಳಗಾಗಿದೆಯೆಂದು ಆರೋಪಿಸಲಾಗಿದೆ. ವರ್ಗ ಕಲಹದ ಬದಲು ವರ್ಗ ಸಾಮರಸ್ಯದ ಧ್ವಜವನ್ನು ಹಿಡಿದು, ಕಾಂಗ್ರೆಸ್ಸಿನ ಆಶೀರ್ವಾದದಿಂದ ಹೊರಟ ಅ. ಭಾ. ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸು ಅ. ಭಾ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿಗೆ ದೊಡ್ಡ ಪ್ರತಿಸ್ಪರ್ಧಿಯಾಗಿ ನಿಂತಿದೆ. ಇವೆರಡರಲ್ಲಿ, ಸದ್ಯಕ್ಕೆ ಉತ್ಪಾದನಾಭಿವೃದ್ಧಿಯಾಗಬೇಕೆಂದು ಸರಕಾರದ ಮನಿಷೆಯಿರುವದರಿಂದ, ರಾಷ್ಟ್ರೀಯ ಟ್ರೇ. ಯೂ. ಕಾಂಗ್ರೆಸ್ಸಿಗೇ ಸರಕಾರದ ಒಲವು ದೊರೆಯುವಂತಿದೆ. ಕೆಲ ದಿನಗಳ ಹಿಂದೆ ಇವೆರಡು ಸಂಸ್ಥೆ

...೧೩ ನೇ ಪುಟ ನೋಡಿರಿ

ಕರ್ನಾಟಕ

ಧಾರವಾಡ

ಸರಕಾರದಿಂದ ಧಾರವಾಡಕ್ಕೆ ಗೋದಿ, ಕೆಂಪು ಜೋಳ, ಅಕ್ಕಿ ಬಂದಿದ್ದು ಜೂನ ೧ ನೇ ತಾ. ದಿಂದ ಅಗ್ಗ ದರದ ಅಂಗಡಿಗಳನ್ನು ತೆರೆದು ಅವು ಗಳನ್ನು ಕೊಡುವರೆಂದು ತಿಳಿಯುತ್ತದೆ. ಈ ಬಗ್ಗೆ ಪುನಃ ಸೀದಾ ಕಾರ್ಡುಗಳು ಜಾರಿಯಲ್ಲಿ ಬರುವ ಸಂಭವವಿದೆ.

ಹುಬ್ಬಳ್ಳಿಯ ತರುಣ ಡಾಕ್ಟರರಾದ ಶ್ರೀ ಎಂ. ಎಸ್. ಹನಸೆಟ್ಟಿ ಅವರು ಇದೇ ವರ್ಷ ಜರುಗಿದ ಎಂ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕದಲ್ಲಿ ಈ ಡಿಗ್ರಿ ಸಂಪಾದಿಸಿದವರು ಡಾ. ಜಿ ವಿ. ಜೋಶಿ ಅವರ ನಂತರ ಇವರೇ. ಇವರು ನಿಪ್ಪಾಣಿಯವರಿದ್ದು ಅಜ್ಜಗನ್ನವರಿದ್ದಾರೆ

ಹಾನಗಲ್ಲ ತಾಲೂಕು ಶಿಕ್ಷಣದಲ್ಲಿ ಬಹಳ ಹಿಂದುಳಿದಿದೆ. ಈಗಿನ ಸರಕಾರವು ೧೦೦೦ ಜನ ಸಂಖ್ಯೆಯುಳ್ಳ ಹಳ್ಳಿಗಳಿಗೆ ಮಾತ್ರ ಒತ್ತಾಯದ ಶಿಕ್ಷಣದ ನಿಯಮವನ್ನು ಅನ್ವಯಿಸಿದೆ. ಆದರೆ ಈ ತಾಲೂಕು ಮಲೆನಾಡಾದ್ದರಿಂದ ಹಳ್ಳಿಗಳ ನಡುವಿನ ಅಂತರ ೧-೧॥ ಮೈಲು ಇದ್ದು ೧೦೦೦ ಜನರಿರುವ ಹಳ್ಳಿಗಳು ಬಹಳ ವಿರಳ ಇವೆ. ಈ ತಾಲೂಕಿನಲ್ಲಿ ೧೮೦ ಹಳ್ಳಿಗಳಿದ್ದು ಒಂದೊಂದರ ಜನಸಂಖ್ಯೆಯು ೧೦೦ ರಿಂದ ೭೦೦ ರ ವರೆಗೆ ಇರುವದು. ಆದ್ದರಿಂದ ಈ ತಾಲೂಕಿನ ೫೦೦ ಜನಸಂಖ್ಯೆಯ ಹಳ್ಳಿಗಳಿಗೇ ಒತ್ತಾಯದ ಶಿಕ್ಷಣದ ನಿಯಮವನ್ನು ಅನ್ವಯಿಸಿ ಸರಕಾರವು ಇಲ್ಲಿಯ ಅಜ್ಞಾನವನ್ನು ನಿವಾರಿಸಬೇಕು ಎಂದು ಮುಂತಾಗಿ ಜಿ. ಆರ್. ದೇಸಾಯಿ, ಶೇಷಗಿರಿ ಎಂಬವರು ಅರಿಕೆ ಮಾಡಿಕೊಂಡಿದ್ದಾರೆ.

ಅಲ್ಲಾಬಕ್ಷ ಚಿಂದಿ ಎಂಬ ಆರೋಪಿಯು ತಾ. ೧೪ ರಂದು ಕೋರ್ಟಿನಿಂದ ಹುಬ್ಬಳ್ಳಿ ಸಬ್ ಜೇಲಿಗೆ ಒಯ್ಯಲ್ಪಡುತ್ತಿರುವಾಗ ಹಾದಿಯಲ್ಲಿ ಪೋಲೀಸರ ಕೈಯಿಂದ ತಪ್ಪಿಸಿಕೊಂಡು ಮಲ್ಲಿಕಾರ್ಜುನ ಸಿನೇಮಾ ಗೋಡೆಯನ್ನು ಜಿಗಿದು ಓಡಿ ಹೋಗುತ್ತಿದ್ದನ್ನು ಹುಬ್ಬಳ್ಳಿ ತಾಲೂಕ ಪೋಲಿಸ ಮತ್ತು ಮಸಾಬ ಇವನು ನೋಡಿ ಅವನ ಬೆನ್ನುಹತ್ತಿ ಸಂಯುಕ್ತ ಕರ್ನಾಟಕ ಕಚೇರಿಯ ಹತ್ತರ ಅವನನ್ನು ಹಿಡಿದು ಪೋಲೀಸರ ವಶ ಮಾಡಿದನು.

ಹುಬ್ಬಳ್ಳಿಯ ಶ್ರೀ ಮೂರುಸಾವಿರಪ್ಪ ಅಣ್ಣಾ ಹತ್ತೀಕಾಳ ಇವರು ತಮ್ಮ ಚಿ ಚನಬಸಪ್ಪನ ವಿವಾಹ ಮಹೋತ್ಸವದ ಕಾಲದಲ್ಲಿ ಜಗದ್ಗುರು ಗಂಗಾಧರ ಕಾಮರ್ಸಕಾಲೇಜಕ್ಕೆ ೧೦೦೧ ರೂ ದೇಣಿಗೆ ಸಲ್ಲಿಸಿದ್ದಾರೆ. ಕೆ. ಎಲ್. ಇ. ಸೊಸಾಯಿಟಿಯವರು ಈ ಬಗ್ಗೆ ತಾವು ಚಿರ ಋಣಿಯಿರುವದಾಗಿ ತಿಳಿಸುತ್ತಾರೆ.

ಹುಬ್ಬಳ್ಳಿಯಲ್ಲಿ ತಾ ೧೨ ರ ಸಂಜೆ ೫ ಗಂಟೆಗೆ ರೇಲ್ವೆ ಜನರ ಸಭೆಯು ಮೌಲಾಲಿ ಮೈದಾನದಲ್ಲಿ ಸೇರಿ, ಹುಬ್ಬಳ್ಳಿ ಪೇಟೆಯಲ್ಲಿ ಆಹಾರಧಾನ್ಯಗಳ ಧಾರಣೆ ವಿಪರೀತವಾಗಿ ಏರುತ್ತಿರುವದನ್ನು ತಡೆಯಲು ಸರಕಾರದವರು ಅಸಮರ್ಥರಾದುದನ್ನು ನಿಷೇಧಿಸಲಾಯಿತು. ರೇಲ್ವೆ ಧಾನ್ಯ ಅಂಗಡಿಗಳಲ್ಲಿ ಕೆಂಪುಜೋಳ ಗೋವಿನಜೋಳ ಹಾಗು ಬಾರ್ಲಿಗಳನ್ನು ಒತ್ತಾಯದಿಂದ ಕೊಡುತ್ತಿರುವದನ್ನು ಖಂಡಿಸಲಾಯಿತು.

ಸರಕಾರದವರು ಧಾರವಾಡ ಜಿಲ್ಲೆಯ ರೈತರಿಗೆ ಸಾಕಷ್ಟು ಬಟಾಟೆ ಬೀಜಗಳನ್ನು ಮುಂಬರುವ ಹಂಗಾಮಿನಲ್ಲಿ ಬಿತ್ತಲಿಕ್ಕೆ ಸುಲಭ ಬೆಲೆಗೆ ಪೂರೈಸುವ ಉದ್ದೇಶದಿಂದ ೧೫೦೦ ಚೀಲ ಬೀಜಗಳನ್ನು ಪುಣೆಯಿಂದ ಕಳಿಸುವವರಿದ್ದಾರೆ. ಪ್ರತಿಯೊಂದು ಚೀಲಕ್ಕೆ ೪೦ ರೂ ಯಂತೆ ಬೀಳುವದು ಎಂದು ಧಾರವಾಡ ಜಿಲ್ಲಾ ಒಕ್ಕಲತನ ಅಧಿಕಾರಿಗಳು ತಿಳಿಸುತ್ತಾರೆ.

ಗದಗ ತಾಲೂಕಿನ ಪ್ರಾಥಮಿಕ ಶಿಕ್ಷಕರ ಮಾರ್ಚತಿಂಗಳ ಪಗಾರವು ಮೇ ತಿಂಗಳ ಮುಗಿಯುತ್ತ ಬಂದಿದ್ದರೂ ಇನ್ನೂ ಸಿಕ್ಕಿರುವದಿಲ್ಲವೆಂದು ದೂರುಬಂದಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಿಸಬೇಕು.

ಹುಬ್ಬಳ್ಳಿಯ ರೇಲ್ವೆ ವರ್ಕಶಾಪದಲ್ಲಿಯ ವಾರ್ಡ ಮತ್ತು ವಾಚ್ ಇನ್ಸಪೆಕ್ಟರನಾದ ಬಿ. ಎ. ಪೋಟಾ ಎಂಬವನನ್ನು ಲಂಚತಿಂದ ಆರೋಪದ ಮೇಲೆ ಹುಬ್ಬಳ್ಳಿ ಪೋಲೀಸರು ತಾ ೧೪ ರಂದು ಬಂಧಿಸಿದ್ದಾರೆ. ಆರೋಪಿಯು ತನ್ನ ಕೈಕೆಳಗಿನ ನಾಚಮನ್ನನಾದ ಗುರುನಾಥ ಎಂಬವನಿಗೆ ರಜೆ ಕೊಡುವದಕ್ಕಾಗಿ ಅವನಿಂದ ೧೦ ರೂಪಾಯಿ ಲಂಚ ತೆಗೆದುಕೊಂಡಿದ್ದನಂತೆ. ಆರೋಪಿಯನ್ನು ಜಾಮೀನಿನ ಮೇಲೆ ಬಿಡಲಾಗಿದೆ.

ಹುಬ್ಬಳ್ಳಿಯಲ್ಲಿ ಮೇ ತಾ ೧೯ ರ ಮುಂಜಾನೆ ೯ ಗಂಟೆಯಿಂದ ಅಕ್ಕಿಹೊಂಡದ ಮೇಲೆ ಉತ್ತಮ ವಿಜಾಪುರದ ಜೋಳ ಚಟ್ಟಿಗೆ ೨ ರೂ ೬ ಆ ಪ್ರಕಾರ ಹುಬ್ಬಳ್ಳಿ ಮಾಮಲೇದಾರರ ಹುಕುಮಿನಂತೆ ಶ್ರೀ ಬಸಪ್ಪಾ ಬ್ಯಾಳಿ ಇವರು ಮಾರುವರು. ನಾಗರಿಕರು ತಮ್ಮ ತಮ್ಮ ರೇಶನ್ನ ಕಾರ್ಡು ತಂದು ಒಯ್ಯಬೇಕೆಂದು ಈ ಮೂಲಕ ತಿಳಿಸಿದೆ.

ಬೆಳಗಾವ

ಬೆಳಗಾವಿಯ ಸಮಾಜವಾದಿ ಕಾರ್ಯಕರ್ತರಾದ ಅಣ್ಣಾ ದೇಶಪಾಂಡೆಯವರು ತಾ ೧೭ ರಂದು ಖಾನಾಪುರದಲ್ಲಿ ಸಾರ್ವಜನಿಕ ಸುರಕ್ಷತತೆ ಕಾಯದೆ ಅನ್ವಯ ಬಂಧಿಸಲ್ಪಟ್ಟಿದ್ದಾರೆ.

ಮಹಾತ್ಮಾ ಗಾಂಧಿಯವರ ನಿಧನದ ನಂತರ ಬೆಳಗಾವಿ ಜಿಲ್ಲೆಯಲ್ಲಿ ಆದ ಹಾನಿಯ ವಿವರವನ್ನು ಜಿಲ್ಲಾ ಪರಿಹಾರ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಮ್. ಜಿ. ಹುಕ್ಕೇರಿಕರರು ಪ್ರಕಟಿಸಿದ್ದಾರೆ ಅದರ ಸಾರ ಕೆಳಗಿನಂತೆ ಇದೆ...

ಅಥಣಿ ತಾಲೂಕಿನ ೩೧ ಊರುಗಳಲ್ಲಿ ೮೪೭ ಮನೆಗಳು ಕೊಳ್ಳೆ ಲೂಟಿಗೆ ಗುರಿಯಾಗಿ ೧೫ ಲಕ್ಷ ರೂ ಹಾನಿ ಸಂಭವಿಸಿತು ಮತ್ತು ೬೦೦ ಜನರು ನಿರಾಶ್ರಿತರಾದರು.

ಚಿಕ್ಕೋಡಿ ತಾಲೂಕಿನ ೪೭ ಊರುಗಳಲ್ಲಿ ೨೭೫ ಮನೆಗಳು ಕೊಳ್ಳೆ ಲೂಟಿಗೆ ಗುರಿಯಾಗಿ ೩೦ ಲಕ್ಷ ರೂ ಹಾನಿ ಸಂಭವಿಸಿ ೧೨೦೦ ಜನರು ನಿರಾಶ್ರಿತರಾದರು.

ಹುಕ್ಕೇರಿ ತಾಲೂಕಿನ ೩೦ ಊರುಗಳಲ್ಲಿ ೧೩೦ ಮನೆಗಳು ಕೊಳ್ಳೆ ಲೂಟಿಗೆ ಗುರಿಯಾಗಿ ೧೨ ಲಕ್ಷ ರೂ ಹಾನಿ ಸಂಭವಿಸಿ ೫೦೦ ಜನರು ನಿರಾಶ್ರಿತರಾಗಿದ್ದಾರೆ.

ಬೆಳಗಾವಿ ತಾಲೂಕಿನ ೭ ಊರುಗಳಲ್ಲಿ ೧೫ ಮನೆಗಳು ಕೊಳ್ಳೆ ಲೂಟಿಗೆ ಗುರಿಯಾಗಿ ೩ ಲಕ್ಷ ರೂ ಹಾನಿಯಾಗಿ ೧೦೦ ಜನರು ನೆಲೆದಪ್ಪಿ ನಿಂತಿದ್ದಾರೆ.

ಚಂದಗಡ ತಾಲೂಕಿನ ೧೦ ಊರುಗಳಲ್ಲಿ ೨೫ ಮನೆಗಳು ಹಾಳಾಗಿ ೮ ಲಕ್ಷ ರೂ ಹಾನಿಯೊದಗಿ ೨೦೦ ಜನರು ನೆಲೆಗಾಣದಿದ್ದಾರೆ. ಸರಕಾರದವರು ಸಹಾಯ ಕೊಡುವದಾಗಿ ಸಾರಿದ್ದರೂ ಈ ವರೆಗೆ ಯಾರಿಗೂ ಈ ಸಹಾಯ ದೊರಕಿಲ್ಲ. ಜಾಮೀನಿನ ಮೇಲೆ ಬಿಡಲ್ಪಟ್ಟ ಆರೋಪಿಗಳು ಪುನಃ ಉಪಟಳ ನಡೆಸಿದ ತಕರಾರು ಬರುತ್ತಿವೆ. ಮುಂದರನ್ನು ಸಕಾಲದಲ್ಲಿ ನಿಗ್ರಹಿಸದಿದ್ದರೆ ಪರಿಸ್ಥಿತಿ ಮತ್ತೆ ಹದಗೆಡುವ ಸಂಭವವಿದೆ.

ವಿಜಾಪೂರ

ಸಿಂದಿಗಿ ತಾಲೂಕಿನ ಒಂದು ಹಳ್ಳಿಯಲ್ಲಿ ೩೦ ನಿಜಾಮ ಪೋಲೀಸರು ೩೦ ಜನ ರಜಕಾರರು ಕೊಳ್ಳೆ ಹಿಕ್ಕಾ ಬಟ್ಟಿ ಅನಾಚಾರ ಅತ್ಯಾಚಾರ ಮಾಡಿ ಸುಲಿಗೆ ಮಾಡಿ ಊರ ಗೌಡನ ಮನೆ ಹೊಕ್ಕು ಸರಕಾರಿ ಕಾಗದ ಪತ್ರ ಸುಟ್ಟು ಅನೇಕರನ್ನು ಹಿಡಿದುಕೊಂಡು ಹೋದದಲ್ಲದೆ ಕೆಲವು ಹೆಣ್ಣುಮಕ್ಕಳನ್ನೂ ಬಲಾತ್ಕಾರದಿಂದ ತೆಗೆದುಕೊಂಡು ಹೋಗಿರುವದಾಗಿ ಹೈದರಾಬಾದ ಕರ್ನಾಟಕ ಕಾಂಗ್ರೆಸ ಸಮಿತಿಯವರು ವರದಿ ಮಾಡಿದ್ದಾರೆ.

ಉತ್ತರ ಕನ್ನಡ

ಕಾರವಾರದಲ್ಲಿ ತಾ. ೧೭ ರಂದು ೫ ದೇವಾಲಯಗಳು ಹರಿಜನರಿಗೆ ತೆರೆದಿಡಲ್ಪಟ್ಟವು. ಕಾರವಾರ ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀಧರ ಕಿಣಿ, ತಾಲೂಕ ಕಾಂಗ್ರೆಸ ಕಮಿಟಿ ಅಧ್ಯಕ್ಷರಾದ ಪಿ. ಎಸ್. ಕಾಮತ ಹಾಗೂ ಶ್ರೀ. ಬಿ. ಎಸ್. ಮಾವಿನಕರ್ವೆ ಅವರು ಹರಿಜನ ಸ್ತ್ರೀ ಪುರುಷರೊಂದಿಗೆ ದೇವಾಲಯಗಳಲ್ಲಿ ಪ್ರವೇಶಮಾಡಿದರು. ಜಿಲ್ಲೆಯಲ್ಲಿ ಈ ವರೆಗೆ ೩೦ ದೇವಾಲಯಗಳು ಮುಕ್ತವಾಗಿದ್ದು ಅವುಗಳಲ್ಲಿ ಕೆಲವು ಪ್ರಾಚೀನ ಹಾಗು ಪೌರಾಣಿಕ ಕಾಲದವು ಇರುವವು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯ ಸಭೆಯೊಂದು ತಾ. ೧೨ ರಂದು ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಮಂಗಳೂರಲ್ಲಿ ಕೂಡಿತ್ತು. ಹಲವು ಸದಸ್ಯರು ಧಾನ್ಯ ಪರಿಹಾರದ ಅಂಗಡಿಗಳು ಸಾಕಷ್ಟಿಲ್ಲವೆಂದೂ ಆಹಾರ ಪ್ರಮಾಣವನ್ನು ೪ ಔಂಸು ಹೆಚ್ಚಿಸಬೇಕೆಂದೂ ಹೇಳಿದರು. ಜಿಲ್ಲೆಯಲ್ಲಿ ತೆರೆಯಬೇಕಾದ ೯೮೦ ಅಂಗಡಿಗಳಲ್ಲಿ ಈಗಾಗಲೇ ೩೪೯ ಅಂಗಡಿಗಳು ತೆರೆಯಲ್ಪಟ್ಟವೆ.

ಸಹಕಾರಿ ಸಂಘಗಳ ಅಸಿಸ್ಟಂಟ ರಜಿಸ್ಟ್ರಾರರಾದ ಶ್ರೀ. ಬಿ. ಎ. ಪಾಟೀಲರನ್ನು ಲೀನ ಹೊಂದಿದ ದಕ್ಷಿಣ ಸಂಸ್ಥಾನಗಳ ಸಹಕಾರೀ ವಿಶೇಷಾಧಿಕಾರಿಯೆಂದು ಮುಂಬಯಿ ಸರಕಾರದವರು ನೇಮಿಸಿರುವರು. ಅವರು ಎಲ್ಲ ದಕ್ಷಿಣ ಸಂಸ್ಥಾನಗಳಲ್ಲಿ ಸಂಚರಿಸಿ ಸಹಕಾರಿ ಆಂದೋಲನ ಅಭಿವೃದ್ಧಿಗೊಳಿಸುವ ಬಗ್ಗೆ ಮುಂಬಯಿ ಸರಕಾರಕ್ಕೆ ವರದಿಯೊಪ್ಪಿಸುವರು.

ಬೆಂಗಳೂರು—ಮೈಸೂರು

ಕ್ರಮಕ್ರಮವಾಗಿ ನಿಯಂತ್ರಣ ಮಾಡುವ ಧೋರಣಕ್ಕನುಸರಿಸಿ ಮೈಸೂರ ಸರಕಾರದವರು ಈ ಜುಲೈ ೧ ರಿಂದ ಬೆಂಗಳೂರ, (ಸಿವ್ಹಿಲ ಸ್ಟೇಶನ್ ಸಹಿತ) ಮೈಸೂರ, ಕೋಲಾರ ಬಂಗಾರ ಗಣಿಯ ಕ್ಷೇತ್ರ, ದಾವಣಗೆರೆ ಈ ಪಟ್ಟಣಗಳ ಹೊರತಾಗಿ ಉಳಿದ ನಗರಗಳಲ್ಲಿ ಕಾಯದೆಯಿಂದ ಹೇರಿದ ಸೀದಾವನ್ನು ರದ್ದುಪಡಿಸುವ ಆಜ್ಞೆ ವಿಧಿಸಿದ್ದಾರೆ.

ಅಂಗಡಿ ನೌಕರರ ಕಾಯದೆಯನ್ನು ಜಾರಿಯಲ್ಲಿ ತರದೆ ಇದ್ದುದರ ನಿಷೇಧಾರ್ಥವಾಗಿ ಬೆಂಗಳೂರಿನ ಹೋಟೆಲ ಕೆಲಸಗಾರರು ತಾ. ೧೭ ರ ಮುಂಜಾವಿನಿಂದ ಒಂದು ದಿವಸದ ಸಂಪು ಹೂಡಿದ್ದರು.

ಹಾಸನ ಸ್ಕೌಟ ಸಂಘದವರು ಕಸ್ತೂರವಳ್ಳಿಯಲ್ಲಿ ಇದೇ ತಾ. ೨೨ ರಿಂದ ಒಂದು ವಾರ ಗ್ರಾಮಾಭ್ಯುದಯ ಶಿಬಿರವನ್ನು ಏರ್ಪಡಿಸುತ್ತಾರೆಂದು ಜಿಲ್ಲಾ ಟೆಕ್ನಿಕಲ್ ಅಸಿಸ್ಟಂಟರಾದ ಶ್ರೀ ಹೊನ್ನಾಡಿಕೆ ಹರಿಯಪ್ಪನವರು ತಿಳಿಸುತ್ತಾರೆ.

ಅಖಿಲ ಭಾರತ ಹರಿಜನ ಸೇವಕ ಸಂಘದ ಮಧ್ಯವರ್ತಿ ಮಂಡಲದ ಸಭೆಯು ಕೆಂಗೇರಿಯಲ್ಲಿ ತಾ. ೧೫ ರಂದು ಶ್ರೀ ಭಾಷ್ಯಂ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸೇರಿತ್ತು. ಶ್ರೀಮತಿ ಲೀಲಾವತಿ ಮುನಶಿ, ಶ್ರೀ ಎ. ವ್ಹಿ. ಥಕ್ಕರ, ಶ್ರೀ ಎ. ಕೆ. ಮೆನನ್ ಮೊದಲಾದ ೧೩ ಸಭಾಸದರು ಉಪಸ್ಥಿತರಿದ್ದರು. ಮೈಸೂರು ಸರಕಾರದವರು ೧೩ ಲಕ್ಷ ರೂ. ತೆಗೆದಿಟ್ಟು ಹರಿಜನರಿಗೆ ಮನೆಗಳನ್ನು ಒದಗಿಸುವ ಕಾರ್ಯ ಕೈಕೊಂಡಿರುವದನ್ನು ಸಭೆಯು ಅವಗಾಹನೆಗೆ ತರಲಾಯಿತು.

ಹಾಸನದಲ್ಲಿ ಕಸಗೂಡಿಸುವವರ ಮುಷ್ಕರವು ಇನ್ನೂ (ತಾ. ೧೩) ನಡೆದಿದ್ದು ಪೌರ ಸಭೆಯವರು ಮೈಸೂರಿಂದ ೨೫ ಕಸಗೂಡಿಸುವ ಜನರನ್ನು ಕರೆಸಿಕೊಂಡು ಕೆಲಸ ನಡೆಸಿರುವರು. ಮೈಸೂರಿಂದ ಬಂದವರಿಗೂ ಸ್ಥಳೀಯರಿಗೂ ಘರ್ಷಣೆಯಾಗುವ ಸಂಭವವಿತ್ತು. ಪೋಲೀಸ ಇನಸ್ಪೆಕ್ಟರರು ಜಾಣತನದಿಂದ ಅದನ್ನು ತಪ್ಪಿಸಿದರು.

ಮೈಸೂರು ಶೀಘ್ರದಲ್ಲಿಯೇ ಬ್ರಿಟನ್‌ದಿಂದ ೧೦ ಹೊಸ ರೇಲ್ವೆ ಇಂಜೀನಗಳನ್ನು ಪಡೆಯುವದೆಂದೂ ಮತ್ತು ಹೆಚ್ಚು ಇಂಜಿನುಗಳಿಗಾಗಿ ಹಿಂದುಸ್ಥಾನ ಸರಕಾರದ ಮುಖಾಂತರ ಆರ್ಡರನ್ನು ಕೊಟ್ಟಿದೆಯೆಂದೂ ತಿಳಿದುಬರುತ್ತದೆ. ರೇಲ್ವೆ ಇಂಜೀನುಗಳನ್ನೂ ವ್ಯಾಗೀನುಗಳನ್ನೂ ಇನ್ನಿತರ ವಸ್ತುಗಳನ್ನೂ ದೊರಕಿಸಲು ಹಿಂದುಸ್ಥಾನ ಸರಕಾರವು ಮೈಸೂರಿಗೆ ಎಲ್ಲ ಬಗೆಯ ಸಹಾಯ ಕೊಡುವದೆಂದು ಡಾ. ಜಾನ ಮಥಾಯಿ ಅವರು ಆಶ್ವಾಸನವಿತ್ತಿದ್ದಾರೆಂದು ತಿಳಿಯುತ್ತದೆ.

ಕನ್ನಡ ಸಂಸ್ಥಾನ

ಗಜೇಂದ್ರಗಡದಲ್ಲಿ ಕಳೆದ ೧೫ ದಿವಸಗಳಿಂದ ಕಳ್ಳರ ಉಪಟಳ ಹೆಚ್ಚಾಗಿದೆ. ತಾ ೯ ನೇ ದಿನ ಕಳ್ಳರು ಕೊಟ್ರಪ್ಪ ನೀರಲಗಿ ಅವರ ಮನೆ ಕನ್ನ ಕೊರೆದು ಸುಮಾರು ೧೫೦೦ ರೂ ಬೆಲೆಯ ಬಂಗಾರದ ಸಾಮಾನುಗಳನ್ನು ೫೦೦ ರೂಪಾಯಿಗಳನ್ನೂ ಒಯ್ದಿರುವರು.

ಸೊಂಡೂರಲ್ಲಿ ತಾ ೧೫ ರಂದು ಶ್ರೀ ಅಮಕಲ್ಲ ಗುರುಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಮ.ಬಸಪ್ಪನವರು ಭಾಷಣಮಾಡುತ್ತ, ಸೊಂಡೂರಲ್ಲಿ ಪ್ರಜೆಗಳ ಹಕ್ಕುಗಳನ್ನು ಕಸಿದುಕೊಳ್ಳುವದು ನಡೆದಿದೆಯೆಂದೂ ಸಭೆಗೆ ಬರುವವರನ್ನು ಕಡೆಗಟ್ಟುವದು ನಿಂದ್ಯವಾದುದೆಂದೂ ಈ ದಬ್ಬಾಳಿಕೆ ತೊಲಗಬೇಕಾದರೆ ಸೊಂಡೂರ ಸಂಸ್ಥಾನವು ಮದ್ರಾಸ ಅಧಿಪತ್ಯದಲ್ಲಿ ಲೀನವಾಗಬೇಕೆಂದೂ ಹೇಳಿದರು.

ತಾ. ೧೩-೫-೪೮ ನೇ ದಿನ ಶಿಗಹಟ್ಟಿ ತಾಲೂಕ ಪೇಠಕೀ ಸಂಘದ ಕಾರ್ಯಕಾರಿ ಮಂಡಳದ ಸಭೆ ಕೂಡಿ ಶ್ರೀ. ಫಕ್ಕೀರಸ್ವಾಮಿಗಳ ಜಾತ್ರೆಯ ಕಾಲಕ್ಕೆ ಪೇಠಕೀ ಸಂಘದ ವತಿಯಿಂದ ದನಗಳ ಪ್ರದರ್ಶನ ಏರ್ಪಡಿಸಬೇಕೆಂದು ಗೊತ್ತಾಯಿತು. ಎಂದಿನಂತೆ ಇಲ್ಲಿ ನೀರು ವಿಪುಲವಾಗಿದ್ದು ಊರಲ್ಲಿ ರೋಗಾದಿಗಳೇನೂ ಇಲ್ಲ. ದನಗಳು ದೊಡ್ಡ ಪ್ರಮಾಣದಲ್ಲಿ ಕೂಡಬಹುದೆಂದು ನಿರೀಕ್ಷಿಸಲಾಗಿದೆ. ಪ್ರದರ್ಶನದಲ್ಲಿ ಉತ್ತಮ ದನಗಳಿಗೆ ಪಾರಿತೋಷಕ, ಪ್ರಶಸ್ತಿ ಪತ್ರಿಕೆ ಕೊಡಲಾಗುವದು ಸಮಾರಂಭಕ್ಕೆ ಮುಂಬಯಿ ಮಂತ್ರಿಗಳನ್ನು ಆಮಂತ್ರಿಸಬೇಕೆಂದು ನಿಶ್ಚಯ ಮಾಡಿದೆ.

ಹೈದರಾಬಾದದ ಗಡಿಯ ಸಮೀಪದಲ್ಲಿರುವ ಹಿರೆ ಮಿರಜದ ಮೊದಲಿಂಬ ತಾಲೂಕಿನ ಹಳ್ಳಿಗಳಲ್ಲಿ ರಜಕಾರರ ಹಾವಳಿಯ ಮೂಲಕ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದ್ದು ಜನತೆಯಲ್ಲಿ ಅರಕ್ಷಿತತೆ ಮತ್ತು ಭೀತಿಯ ಭಾವನೆಗಳು ಹಬ್ಬಿರುವವೆಂದು ವರದಿ ಬಂದಿದೆ.

ಮಿರಜ ಡಿ. ಎಲ್. ಬಿ. ಪ್ರಾಥಮಿಕ ಶಿಕ್ಷಕರಿಗೆ ಇನ್ನೂ ಮಾರ್ಚ ಎಪ್ರಿಲ ತಿಂಗಳಗಳ ಸಂಬಳ ಸಿಕ್ಕಿಲ್ಲ. ಮಂಜೂರಾದ ಬಡತಿಯೂ ಇನ್ನೂ ದೊರೆತಿಲ್ಲ. ಆದ್ದರಿಂದ ಶಿಕ್ಷಕರು ಆಡಳಿತಗಾರರಲ್ಲಿ ತಮ್ಮ ಸಂಕಷ್ಟ ತೋಡಿಕೊಂಡಿದ್ದು ಆಡಳಿತಗಾರರು ಈಗ ಡಿ. ಎಲ್. ಬಿ. ಯ ಲೆಕ್ಕಪತ್ರ ಪರಿಶೀಲಿಸಹತ್ತಿದ್ದಾರೆ. ಪ್ರಾಥಮಿಕ ಶಿಕ್ಷಣವನ್ನು ಸರಕಾರವೇ ತನ್ನ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಶಿಕ್ಷಕರು ಅಭಿಪ್ರಾಯ ಪಡುತ್ತಿರುವರು.

ಗ್ರಾಮ ಸಧಾರಣಾ ಥಾಲು

ಕೈರಾ ಜಿಲ್ಲೆಯ ಆನಂದ ತಾಲೂಕಿನ ಕರಮಸಾದ ಎಂಬ ಹಳ್ಳಿಗೆ ಮುಂಬಯಿ ಸರಕಾರದವರು ೧೯೪೬ ನೇ ವರ್ಷದ ಸರ ಫ್ರೆಡಿಕ್ ಸಾಯಿಕ್ಸ ಗ್ರಾಮ ಸಾಧಾರಣಾ ಥಾಲು ಕೊಟ್ಟಿದ್ದಾರೆ.

೧೦೦೦ ರೂಪಾಯಿ ಬಕ್ಷೀಸು

ಈ ಕೆಳಗಿನ ಔಷಧಿಗಳಲ್ಲಿ ಗುಣವಿಲ್ಲೆಂದು ಸಿದ್ಧ ಮಾಡಿಕೊಟ್ಟಲ್ಲಿ ೧೦೦೦ ರೂ. ಇನಾಮು

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ, ಬೆಳಗಾವ

ನಪುಂಸಕತ್ವಾರಿ ಗುಳಿಗೆ

[ಷಂಢತ್ವವಿನಾಶಕ ಗುಳಿಗೆಗಳು, ಕಿಮ್ಮತ್ತು ೫ ರೂ. ಅಂ. ವೆ. ಬೇರೆ]

ಮಿತಿ ಮೀರಿದ ಕಾಮುಕ ಜೀವನ, ಸ್ವಪ್ನಾವಸ್ಥೆ, ದುಷ್ಟ ಮೈಥುನದ ಪರಿಣಾಮ ಹಾಗು ಅನೈಸರ್ಗಿಕ ಅಭ್ಯಾಸ ಮತ್ತು ಧಾತುಕ್ಷೀಣತೆ ಮುಂತಾದ ಯಾವದೇ ಕಾರಣದಿಂದ ಬಂದ ನಪುಂಸಕತ್ವ ಇಂದ್ರಿಯಶಿಥಿಲತೆ ನಾಶಮಾಡಿ ನವಜೀವನ ಮತ್ತು ಹೊಸ ಪುರುಷತ್ವ ಪ್ರಾಪ್ತ ಮಾಡಿ ಕೊಡುತ್ತದೆ. ಈ ಔಷಧ ಸೇವನೆಯಿಂದ ನಿರ್ಬಲ ಮತ್ತು ಶಿಥಿಲವಾದ ನರಗಳನ್ನು ಸಶಕ್ತವನ್ನಾಗಿ ಮಾಡಿ ೧/೪ ತಿಂಗಳಿನಾತವಾಗಿ ವೀರ್ಯವೃದ್ಧಿಯಾಗುವದು. ಪಚನಶಕ್ತಿ ಸುಧಾರಿಸಿ ಜಠರಾಗ್ನಿ ಉಜ್ವಲ ಮಾಡುತ್ತದೆ. ಬದ್ಧಕೋಷ್ಠ ಅಜೀರ್ಣ, ಪಚನಾದಿ ವಿಕಾರಗಳನ್ನು ದೂರ ಮಾಡಿ ನಿಯಮಿತ ಮಲಶುದ್ಧಿ ಮಾಡುತ್ತದೆ. ಶಾರೀರಿಕ, ಮತ್ತು ಮಾನಸಿಕ ಅಶಕ್ತತೆಯನ್ನು ಹೋಗಲಾಡಿಸಿ ಜ್ಞಾನತಂತು ಸತೇಜವನ್ನಾಗಿ ಮಾಡಿ ನವಜೀವನ ಪ್ರಾಪ್ತ ಮಾಡಿ ಕೊಡುತ್ತದೆ. ಎಷ್ಟೋ ಔಷಧಿಗಳನ್ನು ತೆಗೆದುಕೊಂಡು ನಿರಾಶರಾದ ಪುರುಷರು ಸಹ ೧೯-೨೫ ರಿಂದ ಈ ಔಷಧದಿಂದ ಏಳು ದಿವಸಗಳಲ್ಲಿ ಪೂರ್ಣ ಗುಣ ಹೊಂದಿರುವರು. ಈ ವಿಷಯವಾಗಿ ಆದ ಎಲ್ಲ ಪತ್ರವ್ಯವಹಾರವನ್ನು ಗುಪ್ತವಾಗಿರಿಸಲ್ಪಡುವದು. ಅನುಪಾನ ಪತ್ರಿಕೆ ಔಷಧದ ಕೂಡ ವಚ್ಚ ವಿಷಮ ಇಲ್ಲ.

ಪತ್ತೆ— ವೈದ್ಯರಾಜ ಪಿ. ಬಿ. ಶಿದನಾಳ

ಪೋಷ್ಟ ಬಾಕ್ಸ ೧೩೪೯(ಕೆ ವ್ಹಿ.) ಬಸವನಗಲ್ಲಿ ಬೆಳಗಾವಿ-

ಹಿಂದುಸ್ಥಾನ

ಮುಂಬಯಿ

ಕಾಂಗ್ರೆಸ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಶಿರೋಡೆ (ಅವರ್ಸು ಜಾನಾದ) ಲ್ಲಿ ಜಾ ಹಾಸಿ ಶಸ್ತ್ರ ಅಧಿವೇಶನದ ಉದ್ಘಾಟನೆ ಮಾಡುವಾಗ ತಾ. ೧೬ ರಂದು ವಿಮಾನದಿಂದ ಶಿರೋಡೆಗೆ ತೆರಳಿದರು. ವಿನಾಯಕ ಚಾವಂದಿಯಿಂದ ಹುಟ್ಟಿಯು ಬೆಳೆಗಳು ನಿರುದ್ಯೋಗವನ್ನು ಅವರ ಅಭಿವೃದ್ಧಿ ಕರವಾಗಿ ಬಟ್ಟೆಗಳು ಈಗಿನಕಿಂತ ಅಗ್ಗವಾಗ ಬೇಕಾಗುವು ಎಂದು ಅವರು ಉದ್ಗಾರ ತೆಗೆದರು.

ಸರಕಾರದವರು ಮಾಧ್ಯಮಿಕ ಶಿಕ್ಷಣ ಮಂಡಲ ನಿಯಮಿಸಿದ್ದು ಅದರಲ್ಲಿ ಡಿ. ಜಿ. ಕರ್ವೆ, ಈ. ಸಿ. ರೆಡ್ಡಿ, ಎಸ್. ಎಂ. ಶಹಾ, ಡಾ. ಸಾ. ವಿ. ಜಿ. ಕುಲಕರ್ಣಿ ಮೊದಲಾದವರಿರುವರು.

ತಾ. ಪಿ. ಸಿ. ಘೋಷರು ಪಾಕಿಸ್ತಾನದಲ್ಲಿ ಹಿಂದುಸ್ಥಾನದ ಡೆಪ್ಯುಟಿ ಹಾಯಕಮಿಶನರ ರಾಗಿ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತದೆ.

ಇನ್ನು ವರೆಗೆ ಸೀದಾ ಪದ್ಧತಿಯು ಅನುಲಿ ಸಲ್ಪಡುವ ಮುಂಬಯಿ, ಪುಣೆ, ಅಹಮ್ಮದಾಬಾದ ಮತ್ತು ಕೊಲ್ಹಾಪುರಗಳಲ್ಲಿಯ ಸೀದಾ ಪದ್ಧತಿ ಯನ್ನು ಸಹ ಬರುವ ಅಕ್ಟೋಬರದಿಂದ ಮುಂಬೈ ಸರಕಾರವು ರದ್ದುಗೊಳಿಸಬಹುದು ಎಂದು ಮುಂಬಯಿ ಸರಕಾರದ ಆಹಾರ ಮಂತ್ರಿ ಶ್ರೀ ದಿನಕರರಾವ ದೇಸಾಯಿಯವರು ಪತ್ರಿಕಾ ಪ್ರತಿ ನಿಧಿಗಳ ಸಭೆಯಲ್ಲಿ ಹೇಳಿದರು. ಆಹಾರ ಧಾನ್ಯ ಗಳ ಕಳ್ಳಪೇಟೆಯನ್ನು ತಡೆಯಲು ಸರಕಾರವು ಈಗಲೇ ೬೫೦ ಅಗ್ಗದರದ ಅಂಗಡಿಗಳನ್ನು ಪ್ರಾರಂಭಿಸಿದೆಯೆಂದೂ ಅವೆ ಧಾರಣೆಯು ಸಹ ಇನ್ನು ಒಂದು ತಿಂಗಳಲ್ಲಿ ಇಳಿಯುವದು ಎಂದೂ ಅದಕ್ಕಾಗಿ ಸರಕಾರವು ಜವಳಿ ನಿಯಂತ್ರಣವನ್ನು ಹೇರಲು ನಿರ್ಧರಿಸಿದೆಯೆಂದೂ ಹೇಳಿದರು. ಇನ್ನು ಮೇಲೆ ಜವಳಿಯ ಮಾರಾಟದಲ್ಲಿ ನಡು ವಿನ ದಲಾಲನ ಕಮಿಶನ ತಪ್ಪಿ ಅರಿವೆಯು ನೇರ ವಾಗಿ ಸಹಕಾರೀ ಸಂಘಗಳ ಮುಖಾಂತರ ಗಿರಾಕಿಗಳಿಗೆ ಮುಟ್ಟುವಂತೆ ವ್ಯವಸ್ಥೆ ಮಾಡ ಲಾಗುವದೆಂದು ಅರುಹಿದರು.

ಈ ವರೆಗೆ ಮುಂಬಯಿಗೆ ಈ ತಿಂಗಳ ಆಹಾರ ಧಾನ್ಯದ ಆರು ಹಡಗಗಳು ಬಂದಿರುವದಾಗಿ ತಿಳಿ ಯುತ್ತದೆ. ಒಂದು ಹಡಗವು ೫೯೭೫ ಟನ್ನ ಇನ್ನೊಂದು ೯೪೨೭ ಟನ್ನ ಗೋದಿ ತಂದಿವೆ. ಹೋದವಾರದಲ್ಲಿ ೫೭೨೪ ಟನ್ನ ಆಹಾರ ಧಾನ್ಯ ವನ್ನು ಮುಂಬಯಿ ಪ್ರಾಂತದ ಬೇರೆ ಬೇರೆ ಸ್ಥಳ ಗಳಿಗೆ ಕಳಿಸಲಾಗಿದ್ದು ಪ್ರಾಂತದ ಹೊರಗೆ ೪೩೦೭ ಟನ್ನ ಕಳಿಸಿದ ವರದಿಯುಂಟು. ಎಪ್ರಿಲ ತಿಂಗ ಳಲ್ಲಿ ಒಟ್ಟು ೧೭ ಆಹಾರದ ಹಡಗಗಳು ಬಂದವು. ಅವುಗಳಿಂದ ಒಟ್ಟು ೯೪೬೭೪ ಟನ್ನ ಆಹಾರ ಧಾನ್ಯವು ಬಂದಿತು. ಇದರಲ್ಲಿ ಅಸ್ಟ್ರೇಲಿಯಾದಿಂದ ೪೭೨೬೦ ಟನ್ನ ಗೋದಿ, ಅಮೇರಿಕೆಯಿಂದ ೧೩೫೭೨ ಟನ್ನ ಗೋದಿ ಮತ್ತು ಗೋದಿ ಹಿಟ್ಟು ಬ್ರಹ್ಮದೇಶದಿಂದ ೧೧೭೬೯ ಟನ್ನ ಅಕ್ಕಿ, ಇಜಿಪ್ತ ದಿಂದ ೧೩೪೬೧ ಟನ್ನ ಅಕ್ಕಿ, ಅರ್ಜೆಂಟಿನಾದಿಂದ ೩೩೫೫ ಟನ್ನ ಜವೆಗೋದಿ, ಅಬಿಸೀನಿಯಾದಿಂದ ೬೫೭೬ ಟನ್ನ ಜೋಳ ಬಂದಿದೆ.

ಜಿ. ಆಯ. ಪಿ. ರೇಲ್ವೆಯ ಮತ್ತೆ ೫೦೦೦ ಹಂಗಾಮಿ ಕೆಲಸಗಾರರು ಸಂಪನ್ನು ಸೇರಿರುವ ದಾಗಿ ತಿಳಿಯುತ್ತದೆ. ಇದರಿಂದ ಸಂಪುಗಾರರ ಸಂಖ್ಯೆ ೯೦೦೦ ಕ್ಕೆ ಏರಿದೆ. ಆದರೆ ಸಂಪುಗಾರರು ಮಾರ್ಗರಚನೆಯ ಕೆಲಸಕ್ಕೆ ಇರುತ್ತಿರುವದರಿಂದ ರೇಲ್ವೆಗಳ ಓಡಾಟಕ್ಕೆ ತಡೆ ಉಂಟಾಗಿಲ್ಲ.

ಪುಣೆಯಲ್ಲಿ ತಾ. ೧೪ ರ ಸಂಜೆಗೆ ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ಭಾಷಣ ಮಾಡುತ್ತ ಸರ್ವರೂ ಕಾಂಗ್ರೆಸ್ಸನ್ನೇ ಅನುಸರಿಸಬೇಕೆಂದೂ ಬರುವ ೫-೧೦ ವರ್ಷ ಒಂದೇ ಪಕ್ಷ ಒಂದೇ ಬಗೆಯ ಕಾರ್ಯಕ್ರಮ ಕೈಕೊಳ್ಳುವದು ದೇಶದ ಹಿತಕ್ಕೆ ಅಗತ್ಯವೆಂದೂ ಆ ಪಕ್ಷವೆಂದರೆ ಕಾಂಗ್ರೆಸ್ಸೇ ಎಂತಲೂ ಹೇಳಿದರು. ಸ್ವರಾಜ್ಯವನ್ನು ಸಂಪಾದಿಸಿದ ಕಾಂಗ್ರೆಸ್ಸೇ ದೇಶ ದಲ್ಲಿ ಸುರಾಜ್ಯವನ್ನೂ ಸ್ಥಾಪಿಸಬೇಕಾಗಿದೆಯಾದ ಕಾರಣ ಕಾಂಗ್ರೆಸನ್ನು ವಿಸರ್ಜಿಸಬೇಕೆಂದು ಕೆಲ ವರು ಪ್ರತಿಪಾದಿಸುತ್ತಿರುವದು ಯುಕ್ತವಲ್ಲ ವೆಂದೂ ಉಲ್ಲೇಖಿಸಿದರು.

ಮುಂಬಯಿ ಸಹಕಾರಿ ಸಂಘಗಳ ನಿಯಮಗಳ ತಿದ್ದುಪಡಿಗಳು ಮುಂಬಯಿ ಸರಕಾರದ ಮೇ ೬ ನೇ ತಾ. ನ ವಿಶೇಷ ಗ್ಯಾಝೆಟನಲ್ಲಿ ಪ್ರಸಿದ್ಧಿಸ ಲ್ಪಟ್ಟಿವೆ. ಸಂಘಗಳು ಸಾಲ ತೆಗೆದುಕೊಳ್ಳುವ ನಿರ್ಬಂಧದ ಬಗ್ಗೆ ಇದ್ದ ೫ ನೇ ನಿಯಮಕ್ಕೆ ಈ ತಿದ್ದುಪಡಿಗಳು ಸಂಬಂಧಪಟ್ಟಿವೆ.

ಶಾರೀರಿಕ ಶಿಕ್ಷಣಕ್ಕಾಗಿ ೧೯೪೮—೪೯ ರಲ್ಲಿ ಹೆಚ್ಚಿಗೆ ಹತ್ತು ಜನ ಅಸಿಸ್ಟೆಂಟ ಡೆಪ್ಯುಟಿ ಇನ್ ಸ್ಪೆಕ್ಟರರ ಸ್ಥಳಗಳನ್ನು ಮುಂಬಯಿ ಸರಕಾರದ ವರು ಹೆಚ್ಚಿಸಿದ್ದಾರೆ.

ಲೀನವಾದ ದಕ್ಷಿಣ ಸಂಸ್ಥಾನದ ಜನರ ಹತ್ತಿರ ರಾಯಫಲ್ಸ ಪಡೆಯುದ ಶಸ್ತ್ರಾದಿಗಳಿದ್ದರೆ ಅವು ಗಳನ್ನು ಪೋಲೀಸರಿಗೆ ಒಪ್ಪಿಸಬೇಕೆಂದೂ

ಹೊಸದಿಲ್ಲಿ

ಸ್ಟರ್ಲಿಂಗ ಸಂಗ್ರಹದ ಬಗ್ಗೆ ಬ್ರಿಟಿಶ ಪಾಕಿ ಸ್ತಾನ ಭಾರತಗಳಲ್ಲಿ ಜೂನ ಮೊದಲನೇ ವಾರ ದಲ್ಲಿ ಮಾತುಕತೆಗಳು ಪ್ರಾರಂಭವಾಗುವವು. ಬ್ರಿಟಿಶ ಸರಕಾರವು ಭಾರತಕ್ಕೆ ಕೊಟ್ಟ ವಿರಾಮ ವೇತನಗಳ ಬಗೆಗೂ ನಿರ್ಣಯಗಳನ್ನು ಕೈಕೊಳ್ಳ ಲಾಗುವದು. ಉಭಯ ಪಕ್ಷಾಹಸ್ತಗಳ ಅಧಿ ಕಾರಿಗಳು ಪ್ರಾಥಮಿಕ ಚರ್ಚೆಗಾಗಿ ಈ ತಿಂಗಳ ಕೊನೆಯ ವಾರದಲ್ಲಿ ಲಂಡನ್ನಿಗೆ ತೆರಳುವರು.

ಪಾಕಿಸ್ತಾನಕ್ಕೆ ಕಳ್ಳ ಮಾರ್ಗದಿಂದ ಸಾಗಿಸು ತ್ತಿದ್ದ ೧ ಲಕ್ಷ ರೂ. ಬೆಲೆಯ ಬಟ್ಟೆಯನ್ನು ತಾ. ೧೫ ರ ರಾತ್ರಿ ದಿಲ್ಲಿಯ ಕ್ಯಾಂಟೋನಮೆಂಟ ಪೋಲೀಸರು ಜಪ್ತ ಮಾಡಿ ವಶಪಡಿಸಿಕೊಂಡರು. ಈ ಬಗ್ಗೆ ದಿಲ್ಲಿಯ ಸುಮಾರು ೧೨ ಜವಳಿ ವರ್ತ ಕರನ್ನು ಬಂಧಿಸಲಾಗಿದೆ. ಈಗ ಬಂಧಿಸಲ್ಪಟ್ಟ ವರ್ತಕರು ಪಾಕಿಸ್ತಾನದ ಗಡಿಯ ಮೇಲಿದ್ದ ರೇಲ್ವೆಯಿಂದ ಬಟ್ಟೆ ಕಳಿಸಿ ಅಲ್ಲಿಂದ ಕಳ್ಳಮಾರ್ಗ ದಿಂದ ಪಾಕಿಸ್ತಾನಕ್ಕೆ ಬಟ್ಟೆ ಕಳಿಸುತ್ತಿದ್ದರಂತೆ. ಕಳೆದ ವಾರದಲ್ಲಿಯೂ ಇದೇ ರೀತಿ ಕಳಿಸಿದ ಬಟ್ಟೆ ಯನ್ನು ಪೋಲೀಸರು ಜಪ್ತ ಮಾಡಿ, ವ್ಯಾಪಾರಿ ಗಳನ್ನು ಬಂಧಿಸಿದ್ದರು.

ಪೂರ್ಣಾವಧಿ ಕೆಲಸ ಮಾಡದೆ ನಿವೃತ್ತರಾದ ನೌಕರರಿಗೆ ವಿರಾಮ ವೇತನ ಕೊಡಕೂಡದೆಂದು ಭಾರತ ಸರಕಾರವು ನಿರ್ಧರಿಸಿರುವದಾಗಿ ತಿಳಿಯು ತ್ತದೆ. ಬ್ರಿಟಿಶರಾಗಲಿ ಇನ್ನಿತರರಾಗಲಿ ನೌಕ ರಿಯ ಮುಕ್ತಾಯ ಪೂರ್ವದಲ್ಲಿ ವಿರಾಮ ಪಡೆ ಯಲು ಕಾರಣವಿಲ್ಲವೆಂದೂ ಇಂತಹ ವಿರಾಮದ ಹೊಣೆಯನ್ನು ಸರಕಾರವು ವಹಿಸಲಾಗದೆಂದೂ ಭಾರತ ಸರಕಾರದ ಅಭಿಪ್ರಾಯವಿದೆ. ಭಾರತದ ಹಿಂದಿನ ವೈಸರಾಯರಾದ ಲಾರ್ಡ ವಾವೆಲ್ಲರು ಪೂರ್ಣಾವಧಿ ಕೆಲಸಮಾಡದೆ ಯುರೋಪಿಯನ್ನ ರಿಗೆ ಭಾರತವು ವಿರಾಮವೇತನ ಕೊಡಬೇಕೆಂದು ತಾ. ೧೨ ರಂದು ಬ್ರಿಟನ್ನಿನ ಮೇಲ್ಮನೆಯಲ್ಲಿ ತಿಳಿ ಸಿದ್ದರು.

ಪಶ್ಚಿಮ ಬಂಗಾಲ

ಕೇಂದ್ರ ಸರಕಾರದ ನೌಕರರ ಯುನಿಯನ್ನಿನ ಅಧ್ಯಕ್ಷರಾದ ಮೃಣಾಲ ಕಾಂತಿ ಬೋಸರು ಒಂದು ಪ್ರಕಟನೆ ಹೊರಡಿಸಿ ಸಂಪು ಹೂಡಿದ ನೌಕರರನ್ನು ಅಧಿಕಾರಿಗಳು ಕೆಟ್ಟ ರೀತಿ ನಡೆಸಿ ಕೊಳ್ಳುತ್ತಿರುವರೆಂದೂ ಪಂಡಿತ ನೆಹರು ಅವರು ಅಭಿವಚನ ಕೊಟ್ಟಂತೆ ಅಧಿಕಾರಿಗಳು ಸೇಡಿನ ಭಾವನೆಯನ್ನು ತೊರೆದು ವರ್ತಿಸುತ್ತಿಲ್ಲವೆಂದೂ ದೂರಿದ್ದಾರೆ.

ಪಶ್ಚಿಮ ಬಂಗಾಲವು ಬಾಳಿಬದುಕಬೇಕಾದರೆ ಬಿಹಾರದಲ್ಲಿಯ ಬಂಗಾಲಿ ಮಾತನಾಡುವವರ ಪ್ರದೇಶವು ಪಶ್ಚಿಮ ಬಂಗಾಲಕ್ಕೆ ಸೇರಬೇಕೆಂದೂ ಕಾಂಗ್ರೆಸು ಭಾಷಾವಾರ ಪ್ರಾಂತರಚನೆಯ ತತ್ವಕ್ಕೆ ಬದ್ಧವಾಗಿದೆಯೆಂದೂ ಪಶ್ಚಿಮ ಬಂಗಾ ಲದ ಮುಖ್ಯ ಮಂತ್ರಿ ಡಾ ರಾಯ, ಪ್ರಾಂತಿಕ ಕಾಂಗ್ರೆಸ ಅಧ್ಯಕ್ಷ ಶ್ರೀ. ಸುರೇಂದ್ರ ಮೋಹನ ಘೋಷರೇ ಮೊದಲಾದ ಧುರೀಣರು ಈ ಬಗ್ಗೆ ಅದೇಕೆ ಮೌನ ತಾಳಿರುವರೋ ತಿಳಿಯದು ಎಂದೂ ಶ್ರೀ. ಶರಚ್ಚಂದ್ರ ಬೋಸರು ಸಮಾಜ ವಾದಿ ರಿಪಬ್ಲಿಕನ ಪಕ್ಷದವರ ಆಶ್ರಯದಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಅಧ್ಯಕ್ಷ ಸ್ಥಾನ ದಿಂದ ಭಾಷಣ ಮಾಡುತ್ತ ಹೇಳಿದರು.

ಹೀಗೆ ಮಾಡಿದ ಈ ಬಗ್ಗೆ ಯಾವ ಕ್ರಮವನ್ನೂ ಕೈಕೊಳ್ಳಲಾಗುವದಿಲ್ಲವೆಂದೂ ರಾಯಫಲ್ಸ ಬೇಕೆಂಬವರ ಬೇಡಿಕೆಯನ್ನು ವಿಚಾರಿಸಲಾಗುವ ದೆಂದೂ ಮುಂಬಯಿ ಸರಕಾರದ ಪ್ರಕಟನೆ ಹೊರ ಟಿದೆ.

ಮಾಧ್ಯಮಿಕ ಶಾಲೆಗಳಲ್ಲಿ ಹಿಂದುಳಿದ ವರ್ಗದ ವರಿಗೆ ಕೊಡಮಾಡಿದ ಫೀ ಸಿಪ್ಪಿನ ಬಗ್ಗೆ ಇದ್ದ ೧೪ ರಿಂದ ೨೨ ರ ವರೆಗಿದ್ದ ವಯೋ ನಿರ್ಬಂಧ ವನ್ನು ೧೬ ರಿಂದ ೨೪ ರ ವರೆಗೆ ಮುಂಬಯಿ ಸರ ಕಾರದವರು ಹೆಚ್ಚಿಸಿದ್ದಾರೆ.

ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ ಮತ್ತು ರಾಯಟರಗಳ ಆಡಳಿತವನ್ನು ಹೊಸ ದಾಗಿ ರಚಿತವಾದ ಪ್ರೆಸ್ ಟ್ರಸ್ಟ ಆಫ್ ಇಂಡಿ ಯಾಕ್ಕೆ ಒಪ್ಪಿಸಬೇಕೆಂಬ ರಾ ೨ಟೆರ ಮಂಡಲ ದೊಡನೆ ಮಾತುಕತೆ ನಡೆಸಲು ಹಿಂದುಸ್ತಾನ ಮತ್ತು ಪೌರ್ವಾತ್ಯ ವೃತ್ತಪತ್ರಿಕಾ ಸಂಘದ ಶಿಷ್ಟಮಂಡಲವು ಲಂಡನಕ್ಕೆ ತಾ. ೧೬ ಕ್ಕೆ ಹೊರ ಟಿತು.

ಮದ್ರಾಸ

ಅ. ಭಾ. ಆಕಾಶವಾಣಿಯಲ್ಲಿ ಮದ್ರಾಸದ ಆಹಾರ ಮಂತ್ರಿಗಳಾದ ಡಾ. ರಾಜನ್ನರು ಭಾಷಣ ಮಾಡುತ್ತ, ವ್ಯಾಪಾರಿಗಳು ಆಹಾರದ ಬೆಲೆ ಸಿಕ್ಕಾಬಟ್ಟೆ ಹೆಚ್ಚಿಸಿದ್ದಾರೆ. ಸರಕಾರವು ಉಗ್ರ ಕ್ರಮ ತೆಗೆದುಕೊಳ್ಳಲು ಹಿಂದು ಮುಂದು ನೋಡುವದಿಲ್ಲವೆಂದೂ ಈಗ ಸರಕಾರದ ವಖಾರ ದಲ್ಲಿ ೪ ಲಕ್ಷ ೯೦ ಸಾವಿರ ಟನ್ ಧಾನ್ಯವಿದೆ ಯೆಂತಲೂ ಕೊರತೆಯ ೧೨ ಜಿಲ್ಹೆಗಳಿಗೆ ಕೂಡಿ ೧೦ ಲಕ್ಷ ಧಾನ್ಯ ಪೂರೈಸಲು ಕೇಂದ್ರ ಸರಕಾರಕ್ಕೆ ಕೇಳಿಕೊಳ್ಳಲಾಗಿದೆಯೆಂದೂ ಹೇಳಿದರು. ಅವಾ ಸ್ತವವಾಗಿ ಧಾರಣೆಗಳನ್ನು ಏರಿಸಗೊಡದಿರಲು ವಿನಿಯಂತ್ರಿತ ಭಾಗಗಳಲ್ಲಿ ೨೦೦೦ ಪರಿಹಾರ ಅಂಗಡಿಗಳನ್ನು ತೆರೆಯಲಾಗಿದ್ದು ಅವಶ್ಯಕಂಡರೆ ಇನ್ನೂ ತೆರೆಯಲಾಗುವದೆಂದು ಅವರು ಹೇಳಿ ದರು.

ಮದ್ರಾಸ ಮತ್ತು ಹೈದರಾಬಾದ ಸರಕಾರ ಗಳು ಕೂಡಿ ಕಟ್ಟಿಸುತ್ತಿರುವ ತುಂಗಭದ್ರಾ ಯೋಜನೆಯು ಮೊದಲೇ ಗೊತ್ತಾದಂತೆ ಕೆಲಸ ಸಾಗಿದರೆ ೧೯೫೩ ರಲ್ಲಿ ಮುಗಿಯಬಹುದೆಂದೂ ಮದ್ರಾಸವು ತನ್ನ ಭಾಗವನ್ನು ೧೯೫೧ ನೇ ಮಾರ್ಚದಲ್ಲಿ ಕಟ್ಟಿ ಮುಗಿಸಬಹುದೆಂದೂ ಮದ್ರಾಸ ಸರಕಾರದ ಮುಖ್ಯ ಎಂಜನಿಯರರು ತಾ ೧೪ ರಂದು ಹೇಳಿದರು ಹೈದರಾಬಾದದ ಇತ್ತೀಚಿನ ರಾಜಕೀಯ ಪರಿಸ್ಥಿತಿಯ ಮೂಲಕ ನಿಜಾಮ ಸರಕಾರವು ಕೆಲಸದಿಂದ ಪರಾವೃತ್ತವಾ ಗದಿದ್ದರೆ. ಅವರ ಭಾಗದ ಕೆಲಸವೂ ಬೇಗ ಕೊನೆ ಗಾಣಬಹುದೆಂದೂ ಅವರು ಕೆಲಸ ಸಾಗಿಸದಿದ್ದರೆ ನಮ್ಮ ಕೆಲಸ ಮೊದಲೇ ಮುಗಿಸಿ ಪ್ರಯೋಜನ ವಿಲ್ಲವೆಂದೂ ಹೇಳಿದರು. ಈ ಅಣೆಕಟ್ಟಿನ ಕೆಲಸ ದಲ್ಲಿ ಸದ್ಯಕ್ಕೆ ೧೦ ಸಾವಿರ ಕೂಲಿಕಾರರು ಮತ್ತು ೨ ಸಾವಿರ ಸೆರೆಯಾಳುಗಳೂ ಕೆಲಸಮಾಡುತ್ತಿದ್ದು ಕಾಲುವೆಯ ಕೆಲಸ ಭರದಿಂದ ಸಾಗಿದೆಯೆಂದು ಮದ್ರಾಸ ಸರಕಾರದ ಪತ್ರಿಕಾ ಪ್ರಕಟನೆ ಹೊರ ಟಿದೆ.

ನ್ಯಾಯಮೂರ್ತಿಯವರ ಕಾರ್ಯಕಾರೀ ಸಮಿತಿಯ ಹಿಂದಿನ ಸದಸ್ಯರೂ ದಕ್ಷಿಣ ಆಫ್ರಿಕೆಯಲ್ಲಿ ಹಿಂದಿ ಏಜೆಂಟ ಜನರಲ್ಲರೂ ಆದ ಸರ್ ಮಹಮ್ಮದ ಹಬೀಬುಲ್ಲಾ ಅವರು ತಾ ೧೫ ರಾತ್ರಿ ಕರಾಚಿ ಯಲ್ಲಿ ನಿಧನಹೊಂದಿದರು. ಹಿಂದೊಮ್ಮೆ ಇವರು ಕೆಲಕಾಲ ತ್ರಾವಣಕೋರದ ದಿವಾಣರಾಗಿದ್ದರು. ಮರಣಕಾಲಕ್ಕೆ ಇವರಿಗೆ ೮೦ ವರ್ಷಗಳಾಗಿದ್ದವು.

ಮದ್ರಾಸ ಸರಕಾರದವರು ಸಾರ್ವಜನಿಕ ಸುರ ಕ್ಷಿತತೆಯ ಕಾನೂನಿನ ಮೇರೆಗೆ ಬಂಧಿಸಿದ ೫೬ ಆರ್. ಎಸ್. ಎಸ್. ಕೆಲಸಗಾರರನ್ನು ತಾ ೧೪ಕ್ಕೆ ಬಿಡುಗಡೆ ಮಾಡಿದರು. ೧೫ ಆರ್. ಎಸ್ ಎಸ್ ಜನರನ್ನು ಪ್ರಾಂತದಿಂದ ಗಡಿಪಾರು ಮಾಡಲಾ ಗಿದೆ. ಬಂಧಿಸಲಾಗಿದ್ದ ಮೂವರು ಮುಸ್ಲಿಂ ಲೀಗ ನ್ಯಾಶನಲ್ ಗಾರ್ಡರನ್ನು ಬಿಡುಗಡೆ ಮಾಡಲಾ ಗಿದೆ.

ಸೌಥ ಇಂಡಿಯನ್ ರೇಲ್ವೆಯ ನ್ಯಾಯುವರ ಮತ್ತು ಫಾಯರಮನ್ನರು ೮ ತಾಸಿಗಿಂತ ಹೆಚ್ಚಿಗೆ ಕೆಲಸ ಮಾಡುವದಿಲ್ಲವೆಂದು ಸಂಪು ಹೂಡಿದ್ದರು ರೇಲ್ವೆ ಗಾಡಿಗಳ ಓಡಾಟವು ಯಥಾ ಪ್ರಕಾರ ನಡೆದಿದೆ. ಅರ್ಕೋಣಂ ಮತ್ತು ಜೊಂಗಲಪೇಟೆ ಮಧ್ಯದಲ್ಲಿ ೪೦ ಮೈಲು ರೇಲು ಮಾರ್ಗ ಬಿಟ್ಟರೆ ಉಳಿದೆಡೆಯಲ್ಲಿ ಗಾಡಿಗಳ ಓಡಾಟವು ಯಥಾ ಪ್ರಕಾರ ನಡೆದಿದೆ ಎಂದು ಎಸ್. ಆಯ್. ರೇಲ್ವೆ ಜನರಲ ಮ್ಯಾನೇಜರರು ಪ್ರಕಟನೆ ಹೊರಡಿಸಿ ದ್ದಾರೆ

ಬಿಹಾರ

ಬಿಹಾರ ಪ್ರಾಂತದ ಸರಕಾರೀ ನೌಕರಿಗಳ ಪ್ರವೇಶಕ್ಕೆ ಬಿಹಾರ ಸರಕಾರದವರು ಒಂದು ಪರೀಕ್ಷೆ ಇಟ್ಟು ಅದರಲ್ಲಿ ನೋಲ್ಪರಗತಿಯಲ್ಲಿ ಬಂದವರಿಗೆ ಗುಣಾನುಕ್ರಮವಾಗಿ ನೌಕರಿಯಲ್ಲಿ ಪ್ರವೇಶ ಕೊಡಬೇಕೆಂದು ನಿರ್ಧರಿಸಿದ್ದಾರೆ.

ಬಿಹಾರದ ಮಂತ್ರಿಗಳಾದ ಅನುಗ್ರಹ ನಾರಾ ಯಣಸಿಂಹ ಮತ್ತು ಕೃಷ್ಣವಲ್ಲಭ ಇವರು ಮಧ್ಯ ಪ್ರಾಂತದ ಮುಖ್ಯ ಮಂತ್ರಿಗಳಾದ ಶ್ರೀ ರವಿ ಶಂಕರ ಶುಕ್ಲರೊಡನೆ ಸಾರಗುಜಾ ಮತ್ತು ಜಾಶ ಪೂರ ಸಂಸ್ಥಾನಗಳ ವಿಲೀನೀಕರಣದ ವಿಷಯ ವಾಗಿ ತಾ ೧೬ ರಂದು ಚರ್ಚಿಸಿದರು. ಈ ಮೂವರೂ ಕೂಡಿ ಸರದಾರ ವಲ್ಲಭಭಾಯಿ ಪಟೇ ಲರ ಎದುರು ತಮ್ಮ ಚರ್ಚೆಯ ಫಲಿತಾಂಶವ ನ್ನಿಟ್ಟು ಅವರ ಸಲಹೆ ಪಡೆಯುವರಾಗಿ ತಿಳಿಯು ತ್ತದೆ.

ನಿಸರ್ಗ ಚಿಕಿತ್ಸಾ ವರ್ಗ

ಮುಂಬಯಿ ಸರಕಾರದ ಕೂಲಿಕಾರ ಮಂತ್ರಿ ಗಳಾದ ಶ್ರೀ ಗುಲಜಾರಿಲಾಲ ನಂದಾರು ಮುಂಬಯಿ ಉಪನಗರವಾದ ಮಲಾಡದಲ್ಲಿ ಸೇಠ ಹರಗೋವಿಂದದಾಸ ಜೀವನದಾಸ ಇವರ ನೈಸ ರ್ಗಿಕ ಚಿಕಿತ್ಸಾಲಯದಲ್ಲಿ, ನಿಸರ್ಗಚಿಕಿತ್ಸೆಯ ಅಲ್ಪಾವಧಿ ವರ್ಗವನ್ನು ತಾ. ೧೩ ರಂದು ಪ್ರಾರಂ ಭಿಸಿದರು ಶ್ರೀ ಕೆ. ಲಕ್ಷ್ಮಣ ಶರ್ಮರು ಈ ವರ್ಗದ ನಿರ್ದೇಶಕರಾಗಿದ್ದಾರೆ. ಇವರು ಹಿಂದೀ ನೈಸರ್ಗಿಕ ಚಿಕಿತ್ಸಾ ಸಂಸ್ಥೆಯ ಸಂಚಾಲಕರಿರು ವರು ಇವರಿಗೆ ನಿಪುಣ ಪ್ರಾಧ್ಯಾಪಕರ ನೆರ ವೀಯಲಾಗಿದೆ. ಇವರಲ್ಲಿ ಫ್ರೆಂಚ ನಿಸರ್ಗ ಚಿಕಿ ತ್ಸಕರಾದ ಕುಮಾರಿ ಸಿ. ಪೇನರೂ ಒಬ್ಬರಾಗಿ ದ್ದಾರೆ. ಇವರು ಇಂಗ್ಲಂಡ, ಫ್ರಾನ್ಸ, ಸ್ವಿಜರ ಲಂಡ, ಭಾರತಗಳಲ್ಲಿ ನೈಸರ್ಗಿಕ ಚಿಕಿತ್ಸೆಯ ಬಗ್ಗೆ ಅನುಭವ ಪಡೆದವರಿರುವರು. ಮುಂಬಯಿ ಯಲ್ಲಿ ಈ ಬಗೆಯ ವರ್ಗ ಪ್ರಾರಂಭವಾದುದು ಇದೇ ಮೊದಲ ಸಲ.

ಇಂಟರ ಸಾಯನ್ಸ ಪರೀಕ್ಷೆಯಲ್ಲಿ ಶಿಷ್ಯವೃತ್ತಿ

ಮುಂಬಯಿ ವಿಶ್ವವಿದ್ಯಾಲಯದ ಇಂಟರ ಸಾಯನ್ಸ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಈ ಕೆಳಗಿನ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಗಳು ದೊರ ಕಿವೆ.

ಕೊಲ್ಹಾಪುರ ಕೇಂದ್ರ

ಶ್ರೀ ಸಲಗರಕರ ಎಸ್. ಎನ್. (೫೨೦೫) ಅವರಿಗೆ ಸರ್ ದಿನಶಾ ಮಾಣಕಜಿ ಪೆಟಿಟ ಸಾಯನ್ಸ ಶಿಷ್ಯವೃತ್ತಿ.

ಧಾರವಾಡ ಕೇಂದ್ರ

ಕುಮಾರಿ ಪವಾರ ವನಮಾಲಾ (೫೭೪೯) ಅವ ರಿಗೆ ಪೆಟಿಟ ಹೊರಮುಸಜಿ ಕಾಮಾ ಶಿಷ್ಯವೃತ್ತಿ.

ಧಾರವಾಡ ಕೇಂದ್ರದ ಶ್ರೀ ಕುಲಕರ್ಣಿ ಬಿ. ಎ. (೫೬೨೦) ಹಾಗೂ ಇನ್ನಿಬ್ಬರಲ್ಲಿ ಸೇಠ ಮಂಗಲ ದಾಸ ಜೇಠಸಿಂಗಭಾಯಿ ಕೆಮಿಸ್ಟ ಪಾರಿತೋಷಕ ವನ್ನು ಹಂಚಿ ಕೊಡಲಾಗಿದೆ.

ರಶಿಯಾ-ಅಮೇರಿಕೆ ದ್ವಂದ್ವ

(೩ನೆಯ ಪುಟದಿಂದ)

ಈ ಮಾತುಕತೆ ಪ್ರಾರಂಭವಾದರೆ ಅದರ ಪರಿ ಣಾಮವೇನಾಗಬಹುದೆಂಬುದನ್ನು ಊಹಿಸು ವದು ಕಠಿಣ. ಆದರೆ ಅಮೇರಿಕವು ಪಶ್ಚಿಮ ಯುರೋಪಿಗೆ ಕೊಡಮಾಡಿದ ಧನಸಹಾಯ ಮತ್ತು ಪಂಚ ರಾಷ್ಟ್ರಗಳು ಮಾಡಿಕೊಂಡ ಸಂರ ಕ್ಷಣ ಒಪ್ಪಂದ ಇವು ರಶಿಯಾದ ವಿದೇಶ ನೀತಿಯ ಮೇಲೆ ಪರಿಣಾಮ ಮಾಡಿವೆಯೆಂದು ಹೇಳ ಬಹುದು. ಇದು ನಿಜವಿದ್ದಲ್ಲಿ ಎನ್ನು ೨—೩ ವಾರ ಗಳಲ್ಲಿ ಅದರ ಪ್ರತಿಕ್ರಿಯೆ ಕಂಡುಬರದಿರದು. ಬ್ರಿಟನ್ ಮತ್ತು ಅಮೇರಿಕೆಗಳು ಬರ್ಲಿನ್ ಬಿಡುವುದಾದರೆ ರಶಿಯವು ಅಸ್ಥೆಯಿಂದ ಹೊರ ಡಲು ಒಪ್ಪಬಹುದು.

ರಶಿಯವು ಅನವಶ್ಯಕವಾಗಿ ಇತರರ ಮೇಲೆ ತನ್ನ ವರ್ಚಸ್ಸನ್ನು ಬೆಳೆಸಲು ಯತ್ನಿಸುತ್ತಿದೆ; ಇತರ ರಾಷ್ಟ್ರಗಳಲ್ಲಿರುವ ಕಮ್ಯುನಿಸ್ಟ ಅಲ್ಪ ಸಂಖ್ಯಾಕರು ಅದರ ಬೆಂಬಲದಿಂದ ಅಧಿಕಾರ ವನ್ನು ತಮ್ಮ ಕೈಗೆ ತೆಗೆದುಕೊಳ್ಳಲು ಪ್ರಯತ್ನಿ ಸುತ್ತಿದ್ದಾರೆ ಎಂಬದು ರಶಿಯಾದ ಮೇಲೆ ಅಮೇ ರಿಕದ ಆರೋಪ.

ಈ ಆರೋಪವನ್ನು ನಿರಾಕರಿಸಿ ರಶಿಯವು— ಅಮೇರಿಕವು ಭೂಮಂಡಲದ ವಿವಿಧ ಭಾಗಗಳಲ್ಲಿ ಸೈನ್ಯ ನೌಕೆ ಮತ್ತು ವಿಮಾನಗಳ ಠಾಣ್ಯಗಳನ್ನು ರಚಿಸುತ್ತಲೂ ರಶಿಯವನ್ನು ಬಗ್ಗುಬಡಿಯಬೇ ಕೆಂದು ಪ್ರಕಟವಾಗಿ ಪ್ರಚಾರ ಮಾಡುತ್ತಲೂ ವ್ಯಾಪಾರದಲ್ಲಿ ಪ್ರತಿಕೂಲ ಧೋರಣೆ ತಾಳಿ ಪಶ್ಚಿಮ ಯುರೋಪಿನ ಪಂಚ ರಾಷ್ಟ್ರಗಳು ಸಂರ ಕ್ಷಣದ ಒಪ್ಪಂದಕ್ಕೆ ಬೆಂಬಲ ಕೊಟ್ಟಿತು ಎಂದು ಪ್ರತ್ಯಾರೋಪ ಹೊರಿಸಿದೆ.

ಯುಕ್ತಪ್ರಾಂತ

ಯುಕ್ತಪ್ರಾಂತದ ಶಿಕ್ಷಣ ಮಂತ್ರಿಗಳಾದ ಶ್ರೀ ಸಂಪೂರ್ಣಾನಂದರು ನಾಗರೀ ಪ್ರಚಾರಿಣೀ ಸಭೆ ಯಲ್ಲಿ ಭಾಷಣ ಮಾಡುವಾಗ ಇಂಗ್ಲೀಷ ಶಬ್ದ ವನ್ನು ಉಪಯೋಗಿಸಿದ್ದರಿಂದ ೫ ಆಣೆ ದಂಡ ತೆರಬೇಕಾಯ್ತು. ನಾಗರೀ ಪ್ರಚಾರಿಣೀ ಸಭೆಯ ಕಾರ್ಯಕಲಾಪಗಳಲ್ಲಿ ವಿದೇಶೀ ಶಬ್ದಗ ಳನ್ನು ಬಳಸಕೂಡದೆಂದೂ ಈ ನಿಯಮವನ್ನು ಉಲ್ಲಂಘಿಸಿದವರಿಗೆ ಪ್ರತಿ ಶಬ್ದಕ್ಕೆ ೧ ಆಣೆ ದಂಡ ವಿಧಿಸಬೇಕೆಂದೂ ಸಭೆಯ ಸದಸ್ಯರು ನಿರ್ಧರಿಸಿ ರುವರು. ಶ್ರೀ ಸಂಪೂರ್ಣಾನಂದರು ಈ ಸಭೆಯ ಅಧ್ಯಕ್ಷರಿರುವರು.

ಚಿಕ್ಕಕತೆ

ಮೋಹವೋ ನೇಹವೋ ?

ಶ್ರೀ. ವ್ಹಿ. ಎಸ್. ಪಾಟೀಲ, ಅಳಕಾವಡಿ

"ಮನುಷ್ಯನಿಗೆ ಹುಚ್ಚು ಹಿಡಿಯಲು ಹಲವು ನೂರೆಂಟು ಕಾರಣಗಳಿವೆ; ಅವರ ವಿಷಾದದೊಂದು ಮೋಹದ ವಸ್ತುವನ್ನು ಕಳೆಕೊಂಡು ಹುಚ್ಚು ಹಿಡಿದ ಜನರ ರೀತಿಯೇ ಬೇರೆ! ಅಲ್ಲವೇನೋ? ರಂಗ ?" ಕೇಳಿದ ನಾಣಿ.

ಸಂಜೆಯಾಗಿತ್ತು. ಇನ್ನೂ ಕತ್ತಲೆ ಪೂರ್ಣ ಬಿದ್ದಿರಲಿಲ್ಲ. ರಂಗ ನಾಣಿಯನ್ನು ಕೂಡಿಕೊಂಡು ತನ್ನ ಹಳ್ಳಿಗೆ ಕರೆಕೊಂಡು ಬಂದಿದ್ದ. ಆ ದಿನ ತಿರುಗಾಡಲಿಕ್ಕೆ ಹೊರಟಿದ್ದರು ಸ್ಟೇಶನ್ ರೋಡಿನಲ್ಲಿ. ಇಬ್ಬರೂ ಕೂಡಿದರೆಂದರೆ ಮನಶ್ಶಾಸ್ತ್ರ ಚರ್ಚೆ ನಡೆಸುವುದು ಅವರ ರೂಢಿಯಾಗಿತ್ತು. ಅದರಂತೆಯೇ ಇಂದೂ ಚರ್ಚೆ ಪ್ರಾರಂಭವಾಗಿತ್ತು.

"ಹೌದು ಹುಚ್ಚು ಹಿಡಿದ ಮೇಲೆಯೂ ಅವರು ತಾವು ಮೋಹಿಸುತ್ತಿದ್ದ ವಸ್ತುವನ್ನು ಕುರಿತು ಬಡಬಡಿಸುತ್ತಿರುತ್ತಾರೆ. ಇದಕ್ಕೊಂದು ಉದಾಹರಣೆ ನನಗೆ ಚನ್ನಾಗಿ ಗೊತ್ತಿದೆ." ಎನ್ನುವ ಹೊತ್ತಿಗೆ ಸ್ಟೇಶನ್ನಿನ ಸಮೀಪದಲ್ಲಿಯೇ ಬಂದಿದ್ದರು. ಸಂಜೆ ಬರಹೋಗುವ ಜನರ ಗೊಂದಲವೂ ಅಂದು ಸ್ಥಿರಲಿಲ್ಲ. ಹೀಗಾಗಿ ಆ ದಿನ ಆ ದಾರಿ ನಿರ್ಜನವಾಗಿತ್ತೆಂದರೂ ಸರಿಯೆ. ತಂಗಳ ಬೀಸತೊಡಗಿತ್ತು. ಇಬ್ಬರೂ ಗೆಳೆಯರು ಎಷ್ಟೋ ಸಲ ಸರಸವಾಗಿ ಗಾಳಿ ಸವಿಯುತ್ತ ನಡೆಯುತ್ತ ಹೊರಟಿದ್ದರು.

ಇಷ್ಟರಲ್ಲಿ ಒಂದು ಕಡೆಯೇ ನಾಯಿಯು ಕೂಗಿಕೊಂಡು ಕೇಳಿತು. "ಇದು ನಾಯಿಯ ಕೂಗಲ್ಲ ನಾಣಿ. ಯಾರೋ ಮನುಷ್ಯರು ನಾಯಿಯ ಅನುಕರಣ ಮಾಡುತ್ತಿದ್ದಾರೆ" ಎಂದ ರಂಗ. "ಸ್ವಲ್ಪ ನಿದಾನಿಸಿ ಕೇಳು, ಗುರುತು ಹಿಡಿಯೋಣ!" ಎಂದ ನಾಣಿ. ಅದು ನಿಜವಾಗಿಯೂ ನಾಯಿಯ ಕೂಗಾಗಿರಲಿಕ್ಕೆ ನಾಯಿಯಂತೆಯೇ ಒಬ್ಬ ಮನುಷ್ಯ ಕೂಗುತ್ತ ಒಂದು ಕಗ್ಗತ್ತಲಲ್ಲಿ ಬಿದ್ದು ಹೊರಳಾಡುತ್ತಿದ್ದ. ಇಬ್ಬರೂ ಹೋಗಿ ನೋಡಿದರು. ಆ ಕೈಯಲ್ಲಿ ಟಾರ್ಚ್ ಹಾಕಿ ನೋಡಿದ ನಾಣಿ. ಹೌದು! ..ನೇ ..ಕ ಆಗಲೇ ನಾ ಹೇಳುತ್ತಿದ್ದೆನಲ್ಲ ಮೋಹದ ವಸ್ತುವನ್ನು ಕಳೆಕೊಂಡು ಹುಚ್ಚು ಹಿಡಿದ ಮನುಷ್ಯನ ಒಂದು ಉದಾಹರಣೆ! ತೋರಿಸುತ್ತೇನೆ ಎಂದೆನ್ನಲ್ಲ-ಇವನೇ! ಪಾಪ! ಏನಾಗಿದೆಯೋ ಇವನಿಗೆ. ಸಾಯುವವನಂತೆ ಸಂಕಟಪಡುತ್ತಿದ್ದಾನೆ. ವಿಚಾರಿಸು" ಕೂಗಿದ. ಪಾಪ ರಾಜಪ್ಪ! ನಾಯಿಯಂತೆ ಕೂಗಿಕೊಂಡು ಪ್ರಾಣ ಬಿಡುವಷ್ಟರಲ್ಲಿ ಮೆಲ್ಲನೇ ಮೋರೆ ಇವರ ಕಡೆಗೆ ಹೊರಳಿಸಿದ. ಅಹಾ! ಏನು ಮೋರೆ! ಮುಳ್ಳು—ಕಲ್ಲು ತಾಕಿ ರಕ್ತಮಯವಾಗಿತ್ತು. ನೋಡಿದವರಿಗೆ ಅಂಜಿಕೆ ಬರುತ್ತಿತ್ತು. "ಅಯ್ಯೋ! ನೋಡಲಿಕ್ಕಾಗದಯ್ಯ ಇದನ್ನು!" ಎಂದು ಮುಖ ತಿರುಗಿಸಿದರು. "ಅಲ್ಲವೋ ರಂಗಾ, ಏನದು ಇವನ ಕತೆ? ನೀನು ಉದಾಹರಣೆಗಾಗಿ ಎತ್ತಿಕೊಂಡದ್ದು ಪ್ರತ್ಯಕ್ಷವಾಗಿಯೇ ನೋಡಲಿಕ್ಕೆ ಸಿಕ್ಕಿತಲ್ಲ! ಇರಲಿ ಏನದು ಇವನ ಕತೆ?"

"ಹಿಂದಕ್ಕೆ ಇದೇ ರಾಜಪ್ಪ ನೌಕರಿ ಮಾಡುತ್ತಿದ್ದನಂತೆ" ರಂಗ ಪ್ರಾರಂಭಿಸಿದ. "ಇದೇ ಊರ ಸ್ಟೇಶನ್ನಿನಲ್ಲಿ ಸಿಗ್ನಲರ್ ಎಂದು. ಮದುವೆಯಾಗಿ ಬಹಳ ದಿನಗಳಿಂದ ಇಲ್ಲಿಯೇ ಕ್ವಾರ್ಟರ್ಸ್‌ಗಳನ್ನು ಕೊಟ್ಟಿದ್ದರಂತೆ. ಯಾವಾಗ ಸ್ಟೇಶನ್ನಿಗೆ ಹೋದರೂ ಅಲ್ಲಿ ರಾಜಪ್ಪನನ್ನು ಕಾಣಬಹುದಾಗಿತ್ತು ಮತ್ತು ಅವನ ಸಂಗಡ ನಾಯಿಯೊಂದು ಯಾವಾಗಲೂ ಬಾಲ ಅಲ್ಲಾಡಿಸುತ್ತಾ ತಿರುಗುತ್ತಿರುವುದು ಕಂಡು ಬರುತ್ತಿತ್ತು. ರಾಜಪ್ಪನಿಗೆ ಹೆಂಡತಿ ಇದ್ದಳಂತೆ ಎಂದೇ ಎಲ್ಲರೂ ಹೇಳುವವರು. ಅದು ನಿಜವೂ ಇರಲಿಕ್ಕೆ ಸಾಕು. ಯಾಕೆಂದರೆ 'ನೀಲವ್ವ' ಎಂಬುದೊಂದು ಹುಡುಗಿ ಅವನ ಮನೆಯಲ್ಲಿ ಅಡಿಗೆ ಮಾಡುತ್ತಿದ್ದಳು. 'ಅವಳು ಯಾರು?' ಎಂದು ಯಾರಾದರೂ ಕೇಳಿದರೆ 'ನನ್ನ ಮಗಳು' ಎನ್ನುತ್ತಿದ್ದ ರಾಜಪ್ಪ. ಅವಳೂ ಅವನಿಗೆ 'ಅಪ್ಪಾ' ಎಂದೇ ಕರೆಯುತ್ತಿದ್ದಳು. ರಾಜಪ್ಪ ಹೆಂಡತಿಯನ್ನು ಕಳೆಕೊಂಡಾಗಿನಿಂದ ಒಂದು ತರಹದ ವಿಚಿತ್ರ ಸ್ವಭಾವವನ್ನು ತಳೆದಿದ್ದನಂತೆ. ಯಾರ ಸಂಗಡಲೂ ಮಾತುಕತೆ ಯೇನೂ ಇಟ್ಟಿದ್ದಿಲ್ಲ. ಮಾತಾಡುವದು ತೀರ ಅವಶ್ಯಕ ಸಂಗತಿ ಪ್ರಸಂಗ ಬಿದ್ದಾಗ ಸ್ಟೇಶನ್ನ ಮಾಸ್ತರರ ಕೂಡ. ಅದೂ ಸ್ವಲ್ಪ. ಒಂದೊಂದು ಬಾರಿ ಮನಸ್ಸು ಬೇಸರಾದಾಗ ಆ ನಾಯಿ—ಅದರ ಹೆಸರು ಮೋತಿ— ಅವರ ಸಂಗಡಲೇ ಮಾತಾಡುತ್ತಿದ್ದನಂತೆ. ಅದಕ್ಕೂ ಇವನ ಭಾಷೆ ತಿಳಿಯುತ್ತಿತ್ತೋ! ಮೌನವಾಗಿ ಕೇಳಿ ಬಾಲ ಕುಣಿಸುತ್ತಿತ್ತಂತೆ!


ಒಂದು ದಿನ ಇದ್ದಕ್ಕಿದ್ದಂತೆ ಮೇಲು ಗಾಡಿಯಲ್ಲಿಯ ಒಬ್ಬನು ನೀಲವ್ವನನ್ನು ತಗೊಂಡು ಹೋಗಿ ಬಿಟ್ಟನಂತೆ! ಪಾಪ, ನೀಲವ್ವ ಬಡವನ ಹೊಟ್ಟೆಯಲ್ಲಿ ಹುಟ್ಟಿ ಹೊಟ್ಟೆಗೆ ಸಿಕ್ಕ ಸಿಕ್ಕ ಹಿಟ್ಟನ್ನೇ ಉಂಡು ಜೀವಿಸುತ್ತಿದ್ದ ಪ್ರಾಣಿ. ಅವಳಿಗೆ ಏನು, ಮುದ್ದಿನ ಆಶೆ ತೋರಿಸಿದನೋ ತಿನಿಸಿನ ಆಶೆ ತೋರಿಸಿದನೋ! ಅಂತೂ ಯಾವನೊ ಒಂದು ದಿನ ಅವಳನ್ನು ಕರೆಕೊಯ್ದು ಬಿಟ್ಟ. ಅಂದಿನಿಂದಲೂ ಜಗತ್ತಿನಲ್ಲಿ ತನ್ನವರು ಎಂಬ ಮನುಷ್ಯ ಪ್ರಾಣಿ ಉಳಿಯಲಿಲ್ಲ! ರಾಜಪ್ಪಗೆ ತನು ಮನೆಯಲ್ಲಿ ಈಗ ಅಳಿರುವನಲ್ಲ...ಹಾಗೆ, ಅವನೇ ಹೋದ ವರುಷ ನೀಲವ್ವನನ್ನು ತನಗೆ ಮದುವೆ ಮಾಡಿಕೊಡು ಎಂದು ಕೇಳಿದ್ದ. ನೀಲವ್ವ ಬಡವಿಯಾಗಿದ್ದರೂ ಹೊಟ್ಟೆಗೆ ಪೂರ ತಿನ್ನಲಿಕ್ಕೆ ಸಿಗದಿದ್ದರೂ ಅಷ್ಟರಲ್ಲಿಯೇ ತೃಪ್ತಿಹೊಂದಿ ಚಿಂತೆಯಿಲ್ಲದೇ ಬೆಳೆದವಳಾದ್ದರಿಂದ ಸುಂದರವಾದ ದೇಹವನ್ನು ಬೆಳೆಯಿಸಿದ್ದಳು. ಹಿಂಗನೂ ಇನ್ನೂರು ರೂಪಾಯಿ ತೆರ ಕೊಡುವೆನೆಂದು ಹೇಳಿದ್ದನಂತೆ. ಆದರೆ ಇದ್ದೊಬ್ಬ ಮಗಳೂ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗಿ ಬಿಟ್ಟರೆ ಮನೆಯಲ್ಲಿ ತಾನೊಬ್ಬನೇ ಆಗುವೆನಲ್ಲ ಎಂದು ಚಿಂತಿಸಿ ಅವಳನ್ನು ಮದುವೆ ಮಾಡಿಕೊಡಲಿಕ್ಕೆ ಹಿಂಜರಿದಿದ್ದನಂತೆ, ರಾಜಪ್ಪ! ಅಂಥವನಿಗೆ ಹೀಗೆಂದ ಮೇಲೆ ಮನಸ್ಸು ತಲ್ಲಣಗೊಳ್ಳದೇ ಇದ್ದೀತೇ? ರಾಜಪ್ಪನಿಗೆ ಹುಚ್ಚು ಹಿಡಿದಂತೆಯಾಯಿತು. ಸ್ಟೇಶನ್ ಮಾಸ್ತರರ ಜೊತೆಗೂ ಮಾತಾಡುವದನ್ನು ಬಿಟ್ಟುಬಿಟ್ಟ! ನಾಯಿ ಮೋತಿ ಜೊತೆಗೇನೇ ತಾಸುತಾಸುಗಟ್ಟಲೆ ಹರಟೆ ಹೊಡೆಯುತ್ತಿದ್ದುದನ್ನು ನೋಡಿದರೆ "ಇವನಿಗೆ ಹುಚ್ಚೇ ಹಿಡಿದಿದೆ, ಇವನನ್ನು ಇನ್ನೂ ನೌಕರಿಯಲ್ಲಿ ಹೇಗಿಟ್ಟುಕೊಂಡಿದ್ದಾರೆ? ಎಂದು ಸಂಶಯ ಬರುತ್ತಿತ್ತು. ಮೋತಿಗೆಯೇ ಮಾತು ಕಲಿಸಿದ್ದ. ಒಂದೊಂದು ಸಾರೆ ಅದಕ್ಕೇ ಸಿಗ್ನಲ್ ಕೆಡವಿ ಬರಲು ಹೇಳುತ್ತಿದ್ದ ರಾಜಪ್ಪ. ಪಾಪ, ಅದು ತಿರುವಿ ಪ್ರಯತ್ನ ಮಾಡಿ ಒಡೆಯನ ಆಜ್ಞೆ ಪಾಲಿಸಿ ಬರುತ್ತಿತ್ತು ಮೋತಿ! ಹೀಗಾಗಿ ಜಗತ್ತಿನಲ್ಲಿ ಅವನಿಗೆ ಆಧಾರ ಸಂಗತಿಯೆಂದರೆ ಮೋತಿ, ಮೋತಿಗೆ ಆಧಾರ ಸಂಗತಿಯೆಂದರೆ ರಾಜಪ್ಪ ಎಂದಾಗಿತ್ತು.

× × ×

"ಒಂದು ದಿನ ರಾತ್ರಿ ಮೋತಿ ಯಾಕೋ ಏನೋ ಹೊರಗೆ ಹೋಯಿತು. ಯಾವ ವಿಧಿ ಅದಕ್ಕೆ ಆ ಬುದ್ಧಿ ಕೊಟ್ಟಿತೋ! ಬಂಡಿಯ ದಾರಿ ಗುಂಟ ಹಾಗೆಯೇ ಹೋಲಿನತ್ತ ಹೋಗಿಬಿಟ್ಟಿತು. ಬೆಳದಿಂಗಳ ಸಮಯ. ಅದಕ್ಕೆ ಸೃಷ್ಟಿ ಸೌಂದರ್ಯ ಸವಿಯ ಬೇಕೆನಿಸಿತ್ತೋ ಏನೋ! ನಿಧಾನವಾಗಿ ಮುಂದೆ ಸಾಗಿತು. ರಾಜಪ್ಪ ಸ್ವಲ್ಪ ನಿದ್ದೆ ಹೋಗಿದ್ದ. ಹೀಗಾಗಿ ಮೋತಿ ಹೊರಗೆ ಹೋದುದನ್ನು ನೋಡಲಾಗಲಿಲ್ಲ. ಆತ ಕನಸು ಕಾಣುತ್ತಿರಬಹುದು. ಕನಸಿನಲ್ಲಿ ಹೆಂಡತಿ ಬಂದಿರಬಹುದು. ಅವಳೊಡನೆ ತನ್ನ ಜೀವನವನ್ನು ವರ್ಣನೆಮಾಡಿ ಹೇಳುತ್ತಿರಬಹುದು. ತನಗೆ ಮತ್ತು ಮೋತಿಗೆ ಇದ್ದ ಸಂಬಂಧವನ್ನು ಚಿತ್ರಿಸುತ್ತಿರಬಹುದು. ಅಥವಾ ಆದಾವ ಕವಿಗನಸನ್ನು ಕಾಣುತ್ತ ನಿದ್ರೆ ಹೋದನೋ ತಿಳಿಯದು. ಹೊರಗಿನ ಅರಿವಿಲ್ಲದೆ ನಿದ್ರೆ ಹೋಗಿದ್ದು ಮಾತ್ರ ನಿಜ..

ಬೆಳಗು ಮುಂಜಾನೆ ಗಾಡಿ ಬರುವದಿತ್ತು. ಸ್ಟೇಶನ್ ಮಾಸ್ತರರು ದಿನದಂತೆ . ರಾಜಪ್ಪನನ್ನು ಎಬ್ಬಿಸುವದೆಂದು ತಿಳಿದು ಗೊಂಟೆ ಹೊಡೆಯುತ್ತಿದ್ದರು. ಆದರೆ ರಾಜಪ್ಪನಿಗೆ ನಿದ್ರೆ ಹತ್ತಿತ್ತು, ಪಾಪ, ಅವರಿಗೇನು ಗೊತ್ತು? ಮೋತಿ ಯಾದರೂ ಇದ್ದಿದ್ದರೆ ಸಿಗ್ನಲ್ ಕೆಡವಿ ರಾಜಪ್ಪನನ್ನು ಎಬ್ಬಿಸುತ್ತಿತ್ತು. ಆದರೆ ವಿಷಮಕಾಲ. ಯಾರೂ ಎಚ್ಚರಿಸಲಿಲ್ಲ. ಗಾಡಿ ಬಂದು ಸಿಗ್ನಲ್ ಕಂಬದಾಚೆ ನಿಂತು ಚೀರಿಕೊಂಡಿತು. ಯಾತನೋ ಒಬ್ಬ ಮಾಸ್ತರರು ಕನ್ನಡ ಶಾಲೆಯ ಮಾಸ್ತರ ನೊಬ್ಬ ಹಿಂದಿನ ದಿನ ಸಂಜೆಗೆ ಆ ಊರಿಗೆ ಬಂದವನು ಮುಂಜಾನೆ ಶಾಲೆಯ ವೇಳೆಗಿಂತ ಮೊದಲೇ ತನ್ನ ಊರಿಗೆ ಮುಟ್ಟೋಣ ಎಂದು ಸ್ಟೇಶನ್‌ಗೆ ಹೋಗಬೇಕಾದುದಿದ್ದುದರಿಂದ ಸ್ಟೇಶನ್ನಿಗೆ ಬಂದಿದ್ದ.

—೧೬ ನೇ ಪುಟ ನೋಡಿರಿ



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಟ ಭವಿಷ್ಯ ಕಥನ ಆಫೀಸ ಮಲ್ಲೇಶ್ವರಂ ಬೆಂಗಳೂರು.

ಮೇ ೨೪ ರಿಂದ ೩೦ ರ ವರೆಗೆ

ಮೇಷ

ಸಂತತಿಗೆ ಸುಖ ಕ್ಲೇಶ. ಆದರೆ ಉಳಿದವರ ಪ್ರಕೃತಿ ಸಮ. ಹಿರಿಯ ಹಿಂದಕರಾದವರ ಸ್ತ್ರೀಯರಿಂದ ಹಿತ್ತುರ ವಚನಗಳು. ಸ್ತ್ರೀಸುಖ ಮಧ್ಯ. ಪ್ರಾಪಂಚಿಕ ಸುಖ ಉತ್ತಮ. ಅತಿಯ ಅತಿಥಿಗಳ ಮೂಲಕ ಮನಸ್ಸಿಗೆ ವಿರಸವೆನಿಸುವದು. ಉದ್ಯೋಗದಲ್ಲಿ ಉತ್ತಮ ಪ್ರಗತಿ ಪ್ರತಿಷ್ಠೆ ಮನಸ್ಸಿನಂತೆ. ಆದರೆ ಲಾಭದಲ್ಲಿ ಸುಖ ಅಷ್ಟಿ. ಮೈತ್ರಿಯಲ್ಲಿ ವಿರೋಧ ಒಂದು ಮಹತ್ವದ ಕಾರ್ಯದ ಬಗ್ಗೆ ಪರಸ್ಪರ ವಿರೋಧಿಯಾದ ಕಲಹ ಸೂಚನೆಗಳ ಮೂಲಕ ಮನಸ್ಸಿಗೆ ಹೊಯ್ದಾಟ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ. ಪ್ರವಾಸಾದಿ ಕಾರ್ಯಗಳು ನೆಟ್ಟಗೆ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆಯ ೨ ಚರಣದವರಿಗೆ ತೊಂದರೆ ಕಡಿಮೆ. ತಾ. ೨೫, ೨೬, ೨೭, ೨೮ ಇವು ಒಳ್ಳೆಯವು.

ವೃಷಭ

ಎಲ್ಲರ ಪ್ರಕೃತಿಗಳೂ ಉತ್ತಮ. ಆದರೆ ಕೆಲವು ಅಪತ್ತಿನಿಂದ ಅಘಾತವಾಗುವ ದುಷ್ಟ ಪ್ರಯತ್ನಗಳು. ಸ್ತ್ರೀ ಮತ್ತು ಸಂತತಿ ಸುಖ ನೆಟ್ಟಗೆ. ಸ್ಥಾವರದಲ್ಲಿ ಹೆಚ್ಚಳ. ವಾಹನ ಸುಖದ ಯೋಗ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ನೆಟ್ಟಗೆ. ಆದರೆ ಸ್ವತಃದ ತಪ್ಪಿನಿಂದಲೇ ಪ್ರತಿಷ್ಠೆಯಲ್ಲಿ ಒಂದಿಷ್ಟು ಕುಂದು. ಅನಿರೀಕ್ಷಿತ ಲಾಭ ಸಂಭವ ಆದರೆ ಅದರಲ್ಲಿ ಪಾಲುಗಾರರಿದ್ದ ಕಾರಣ ಅವರೊಡನೆ ಬಹಳ ವಿರೋಧ. ಉಳಿದ ಮಿತ್ರಸುಖ ಒಳಿತು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಯಶ. ಬೆಟ್ಟಗಿಂತ ಪ್ರವಾಸವೂ ಪತ್ರವ್ಯವಹಾರವೂ ನೆಟ್ಟಗೆ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆಯ ೨ ಚರಣದವರಿಗೆ ತೊಂದರೆ ಕಡಿಮೆ. ತಾ. ೨೪, ೨೮, ೨೯, ೩೦ ಈ ದಿನಗಳು ಒಳ್ಳೆಯವು.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳು ಮತ್ತು ಮನೆಯ ಇನ್ನಿತರರಿಂದ ಬಹಳ ತೊಂದರೆ. ಮನೆಯ ಸಂಗತಿಗಳನ್ನು ಹಿತಶತ್ರುಗಳಿಗೆ ಸ್ವಜನರು ಹೇಳಿಬಿಡುವ ಭಯವಿದೆ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೇ. ಆದರೆ ಲಾಭವೂ ಪ್ರತಿಷ್ಠೆಯೂ ನೆಟ್ಟಗೆ. ಕೆಲ ಸಂಗತಿಗಳಲ್ಲಿ ಇಮ್ಮಡಿ ವೆಚ್ಚ ಮತ್ತು ತೊಂದರೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಸ್ವಜನರಿಂದಲೇ ಅಪಜಯ. ಆದರೆ ಶತ್ರುವಿನ ಮೇಲೆ ಒಳ್ಳೇ ಪರಿಣಾಮ. ಮಿತ್ರಸುಖ ಉತ್ತಮ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆರ್ದ್ರಾದ ಕೊನೆಯ ೨ ಮತ್ತು ಪುನರ್ವಸುದ ಮೊದಲನೆಯ ೨ ಚರಣದವರಿಗೆ ತೊಂದರೆಯಿಂದಲೇ ಯಶ. ತಾ. ೨೫, ೨೬, ೩೦ ಇವು ಒಳ್ಳೆಯವು.

ಕರ್ಕ

ಪ್ರಕೃತಿ ಸಾಧಾರಣ. ಸ್ತ್ರೀ ಸುಖದಲ್ಲಿ ಅಪರಿಹಾರ್ಯ ಕಾರಣಗಳ ಮೂಲಕ ವಿರಸ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಪ್ರತಿಷ್ಠೆಯೂ ಮನಸ್ಸಿನಂತೆ. ಆದರೆ ಲಾಭ ಬಹಳ ಕಡಮೆಯುಳ್ಳದ್ದು. ಅನಾವಶ್ಯಕ ವೆಚ್ಚವೂ ಆಗಬಹುದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಅನುಕೂಲತೆ ನೆಟ್ಟಗೆ. ಆದರೆ ವೆಚ್ಚವೂ ತೊಂದರೆಯೂ ಬಹಳ. ಪ್ರವಾಸ ಪತ್ರವ್ಯವಹಾರಗಳಿಗಿಂತ ಭೆಟ್ಟಿಯೇ ಹೆಚ್ಚು ನೆಟ್ಟಗೆ. ಪುಷ್ಯಾದ ೧ ನೇ ೪ ನೇ ಮತ್ತು ಆಶ್ಲೇಷಾದ ೧ ನೇ ೨ ನೇ ೪ ನೇ ಚರಣದವರಿಗೆ ತೊಂದರೆ ಕಡಿಮೆ. ತಾ. ೨೪, ೨೭, ೨೮ ಇವು ಒಳ್ಳೆಯವು.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ನೆಟ್ಟಗೆ. ಆದರೆ ಹೆಂಡತಿಗೆ ಮಾತ್ರ ಪೀಡೆಯಿದೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಉತ್ತಮವೇ. ಎಲ್ಲರನ್ನೂ ಬೆರಗುಗೊಳಿಸುವ ಸಾಹಸ ಒಂದು ಘಟಿಸುವದು ಹಾಗೂ ಅದರಲ್ಲಿ ಉತ್ತಮ ಯಶ ದೊರೆಯುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲವೂ ಅಸಾಧಾರಣವಾಗಿ ಹೆಚ್ಚು ಪಕ್ಷ ಉತ್ತಮ. ಮಿತ್ರಸುಖವು ನೆಟ್ಟಗಿದ್ದರೂ ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರುಬಲವೇ ಹೆಚ್ಚು. ಮನೆಯ ಕೆಲಸಗಾರರಿಗೆ ಏರುಪೇರು ಅರ್ಥಗಳನ್ನು ಕಳೆದ ಸಂಭವ. ಪ್ರವಾಸಾದಿ ಕಾರ್ಯಗಳು ಹಿತಾವಹ. ಮಘಾದ ಕೊನೆಯ ೨ ಮತ್ತು ಪೂರ್ವಾದ ಮೊದಲನೆಯ ೨ ಚರಣದವರಿಗೆ ಹೆಚ್ಚು ಉತ್ತಮ. ತಾ. ೨೪, ೨೬, ೩೦ ಇವು ಒಳ್ಳೆಯವು.

ಕನ್ಯಾ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಬಹಳ ಉತ್ತಮವಾಗಿದೆ. ಉಳಿದವರಿಗಿಂತ ಹೆಂಡತಿ ಮಕ್ಕಳುಗಳಿಂದ ಮನಸ್ಸಮಾಧಾನ ದೊರೆಯುವದು ಹೆಚ್ಚು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಎಲ್ಲವೂ ಬಹಳ ಚನ್ನಾಗಿವೆ. ಸ್ತ್ರೀಯರಲ್ಲಿ ಹೆಚ್ಚು ಆದರಭಾವ. ಖರ್ಚು ಹೆಚ್ಚಾದರೂ ನಿರೀಕ್ಷೆಗಿಂತ ಉದ್ದೇಶಸಾಧನೆ ಬೇಗನಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಗಳಿಗೂ ಸಮಾಪತ್ತಿ. ಪ್ರವಾಸಾದಿ ಕಾರ್ಯಗಳು ಹಿತಾವಹ. ಉತ್ತರಾದ ಕೊನೆಯ ೨ ಹಸ್ತಾದ ಮೊದಲನೆಯ ೨ ಚರಣದವರಿಗೆ ಹೆಚ್ಚು ಉತ್ತಮ. ತಾ. ೨೪, ೨೭, ೨೮, ೨೯ ಇವು ಒಳ್ಳೆಯವು.

ತುಲಾ

ಪ್ರಕೃತಿ ಸ್ತ್ರೀ ಸುಖ ನೆಟ್ಟಗೆ. ಆದರೆ ಮಕ್ಕಳ ವರ್ತನೆಯು ಅಪ್ರಿಯ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭ ಇವೆಲ್ಲವೂ ಅತ್ಯುತ್ತಮ. ಅನಿರೀಕ್ಷಿತ ಲಾಭ ಸಂಭವವೂ ಉಂಟು. ವಾದದಲ್ಲಿ ಸ್ಪರ್ಧೆಯಲ್ಲಿ ಉತ್ತಮ ಯಶ. ಮಿತ್ರಸುಖವೂ ನೆಟ್ಟಗೆ. ಪ್ರವಾಸವೂ ಪತ್ರವ್ಯವಹಾರವೂ ಭೆಟ್ಟಿಗಿಂತ ಉತ್ತಮ. ಆದರೆ ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲನೆಯ ೨ ಚರಣದವರಿಗೆ ತೊಂದರೆಯಿಂದಲೇ ಯಶ. ತಾ. ೨೪, ೨೮, ೨೯, ೩೦ ಇವು ಒಳ್ಳೆಯವು.

ವೃಶ್ಚಿಕ

ಪ್ರಕೃತಿಯೂ ಪ್ರಾಪಂಚಿಕ ಸುಖವೂ ಉತ್ತಮ. ಆದರೆ ಪರಸ್ತ್ರೀ ವಿಷಯದಲ್ಲಿ ಕುಬುದ್ಧಿ. ಮಕ್ಕಳ ಉನ್ನತಿ. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅನಿರೀಕ್ಷಿತ ಲಾಭವೂ ಉಂಟು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆಯ ಯಶ. ಬುದ್ಧಿಶಕ್ತಿಯ ಅನೇಕ ಕಾರ್ಯಗಳಾಗುವವು. ಪ್ರವಾಸಾದಿ ಕೆಲಸಗಳು ಹಿತಾವಹ. ಅನುರಾಧಾದ ೧ ನೇ ೪ ನೇ ಮತ್ತು ಜ್ಯೇಷ್ಠಾದ ೧ ನೇ ೨ ನೇ ೪ ನೇ ಚರಣದವರಿಗೆ ಹೆಚ್ಚು ಉತ್ತಮ. ತಾ. ೨೪, ೨೫, ೨೬, ೨೭ ಒಳ್ಳೆಯವು.

ಧನು

ಪ್ರಕೃತಿ, ಸ್ತ್ರೀ ಸುಖ ಉತ್ತಮ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮವೇ. ಮಕ್ಕಳಿಂದ ಲೋಕೋಪಯೋಗಿ ಕೃತ್ಯಗಳು. ಆದರೆ ಅವರಲ್ಲಿ ಕೆಲವ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಎಲ್ಲ ಉತ್ತಮವೇ. ಆದರೆ ಅದಕ್ಕೋಸ್ಕರ ಮನಸ್ಸಿನ ವಿರುದ್ಧ ವಾದ ಮಾರ್ಗವನ್ನು ಅವಲಂಬಿಸುವ ಪ್ರಸಂಗ. ವಾದದಲ್ಲಿ ಸ್ಪರ್ಧೆಯಲ್ಲಿ ಯಶ. ಪ್ರವಾಸ ಹಾಗೂ ಭೆಟ್ಟಿಗಿಂತ ಪತ್ರವ್ಯವಹಾರವು ನೆಟ್ಟಗೆ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲಿನ ೨ ಚರಣದವರಿಗೆ ತ್ರಾಸ ಕಡಿಮೆ. ತಾ. ೨೪, ೨೬, ೨೭, ೨೮ ಒಳ್ಳೆಯವು.

ಮಕರ

ನಿಮ್ಮ ಪ್ರಕೃತಿ ನೆಟ್ಟಗೆ ಆದರೆ ಮನೆಯವರು ಕ್ಷಳದು ಕೇಡುವ ಸಂಭವ. ಅನೇಕ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಿಮೆಯೇ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಆದರೆ ಪ್ರತಿಷ್ಠೆ ನೆಟ್ಟಗೆ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರುಬಲವೇ ಹೆಚ್ಚು. ಕೆಲವು ಧರ್ಮದ ಕೆಲಸಗಳಾಗುವವು. ಧಂಡೆಗೆ ಮರಿಗಿಂತ ನೌಕರಿ ಮಾಡುವವರಿಗೆ ತ್ರಾಸ ಕಡಿಮೆ. ಪ್ರವಾಸಾದಿ ಕೆಲಸಗಳಲ್ಲಿ ತೊಂದರೆಯಿದೆ. ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣದ ಮೊದಲನೆಯ ೨ ಚರಣದವರಿಗೆ ತೊಂದರೆ ಕಡಿಮೆ. ತಾ. ೨೪, ೨೯, ೩೦, ಇವು ಒಳ್ಳೆಯವು.

—೧೬ ನೇ ಪುಟ ನೋಡಿರಿ

ವರ್ಷ ೫

Reg No. B. 3148

LICENCE No. 3
Licensed to Post without Prepayment

KARMAVEER 24-5-48

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

Mr. Jinnah :
by Prof. V. N. Naik, M. A. Publishers: Sadbhakti Publications, 12, Homji St., Fort Bombay. Dy. 8 vo. 88 pp. Rs. 4-8.

ಪಾಕಿಸ್ತಾನದ ನಿರ್ಮಾಪಕ ಮಿ. ಮಹಮ್ಮದಾಲಿ ಜಿನ್ನಾ ಅವರು ಹಿಂದೀ ರಾಜಕಾರಣದ ನಿಗೂಢ ಪುರುಷರೆಂದು ಹೇಳಬಹುದು. ಹಿಂದೀ ರಾಷ್ಟ್ರೀಯತೆಯ ಇತಿಹಾಸದಲ್ಲಿ ಅವರಷ್ಟು ಸಂಪೂರ್ಣ ಬದಲಾಯಿಸಿ ಬಿಟ್ಟುಕೊಂಡವರು ಬೇರೆ ಇಲ್ಲ. ದಾದಾಭಾಯಿ ನೌರೋಜಿಯ ಕಾರ್ಯದರ್ಶಿಯಾಗಿ ರಾಜಕಾರಣದಲ್ಲಿ ಪ್ರವೇಶಿಸಿದ ಅವರು ಒಂದು ಕಾಲದಲ್ಲಿ ಜಾತೀಯತೆಯ ಎಂಥ ಕಟ್ಟು ವೈರಿಗಳಾಗಿದ್ದರೆಂದರೆ ಅಲಿ ಬಂಧುಗಳನ್ನು ಸಾರ್ವಜನಿಕ ಸಭೆಯಲ್ಲಿ ಅವರ ಧಾರ್ಮಿಕ ಪದವಿಯಾದ "ಮೌಲಾನಾ" ಎಂಬ ಗೌರವವಾಚಕ ಶಬ್ದದಿಂದ ಸಂಬೋಧಿಸಲು ನಿರಾಕರಿಸಿದ್ದರು. ಕಾಂಗ್ರೆಸ್ ಲೀಗುಗಳಲ್ಲಿ ಐಕ್ಯವನ್ನುಂಟುಮಾಡಿದರೆಂದೇ ಅವರು ಮುಸ್ಲಿಂ ಲೀಗಿನ ಅಧ್ಯಕ್ಷತೆಯ ಚುಕ್ಕಾಣಿ ಅನೇಕ ವರ್ಷಗಳ ವರೆಗೆ ಅವರಿಗಾಗಿ ಕಾಯ್ದಿರಿಸಿದರು. ಇಂಥವರು ಕಲೆಯಿಂದ ಕಾಲದ ವರೆಗೂ ಜಾತೀಯ ವಿಷವನ್ನು ತುಂಬಿಕೊಂಡ ಧರ್ಮವೀರರಾಗಿ ನಿರ್ಭ್ಯಾಗ ಜಾಣ್ಮೆ ನೀತಿಯಿಂದ ಮುಸ್ಲಿಮರೆಂದು ಭಾರತದ ಒಂದು ತುಣುಕನ್ನು ಕತ್ತರಿಸಿಕೊಂಡದ್ದು ಇತಿಹಾಸದ ವಿಚಿತ್ರಗಳಲ್ಲೊಂದು. ಇದು ಏಕೆ, ಹೇಗೆ ಸಾಧ್ಯವಾಯಿತು? ಈ ಪ್ರಶ್ನೆಗೆ ಉತ್ತರ ದೊರಕಿಸಲು ಪ್ರೊ. ನಾಯಕರು ಜಿನ್ನಾ ಸಾಹೇಬರ ರಾಜಕೀಯ ಚರಿತ್ರವನ್ನು ಪೃಥಕ್ಕರಿಸಿ ಬೆಳೆಸಿದ್ದಾರೆ. ಜಿನ್ನಾ ಸಾಹೇಬರ ಬಗ್ಗೆ ಜನರಾಡುವದೆ ಅಪರಾಧವನ್ನು ಅವರು ಸ್ವತಃ ಜಿನ್ನಾ ಹಾಗು "ಗಾಂಧಿ ಸರ್ವಾಧಿಕಾರಕ್ಕೆ" ಮೈಯೊಡ್ಡಿದ ಕಾಂಗ್ರೆಸ — ಇವೆರಡು ಪಕ್ಷಗಳಲ್ಲಿ ಸಮನಾಗಿ ಹಂಚುವ ಸಾಹಸ ಮಾಡಿದ್ದಾರೆ. ಕಾಂಗ್ರೆಸಿನ ತಪ್ಪು ತಡೆಗಳನ್ನು ಜಿನ್ನಾ ಸಾಹೇಬರು ಜಾಣತನದಿಂದ ತಮ್ಮ ಧ್ಯೇಯ ಸಾಧನೆಗಾಗಿ ಉಪಯೋಗಿಸಿಕೊಂಡರೆಂಬ ಮಾತನ್ನು ಲೇಖಕರೊಡನೆ ನಾವೂ ಒಪ್ಪಬಹುದು. ಜಿನ್ನಾರ ದೈರ್ಯ, ಶಾಣ್ಮೆ, ಹಟ, ಸ್ಪಷ್ಟವಾದಿತ್ವ ಇವೆಲ್ಲವುಗಳಿಗೆ ಲೇಖಕರಂತೆ ನಾವೂ ನಮೋ ನಮೋ ಎನ್ನಬಹುದು. ಆದರೆ ರಾಜಕಾರಣ ಚರ್ಚೆ ಮತ್ತು ವ್ಯಕ್ತಿಯ ಸ್ವಭಾವ ಪರೀಕ್ಷೆಯ ಕೆಲಸಕ್ಕೆ ಕೈಹಾಕಿದ ಅವರು ಜಿನ್ನಾರ ರೂಪಾಂತರಕ್ಕೆ ಕೊಟ್ಟ ಕಾರಣಗಳಾಗಲಿ ವಿವರಗಳಾಗಲಿ ತರ್ಕ ಬದ್ಧವೂ ಇಲ್ಲ ಮನವಟ್ಟುವಂಥವೂ ಇಲ್ಲ. ಲೇಖಕರು ಕೊಟ್ಟ ಸಂಗತಿಗಳ ಮೇಲೆಯೇ ನಾವು ಲೇಖಕರ ನಿರ್ಣಯಕ್ಕಿಂತ ಭಿನ್ನವಾದ ಸಿದ್ಧಾಂತಕ್ಕೆ ಬರಬಹುದೆಂದು ತೋರುತ್ತದೆ— ಜಿನ್ನಾರು ಮಹತ್ವಾಕಾಂಕ್ಷಿ ಮನೋವೃತ್ತಿಯವರು. ಕಾಂಗ್ರೆಸ್ಸು ೧೯೨೦ ರ ನಂತರ ಸ್ವೀಕರಿಸಿದ ಕ್ರಾಂತಿ ಮಾರ್ಗ ಅವರಿಗೆ ಒಪ್ಪದೆ ಅವರು ಅದನ್ನು ಬಿಟ್ಟು ಹೋದರು. ಮುಸ್ಲಿಂ ಲೀಗನ್ನು —ಒಟ್ಟು ಮುಸ್ಲಿಂ ಜಾತಿಯನ್ನು— ಶುದ್ಧ ರಾಷ್ಟ್ರೀಯತೆಯತ್ತ ಹೊರಳಿಸುವಲ್ಲಿ ಅವರು ಸ್ವಲ್ಪವೂ ಯಶಸ್ವಿಯಾಗಲಿಲ್ಲ. ಅವರು ಯಶಸ್ಸಿಗೆ ತೀರ ಸಮೀಪ ಬಂದಾಗಲೆಲ್ಲ ಬ್ರಿಟಿಶ ಸರಕಾರವಾಗಲಿ ಶ್ರೀಮಂತ ವಿಕ ಮಾತ್ರ ಮುಸ್ಲಿಂ ಪ್ರತಿಗಾಮಿ ನಾಯಕರಾಗಲಿ ಕಾಲದ್ದಿಕೊಡಲು ಸಿದ್ಧರಾಗಿರುತ್ತಿದ್ದರು. ಜಿನ್ನಾರು ಸಂಪೂರ್ಣವಾಗಿ ಕಾಂಗ್ರೆಸ್ಸಿನ ವಿರುದ್ಧ ಮುಖ ತಿರುಗಿಸುವ ವರೆಗೂ ಲೀಗಿಗೆ ಬ್ರಿಟಿಶರು ವಿನಯಮಹತ್ವ ಕೊಡದೆ ಆ ನಂತರ ಅದನ್ನು ದ ಪಸ್ಲಿಂ ಪ್ರತಿನಿಧಿಯೆಂದೊಪ್ಪಿಕೊಂಡರು. ಜಿನ್ನಾರ ಶಾಣ್ಮೆ ಎಷ್ಟೇ ಇದ್ದರೂ ಅದು ಅವರ ಮಹಾಗಿರಲಿಲ್ಲ. ಅವರು ಮುದುಕರಾಗುತ್ತ ನಡೆದರು. ಅವರ ಪಕ್ಷಿಯೂ ಎರಡನೆ ಸ್ಥಾನವನ್ನು ಒಪ್ಪ ಬದುಕಲ್ಲ ಅದ್ವಿತೀಯರಾಗಿ ಮೆರೆಯುವ ಅಧಿಕಾರ ಲಾಲಸೆ ಅವರ ಜೀವನದಲ್ಲಿ ಹಾಸು ಹೊಕ್ಕಾಗಿತ್ತು. ರಾಷ್ಟ್ರೀಯತೆಯ ಸ್ತರ ಮೇಲಸದಿಂದ ಮುಸ್ಲಿಮಮನಸ್ಸನ್ನು ಆಕರ್ಷಿಸುವದಾಗಲಿ ಅಧಿಕಾರಸ್ಥಾನಕ್ಕೆ ನಿಜ್ಜವಕ ಇರುವದಾಗಲಿ ಸಾಧ್ಯವಿಲ್ಲೆಂದು ಅವರು ಮನಗಂಡರು. ಜಾತೀಯತೆಯು ಅವಶ್ಯರವೊಂದೇ ಅಧಿಕಾರಕ್ಕೆ ತಾರಕವೆಂದು ಕೊಂಡು ಆ ದಾರಿಯಲ್ಲಿ ನಡೆದು ಇಷ್ಟ ಸಾಧನೆ ಮಾಡಿಕೊಂಡರು. ಇದು ಹೊರತು ಮತ್ತಾವ ಅರ್ಥವೂ ಜಿನ್ನಾರ ಕೃತಿಗೆ ಕಾರಣವೆಂದು ಕಾಣುವದಿಲ್ಲ. ಕಾಂಗ್ರೆಸ್-ವಿರೋಧಿ ಗಾಂಧೀ ವಿರೋಧಿ ಮನಃಪ್ರವೃತ್ತಿ ಲೇಖಕರ ಸತ್ಯಾನ್ವೇಷಣ ಶಕ್ತಿಯನ್ನು ಕುಂಠಿತಗೊಳಿಸಿದೆಯೆನ್ನದೆ ವಿಧಿಯಿಲ್ಲ.

ಪ್ರೊ. ನಾಯಕರು ಕೆಲವು ಪ್ರಚಲಿತ ಸಿದ್ಧಾಂತಗಳನ್ನು ಖಂಡನಗೊಳಿಸಿ ಉಪಕಾರ ಮಾಡಿದ್ದಾರೆ. ಕವಿ ಇಕಬಾಲರು ಶುದ್ಧ ರಾಷ್ಟ್ರೀಯರಾಗಿದ್ದರೆಂದೂ ಜಿನ್ನಾರ ಪಾಕಿಸ್ತಾನಕ್ಕೆ ವಿರೋಧಿಗಳಾಗಿದ್ದರೆಂದೂ ನಂಬಿಕೆ ಹಬ್ಬಿದೆ. ಇಕಬಾಲರ ಲೇಖನ ಭಾಷಣ ಪತ್ರಗಳಿಂದಲೇ ಲೇಖಕರು ಈ ಮಾತನ್ನು ಸಮರ್ಪಕವಾಗಿ ನಿರಾಕರಿಸಿದ್ದಾರೆ.

ಉಷಾ(ವಾರ್ಷಿಕ ಸಂಚಿಕೆ)

ಪ್ರಕಾಶಕರು ಮತ್ತು ಸಂಪಾದಕರು ಶ್ರೀ. ಎಸ್. ನಂಜಪ್ಪನವರು. ಪುಟ ೧೨೪. ಬೆಲೆ ೧ ರೂ.

ಬೆಳ್ಳಿಯ ಹಾಳೆಯ ಮುಖಪ್ರೋಲೆಯ ಈ ವಿಶೇಷಾಂಕದಲ್ಲಿ ಪ್ರಸಿದ್ಧ ಲೇಖಕರ ೨೪ ಲೇಖನಗಳಿವೆ. ಯುಗಾದಿಗೆ ಹೊರಬರಬೇಕಾಗಿದ್ದ ಈ ಸಂಚಿಕೆ ತಡವಾಗಿ ಹೊರಬಿದ್ದರೂ ತನ್ನ ಬರಹಗಳ ಹೂರಣದಿಂದ ರಸಿಕರ ಕ್ಷಮೆಗೆ ಪಾತ್ರವಾಗಿದೆ. ಆದರೆ ಅಚ್ಚಿನ ದೋಷಗಳ ಹಾವಳಿಯನ್ನು ೨ ನೆಯ ಲೇಖನದಲ್ಲೇ ಎದುರಿಸಬೇಕಾಗುತ್ತದೆ. ಈ ದೋಷಗಳನ್ನು ಅಲ್ಪವೆಂದು ಗಣಿಸಲು ಯಾರಿಗೂ ಸಾಧ್ಯವಿಲ್ಲವೆನ್ನುವಂತಿದೆ. ಶ್ರೀಗಳಾದ ಶ್ರೀರಂಗರು, ಮಾ. ನಂ ನಂಜಪ್ಪನವರು, ಬಿ ಎಚ್. ಶ್ರೀಧರರು, ವಿ.ಜಿ ಭಟ್ಟರು, ಗರಗಪ್ಪ ಪಾಲೆಯವರು, ಮುಂತಾದವರ ಬರಹಗಳಿಂದ ಸಂಚಿಕೆಯು ಘನತೆಯ ಮಟ್ಟವನ್ನು ಮುಟ್ಟಿದೆ. ರಸಿಕರ ಭಾವನೆ ಮತ್ತು ವಿಚಾರಗಳನ್ನು ಇಂಥ ಲೇಖನಗಳು ಉನ್ನತಿಗೊಯ್ಯುದಿರವು ಎಂಬ ಕಾರಣದಿಂದ ಉಷೆಗೆ ಯಶಸ್ಸು ನಿಶ್ಚಿತವೆಂದು ಧಾರಾಳವಾಗಿ ಹೇಳಬಹುದು.

ವಿಲಕ್ಷಣ ವಿಮರ್ಶೆ

ವಿಮರ್ಶೆಯೊಂದು ಕಲೆ ಎಂದು ವಿದ್ವಾಂಸರೆನ್ನುತ್ತಾರೆ. ಸಹೃದಯನು ಕಾವ್ಯಾವಲೋಕನದಿಂದ ತನಗಾದ ಅನುಕೂಲ ಪ್ರತಿಕೂಲ ಸಂವೇದನೆಗಳನ್ನು ಇದ್ದಕ್ಕಿದ್ದ ಹಾಗೆ ಇದ ವುದಕ್ಕೆ ವಿಮರ್ಶೆಯನ್ನುತ್ತಾರೆ. ಒಂದು ನಾಡಿನ ಸಾಹಿತ್ಯ ಪರಂಪರೆಗನುಗುಣವಾಗಿ ಅಲ್ಲಿಯ ರಸ ರುಚಿಗಳ ಸಾಮಾನ್ಯ ದೃಷ್ಟಿ ನಿರ್ಣೀತವಾಗಿರುತ್ತದೆ, ರೂಢಿಯಲ್ಲಿ ನಿಂತಿರುತ್ತದೆ. ಅವು ವಿಮರ್ಶೆಗೆ ಕೈದೀಪಗಳಾಗುತ್ತವೆ. ಸಾಹಿತ್ಯವೊಂದು ಕಲೆಯಾದರೂ ಬೌದ್ಧಿಕ ಅಂಶಕ್ಕೆ ಅಲ್ಲಿ ಸ್ಥಾನವಿದೆಯಾದುದರಿಂದ ವಿಮರ್ಶೆಗೆ ವಿಶೇಷ ಮಹತ್ವ ಬಂದಿದೆ. ಸಾಹಿತ್ಯವು ಬುದ್ಧಿ ಭಾವನೆಗಳೆರಡಕ್ಕೂ ಆಹಾರವಾಗಬಲ್ಲದು. ಅದರಿಂದ ಸಹೃದಯರಿಗಾದ ಕಾವ್ಯಾನುಭವವನ್ನು ರೂಢ ರುಚಿಯ ಒರೆಗೆ ಹಿಡಿದ್ಯ ಬೌದ್ಧಿಕ ನ್ಯಾಯ ನಿರ್ಣಯಕ್ಕೆ ಅವಕಾಶವಿದೆ. ಆದರೆ ಸರಕಾರೀ ನೌಕರರಿಗೆ ಅರ್ಥಾಸತ್ಯವಿರುವಂತೆ ವಿಮರ್ಶಕನಿಕ್ಕಿಲ್ಲ. ಹೀಗಾಗಿ ಬರಹಗಾರ ಮತ್ತು ವಿಮರ್ಶಕರೆಂಬು ಅನಿಯಂತ್ರಿತರಾಗಿ ನಾಯಕೊಡೆಯುಂತೆ ಹೆಚ್ಚುತ್ತಿದ್ದಾರೆ.

'...ಕರ್ನಾಟಕ' ಎಂಬ ಒಂದು ತ್ರೈಮಾಸಿಕದಲ್ಲಿ 'ಹೂಬಳ್ಳಿ' ಎಂಬ ಕವನ ಸಂಗ್ರಹದ ವಿಮರ್ಶೆ ಪ್ರಕಟವಾಗಿದೆಯೆಂದೂ ಅದರಲ್ಲಿ ವ್ಯಾಹತಿಯ ವಿಲಕ್ಷಣ ನಿದರ್ಶನಗಳು ಕಾಣುವುವೆಂದೂ ಗುಂಡೋಪದರರ ವರದಿಯಿಂದ ತಿಳಿದುಬರುತ್ತದೆ. ೬—೭ ಪುಟಗಳಲ್ಲಿ ಹರಿದ ಉತ್ತವಿಮರ್ಶೆಯಲ್ಲಿ ಮುಕ್ಕಾಲು ಭಾಗದ ತುಂಬ ಗ್ರಂಥಕರ್ತನ ಕಾವ್ಯಶಕ್ತಿಯನ್ನು ಸೋದಾಹರಣ ಕೊಂಡಾಡಿ ಕಡೆಯಲ್ಲಿ ಅತನು ಪ್ರಸಿದ್ಧ ಪರರ ಮಾನ ಕವಿಯೊಬ್ಬನ ಛಾಯಾಜೀವಿ ಎಂದು ನುಡಿದು 'ಎಲ್ಲ ಬಣ್ಣ ಮಸಿ ನುಂಗಿತು' ಎಂಬಂತೆ ಮಾಡಲಾಗಿದೆ. ಒಬ್ಬನನ್ನು ಅಟ್ಟದ ವರೆಗೆ ಏರಿಸಿ ಹಠಾತ್ತನೆ ಪಾತಾಳಕ್ಕೆ ಕೈಬಿಟ್ಟಂತೆ ಮಾಡಿದ ಈ ಸಂಕೀರ್ಣ ವಿಮರ್ಶೆಯಲ್ಲಿ ಇಲ್ಲದ ಗುಣ ಮತ್ತು ದೋಷಗಳನ್ನು ಆರೋಪಿಸಿ, ಇರುವದನ್ನು ಮರೆಮಾಚಿರುವುದೇ ವಿಲಕ್ಷಣವಾದ ಸಂಗತಿ. ಗ್ರಾಮ್ಯ ತುಂಬಿದ ಸಂಗ್ರಹದಿಂದ ೨—೩ ಶಬ್ದಗಳನ್ನು ಮಾತ್ರ ಅಸಾಧುವೆಂಬಲ್ಲಿ ಔಚಿತ್ಯವೇನು? 'ಅರ್ಥ ಕೈಮೀರಿದೆ' ಎಂದರೆ ಅರ್ಥವೇನು? ಉಪಮೆ ಚೆನ್ನಾಗಿಲ್ಲ ಎಂದರದು ಹೇಗೆ? 'ಹೆಸ್ಸಗೆ'ಯ ರೂಪಸಿದ್ಧಿಯ ಬಗ್ಗೆ ಮಾತಿಲ್ಲ. ಬೇಂದ್ರೆ ಛಂಧಸ್ಸಿನಲ್ಲಿ ಬರೆದದ್ದನ್ನು 'ಶ್ರೀ'ಯವರ ಕವನದ ಧಾಟಿಯಲ್ಲಿ ಬರೆದದ್ದು ಎಂದರೆ ಅದು ವಿಶುತೆಯ? ಗುಣವೇ? ದೋಷವೆ? ಇದೊಂದು ಆಧುನಿಕ ವಿಮರ್ಶೆಯ ಮಾದರಿ. 'ಲೋಕದೋಷಗಳನ್ನು ಸರಿಪಡಿಸಿಕೊಂಡಲ್ಲಿ ಎಲ್ಲ ಸರಿಹೋಗುತ್ತದೆ' ಎಂಬುದು ಪ್ರಸ್ತುತ ಗ್ರಂಥದ ವಿಮರ್ಶೆಗೆ ಸಂಬಂಧಿಸುವುದೋ? 'ಭಿನ್ನರುಚಿರ್ಲೋಕಃ' ಎಂಬ ಮಾತಿನ ಜೊತೆಗೆ ವಿಮರ್ಶಕಾ ವಿಲಕ್ಷಣಾಃ ಎನ್ನಬೇಕಾಯಿತಲ್ಲವೆ?

Lecturing— ಭಾಷಣ ಕೊಡುವುದು ಇಂದಿನ ಯುಗಧರ್ಮವಾಗಿಹೋಗಿದೆ. ಎಲ್ಲ ವಸ್ತುಗಳನ್ನೂ ಭಾಷಣ ಶೈಲಿಯಿಂದ ಹೇಳಿಬಿಟ್ಟರೆ ಆಗಿ ಹೋಯಿತು ಎಂದು ಇಂದಿನ ಬರಹಗಾರರು ತಿಳಿದುಕೊಂಡಂತಿದೆ. ದಿನಹೋದಂತೆ ಮನುಷ್ಯನ ನೀತಿಯ ನೆಲೆ ಕೆಳಗಿಳಿದು 'ಸಮಾಜ' ಹೋಗಿ 'ಸಮಜ' (ಪಶುಸಮೂಹ) ಆಗುತ್ತಿರುವಂತೆ ಇತ್ತಿತ್ತ 'ಭಾಷಣ' ವಿಶ್ವವ್ಯಾಪಿಯಾಗುತ್ತ ಹೋಗಿ 'ಭಷಣ' (ಬೊಗಳಿಕೆ)ವಾಗಹತ್ತಿರುವುದು ಶೋಚನೀಯವಲ್ಲವೆ? ವಿಮರ್ಶೆ, ಪ್ರಬಂಧ, ನಾಟಕಯಾವುದನ್ನು ತೆಗೆದುಕೊಂಡರೂ ಅದರಲ್ಲಿ ತರ್ಕಶುದ್ಧ ವಿಚಾರಕ್ಕೆ ಎಡೆಯೇ ಇಲ್ಲ; ಅಸಂಬದ್ಧತೆಯ ತಾಂಡವ ಎಲ್ಲಿ ನೋಡಿದರೂ! ಇದು ನಾಗರಿಕತೆಯ ಮುನ್ನಡೆಯ ಕುರುಹೇ?

— 'ಅರ್ಜುನ'

ಮೋಹವೋ ನೇಹವೋ ?

(೧೫ ನೇ ಪುಟದಿಂದ ಮುಂದರಿದುದು)

ಅವನೇ ಗಾಡಿ..ಸಿಗ್ನಲ್ಲಿನಾಚೆ ನಿಂತುದನ್ನು ಕಂಡು ಧುಮಿಕಿಬಿದ್ದು ಸ್ಟೇಶನ್ ಮಾಸ್ತರರನ್ನೆಬ್ಬಿಸಿಬಿಟ್ಟ. ಸ್ಟೇಶನ್ ಮಾಸ್ತರರು ನಿದ್ದೆಗಣ್ಣಿನಲ್ಲಿಯೇ ರಾಚಪ್ಪನನ್ನು ಬಡಿದೆಬ್ಬಿಸಿ ಸಿಗ್ನಲ್ ಕೆಡವಲು ಹೇಳಿದರು. ಪಾಪ! ರಾಚಪ್ಪ ಹಿಂದು ಮುಂದು ವಿಚಾರ ಮಾಡದೇ ಸಿಗ್ನಲ್ ಕೆಡವಿ ಬಂದು ಮೋತಿಯನ್ನು ಹುಡುಕುತ್ತಾನೆ! ಎಲ್ಲಿ ಮೋತಿ?! ಮೋತಿ ಇಲ್ಲದೇ

ಅವನಿಗೆ ಜೀವನವು ಮರಳುಗಾಡಾಯಿತು ಹುಚ್ಚನಂತೆ ತಿರುಗಾಡಿದ್ದ. ಸ್ಟೇಶನಾದಲ್ಲಿಯೇ ಎಲ್ಲ ಕಡೆಗೆ ಮೋತಿಯನ್ನು ಹುಡುಕಾಡಿ ಬಂದ. ಆದರೆ– ಮೋತಿ! ಮೋತಿ ಎಲ್ಲಿ? ನೆನಪು ಮಾಡಿಕೊಂಡ ಹಿಂದಿನ ದಿನದ ಕಾರ್ಯಕಲಾಪಗಳನ್ನು ಮೆಲುಕುಹಾಕಿದ. ಮೋತಿಯನ್ನು ಲೈಟು ಹಚ್ಚಲು ಕರಕೊಂಡು ಹೋಗಿ ಅಲ್ಲಿ ಪೂಲಿನ ಹತ್ತಿರ ಇದ್ದ ಪೊದೆಯಲ್ಲಿಯ ಮೊಲವನ್ನು ಹಿಡಿಸಲು ಪ್ರಯತ್ನ ಮಾಡಿದ್ದ ಆದರೆ ಮೊಲ ಸಿಕ್ಕಿರಲಿಲ್ಲ. ಮೋತಿ ಮತ್ತೆ ಅಲ್ಲಿಗೆ ಹೋಗಿರಬಹುದೇ? ವಿಚಾರಿಸುತ್ತಾ ನಿಂತ. ಗಾಡಿ ಬಂದಿತು, ಡ್ರೈವರನಿಗೆ 'ರಿಂಗ್' ಕೊಡುವದನ್ನೇ ಮರೆತಿದ್ದ ರಾಚಪ್ಪ. ಸ್ಟೇಶನ್ ಮಾಸ್ತರ್ ಮನಬಂದಂತೆ ಬೈದ. ಎಲ್ಲವನ್ನೂ ನುಂಗಿಕೊಂಡು ರಾಚಪ್ಪ ಹೇಗೆ ಹೇಗೋ ಅಂದಿನ ತನ್ನ ಆಗಿನ ಡ್ಯೂಟಿ ಮುಗಿಸಿದ. ಮತ್ತೆ ಅದೇ ಧ್ಯಾನ, ಮೋತಿ ಎಲ್ಲಿ? ಬಯಸುತ್ತಿದ್ದ ಸ್ಟೇಶನ್ ಮಾಸ್ತರನೆದುರು ನಿಲ್ಲುವದು ಕಷ್ಟವಾಗಿ ಹೋಯಿತು. ಅವನು ಹಾಗೆಯೇ ಪೂಲಿನ ಕಡೆಗೆ ಹೊರಟ. ಜಿಟಿ ಜಿಟಿ ಮಳೆ ಹತ್ತಿತ್ತು. ನೆಲವೆಲ್ಲ ರೊಜ್ಜಾಗಿ ಮಳೆಯಲ್ಲಿ ಹೋಗಲಿಕ್ಕೆ ಮನಸ್ಸನ್ನು ಹಿಂಜರಿಸುತ್ತಿತ್ತು. ಆದರೂ ನಡೆದ. ಪೂಲಿನ ಸಮೀಪಕ್ಕೆ ಬಂದ....... "ಹಾ....! ಅಯ್ಯೋ! .. !!" ಚೀರಿದ ರಾಚಪ್ಪ... ಧಾನಿಸಿ ಅಲ್ಲಿ ಬಿದ್ದಿದ್ದ ನಾಯಿಯ ರುಂಡವೊಂದನ್ನು ಕೈಯಲ್ಲಿ ತೆಗೆದುಕೊಂಡು ಒರೆಸಿದ, ಮುತ್ತಿಟ್ಟ. ಪರಿಪರಿಯಾಗಿ ಅದರ ಗುಣ ವರ್ಣನೆ ಮಾಡಿ ಹಾಡಿ ಹಾಡಿ ಅತ್ತ. ಆದರೆ– ಗಾಡಿಯ ಬಾಯಿಗೆ ಬಿದ್ದ ಮೋತಿ ಅವನ ಹತ್ತರ ಜೀವಂತ ಬರಲಿಕ್ಕೆ ಸಾಧ್ಯವೆ? ಅಗಲೇ ಪೂರ್ಣ ಬೆಳಗಾಗಿತ್ತು. ಸ್ಟೇಶನದಲ್ಲಿಯ ಜನರೂ ಅಲ್ಲಿಗೆ ಬಂದರು. ಹತ್ತಿರದ ಹೊಲಗಳಿಗೆ ಗಳೆ ಹೂಡಿಕೊಂಡು ಬಂದ ರೈತರೂ ಅಲ್ಲಿಯೇ ತಮ್ಮ ತಮ್ಮ ಗಳೆ ಬಿಟ್ಟು ಓಡಿ ಬಂದರು. ಕೆಲವರು ರಾಚಪ್ಪನನ್ನು ನೋಡಿ –ಅವನ ಕರುಣಾಜನಕ ಹೃದಯವನ್ನು ಕಂಡು ಮರುಗಿದರು. ಎಷ್ಟೋ ಜನ ಅವನ ತಿಳಿಗೇಡಿತನಕೆ ಅಸಹ್ಯಪಟ್ಟುಕೊಂಡರು. ಅವನಿಗೆ ತಿರಸ್ಕಾರ ಸೂಚಕ ಮಾತನಾಡಿದರು ಯಾರು ಏನೆಂದರೂ ರಾಚಪ್ಪ ಮುಖ ಮೇಲೆತ್ತಿ ಯಾರೊಬ್ಬರಿಗೂ ಉತ್ತರ ಕೊಟ್ಟನೆ? ಇಲ್ಲ! ಸಿಟ್ಟೆಂದು ಬಾಯಿ ತೆರೆದು ಉತ್ತರ ಕೊಡಲಿಲ್ಲ. ಸುಮ್ಮನೇ ನಾಯಿಯ ರುಂಡವನ್ನು ಪರಿ ಪರಿಯಾಗಿ ನೋಡುವದೇ ಅವನ ಕೆಲಸವಾಗಿತ್ತು. ಎಷ್ಟು ನೆಟ್ಟ ನೋಟದಿಂದ ನೋಡಿದರೂ ಅರುಂಡ ಅವನಿಗೆ ಅಸಹ್ಯವಾಗಿ ತೋರಲಿಲ್ಲ. ಆ ರುಂಡದಲ್ಲಿಯೇ ತನ್ನ ಜೀವಂತ ಮೋತಿಯನ್ನು ಕಂಡ. ಅದ ರೊಡನೆ ಮಾತನಾಡಿದ ಮೌನವಾಗಿ! ಕಣ್ಣೀರು ಧಾರೆ ಧಾರೆಯಾಗಿ ಹರಿಯತೊಡಗಿದವು. ಅವನ ಹರಕ ಧೋತರದ ಮೇಲೆಲ್ಲ ಬಿದ್ದ ಮಳೆಯ ಹನಿಗಳಿಗಿಂತ ಕಣ್ಣೀರಹನಿಗಳೇ ಹೆಚ್ಚು ಅದನ್ನು ತೋಯಿಸಿದವು.

"ಅಯ್ಯೋ ಅಯ್ಯಯ್ಯೋ!" ಒಮ್ಮೆಲೇ ಕಿರುಚುತ್ತಾ ಎದ್ದ ರಾಚಪ್ಪ, "ಎಂಥಾ ಊತಾ ಪಟ್ಟಿರಬೇಕ್ರೀ!.. ಈ ನನ್ನ ಮಗಳು .... ಗಾಡಿ ಮೈಮ್ಯಾಲ ಹಾದಾಗ.... ! ನನ್ನ ನೆನಸಿರಾಕಿಲ್ಲೇನ್ರೀ? ಮೊದಲ್ನೆ ಗಾಲಿ ಹಾದಗಳಿಗೇ ಪಾರ ಆಗಿ ಬರಾಕ ಶರಾಬಾನೂ ಉಳಿದಿರಾಕಿಲ್ರೀ! ಯಾವ ಕೈರೀ ಇವು? ನರಕದ ಕೈ! ಸಿಂಗ್ನಲ್ ಎಳದು ಬಿಟ್ಟವು. ಅಲ್ಲಿ ನಿನ್ನ ನಾಯಿ ಐತಿ ಅದನ್ನೋಟು ಕರಿಯಲೇ... ಅಂತಾ ಹೇಳಬಾರದೇನ್ರೀ ಈ ಮನಸು? ಅದಕ್ಕ ಗಾಡೀ ನಿಂತಿರಬೇಕ್ರೀ ಮೊದಲ. ಅಯ್ಯಯ್ಯೊ....! ಹಣೆ ಹಣೆ ಗಟ್ಟಿಸಿಕೊಂಡು ದೊಡ್ಡ ದನಿ ತೆಗೆದು ಅಳಲು ಶುರುವು ಮಾಡಿದ. ಹೊತ್ತೇರಿತು ಜನರೆಲ್ಲರೂ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತ ಮಾಡುತ್ತ ತಮ್ಮ ತಮ್ಮ ಕೆಲಸಗಳಿಗೆ ಹೋದರು. ರಾಚಪ್ಪ ಮಾತ್ರ ಅಲ್ಲಿಯೇ ಅಳುತ್ತ ಕೂತಿದ್ದ—...... ಇದಾಗಿ ನಾಲ್ಕೈದು ದಿನಗಳ ನಂತರ ರಾಚಪ್ಪ ನಾಪತ್ತೆಯಾಗಿಬಿಟ್ಟಿದ್ದ.

"ಶ್ಯ...." ನಿಟ್ಟುಸಿರಿಟ್ಟ ನಾಣ. ಕಪ್ಪಎಸೂ, ಜೀವನದಲ್ಲಿ ಯಾವ ವಸ್ತುವನ್ನೂ ಅತಿಯಾಗಿ ಮೋಹಿಸಬಾರದು. ಪಾಪ! ರಾಚಪ್ಪನ ಗತಿ ನೋಡು! ಮುಂದೇನಾಯಿತು?" ಎಂದ.

"ಆ ಮೇಲೆ" ರಂಗ ಪ್ರಾರಂಭಿಸಿದ, "ಐದನೆಯ ದಿನ ನಮ್ಮ ಮನೆಯ ಮುಂದೆಯೇ ರಾಚಪ್ಪ ನನಗೆ ಕಾಣಿಸಿಕೊಂಡದ್ದು. ಕೈಯಲ್ಲಿ ಒಂದು ನಾಯಿಯ ತಲೆ ಬುರುಡೆ. ಮೋತೀ .. ಮೋತೀ .... ಅನ್ನುತ್ತ ಮುತ್ತಿಡುತ್ತಿದ್ದ. ಅಯ್ಯೋ... ಅವನಿಗೆ ಹುಚ್ಚೇ ಹಿಡಿಯಿತು! ಎಂದು ತಾಯಿಗೆ ಕಾಣಿಯುವರೆಗೆ ಕರೆದು ತೋರಿಸಿದೆ. ಅಷ್ಟರಲ್ಲಿಯೇ ಆಕಡೆಯಿಂದ ನಾಯಿಯೊಂದು ಓಡಿ ಬಂತು.... "ಬಂದೆ .... ಬಂದೆ ... ಮೋತೀ ... ಮೋತೀ...." ಎನ್ನುತ್ತ ಓಡಿಯೇ ಬಿಟ್ಟ ರಾಚಪ್ಪ. ಪಾಪ.! ಹೀಗೆಯೇ ಊರಿನಲ್ಲಿ ಯಾವ ನಾಯಿಯನ್ನು ಕಂಡರೂ ಓಡಿ ಓಡಿ ಅವುಗಳ ಹತ್ತಿರ ಹೋಗಿ ಅವುಗಳಿಗೆ ಮಾತಾಡಿ ಮುತ್ತಿಟ್ಟು ಬರುತ್ತಿದ್ದ ರಾಚಪ್ಪ. ಆದರೆ ಈಗ ಏನಾಗಿದೆಯೋ! ಪಾಪ. ಸಾಯುತ್ತ ಬಿದ್ದಿದ್ದಾನೆ! ಎನ್ನುತ್ತ ರಂಗ ತನ್ನ ಕತೆ ಮುಗಿಸಿದ, ನಾಣಗೆ ಕಣ್ಣಲ್ಲ ನೀರೂರಿದ್ದವು. ಇಬ್ಬರಿಗೂ ಆಡ್ತಾ ಡತ್ತ ಎಲ್ಲಿಗ ಬಂದಿರುವೆವೆಂಬುದು ಕೂಡ ತಿಳಿದಿರಲಿಲ್ಲ.

ವಾರದ ಭವಿಷ್ಯ

(೧೫ ನೇ ಪುಟದಿಂದ ಮುಂದರಿದುದು)

ಕುಂಭ

ಪ್ರಕೃತಿ ಸಾಧಾರಣವೇ. ಹೆಂಡತಿಯೊಡನೆ ಮೇಲಿಂದ ಮೇಲೆ ವಿರೋಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖವು ಸಾಧಾರಣ. ಉದ್ಯೋಗದಲ್ಲಿ ಪ್ರಗತಿ. ಪ್ರತಿಷ್ಠೆ, ಲಾಭ ಎಲ್ಲ ಉತ್ತಮ. ಆದರೆ ಖರ್ಚು ಬಹಳ. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕಾರ್ಯಗಳು ಅನುಕೂಲ. ಶತತಾರಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದಾದ ಮೊದಲಿನ ೨ ಚರಣದವರಿಗೆ ತೊಂದರೆಯಿಂದಲೇ ಯಶ. ತಾ. ೨೪, ೨೫, ೨೬, ೩೦ ಇವು ಒಳ್ಳೆಯವು.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖವು ಉತ್ತಮ. ಉಳಿದ ಪ್ರಾಪಂಚಿಕ ವಿಷಯಗಳಲ್ಲಿ ಬಹಳ ತೊಂದರೆ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಲಾಭ ಇವು ಅತ್ಯುತ್ತಮ. ಆದರೆ ಬಹುತರ ಎಲ್ಲ ಕಾರ್ಯಗಳಲ್ಲಿಯೂ ಇಮ್ಮಡಿ ವೆಚ್ಚವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಒಳ್ಳೆ ಯಶ. ಪ್ರವಾಸಕ್ಕಿಂತ ಭೆಟ್ಟಿ ಪತ್ರವ್ಯವಹಾರ ಹೆಚ್ಚು ಉತ್ತಮ. ಉತ್ತರಾ ಭಾದ್ರಪದಾದ ಕೊನೆಯ ೨ ಮತ್ತು ಸ್ವಾತಿಯ ಮೊದಲಿನ ೨ ಚರಣದವರಿಗೆ ತ್ರಾಸ ಕಡಿಮೆ. ತಾ ೨೪, ೨೫, ೨೬, ೨೭ ಈ ದಿನಗಳು ಉತ್ತಮವಾಗಿವೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿಸಿ ಪ್ರಕಟಿತವಾಯಿತು.